ಸೋಮವಾರ, ಮೇ 11, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿಣ್ಣರ ಸಂಭ್ರಮ

ಮೈಸೂರು ರಂಗಾಯಣ ಆಯೋಜಿಸಿದ್ದ ಚಿಣ್ಣರ ಮೇಳದ ಬೇಸಿಗೆ ಶಿಬಿರದಲ್ಲಿ ಬಾಲಕನೊಬ್ಬ ಮುಖಕ್ಕೆ ಬಣ್ಣ ಹಚ್ಚಿಸಿಕೊಂಡ ದೃಶ್ಯ

ನೀಮನ್ ಚಾಂಪಿಯನ್

ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ಅವರು ಪೋಲೆಂಡ್‌ನ ವಾರ್ಸಾದಲ್ಲಿ ನಡೆದ ಸೂಪರ್ ರ್‍ಯಾಪಿಡ್ ಮತ್ತು ಬ್ಲಿಟ್ಝ್ ಚೆಸ್ ಟೂರ್ನಿಯ ಚಾಂಪಿಯನ್ ಆಗಿ ಹೊರ ಹೊಮ್ಮಿದರು

‘ಪೆಟ್ರೋಲ್, ಡೀಸೆಲ್ ಬಳಕೆ ತಗ್ಗಿಸಿ’

ದೇಶದ ಜನರಲ್ಲಿ ಪ್ರಧಾನಿ ನರೇಂದ್ರ ಮೋದಿ ಮನವಿ

ಹೈದರಾಬಾದ್ (ಪಿಟಿಐ): ‘ಪೆಟ್ರೋಲ್, ಅನಿಲ, ಡೀಸೆಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬಳಕೆಯನ್ನು ಮಿತಗೊಳಿಸಿ. ಅಗತ್ಯವಿದ್ದರೆ ಮಾತ್ರವೇ ಇವುಗಳನ್ನು ಬಳಸಬೇಕು. ಇದು ಈ ಹೊತ್ತಿನ ಜರೂರು. ಭಾರತವು ಇಂದು ಜಗತ್ತಿನಲ್ಲಿಯೇ ಅತ್ಯಂತ ಇಂಧನ ಬಿಕ್ಕಟ್ಟು ಎದುರಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಲ್ಲಿ ಮನವಿ ಮಾಡಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಇಲ್ಲಿ ಮಾತನಾಡಿದ ಅವರು, ‘ಪೆಟ್ರೋಲ್, ಡೀಸೆಲ್ ಮತ್ತು ಅನಿಲದ ಬಳಕೆ ಕಡಿಮೆ ಮಾಡುವುದರಿಂದ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಕೆಟ್ಟ ಪರಿಣಾಮವನ್ನು ತಡೆಯಬಹುದಾಗಿದೆ. ಇದು ನಮ್ಮ ವಿದೇಶಿ ವಿನಿಮಯವನ್ನೂ ಉಳಿಸುತ್ತದೆ’ ಎಂದರು.

‘ಸೌರ ಶಕ್ತಿ ಬಳಕೆ ವಿಚಾರದಲ್ಲಿ ಭಾರತವು ಜಗತ್ತಿನಲ್ಲಿ ಇತರೆ ಕೆಲವು ದೇಶಗಳೊಂದಿಗೆ ಮುಂಚೂಣಿಯಲ್ಲಿದೆ. ಪೆಟ್ರೋಲ್‌ಗೆ ಎಥೆನಾಲ್ ಸೇರಿಸುವ ಕಾರ್ಯವು ತೀವ್ರಗತಿಯಲ್ಲಿದೆ. ದೇಶದಲ್ಲಿ ಶೇ 100ರಷ್ಟು ಎಲ್‌ಪಿಜಿ ಸಂಪರ್ಕ ಕಲ್ಪಿಸಲು ಮೊದಲು ಗಮನ ಹರಿಸಲಾಯಿತು. ಈಗ ಅನಿಲವನ್ನು ಕೊಳವೆ ಮೂಲಕ ಪೂರೈಕೆ ಮಾಡುವ ಬಗ್ಗೆ ಗಮನ ನೀಡಲಾಗಿದೆ. ಸಿಎನ್‌ಜಿ ಆಧಾರಿದ ವ್ಯವಸ್ಥೆಗೂ ಸರ್ಕಾರ ಉತ್ತೇಜನ ನೀಡುತ್ತಿದೆ. ಈ ಎಲ್ಲ ಕ್ರಮಗಳ ಬಳಿಕವೂ ದೇಶವು ಇಂಧನ ಬಿಕ್ಕಟ್ಟು ಎದುರಿಸುತ್ತಿದೆ’ ಎಂದು ಹೇಳಿದರು.

‘ದೇಶಭಕ್ತಿ ಭಾವನೆಯಲ್ಲಿ ಸಂಪನ್ಮೂಲ ಉಳಿಸಿ’

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದ ಇಡೀ ಜಗತ್ತೇ ಸಂಕಷ್ಟ ಎದುರಿಸುತ್ತಿದೆ. ಭಾರತ ಇದಕ್ಕೆ ಹೊರತಾಗಿಲ್ಲ. ಆದ್ದರಿಂದ, ದೇಶದ ಸಂಪನ್ಮೂಲಗಳನ್ನು ಉಳಿಸಬೇಕು. ದೇಶದ ಹಿತವನ್ನು ರಕ್ಷಿಸಲೇಬೇಕು. ಕೊರೊನಾ ಕಾಲದಲ್ಲಿ ನಾವೆಲ್ಲರೂ ಹೇಗೆ ಒಗ್ಗೂಡಿ ಸಂಕಟಗಳನ್ನು ಎದುರಿಸಿದ್ದೆವೋ ಅದೇ ರೀತಿಯಲ್ಲಿ ದೇಶಭಕ್ತಿಯ ಭಾವನೆಯಲ್ಲಿ ಮತ್ತೊಮ್ಮೆ ದೇಶವನ್ನು ಅಂತರರಾಷ್ಟ್ರೀಯ ಮಟ್ಟದ ಈಗಿನ ಸಂಕಟದಿಂದ ಹೊರತರಲು ಒಗ್ಗೂಡಲೇಬೇಕು

ನರೇಂದ್ರ ಮೋದಿ,
ಪ್ರಧಾನಿ (ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ತುಣುಕು)

ತೈಲ ಕಂಪನಿಗಳಿಗೆ ₹1 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ತೈಲೋತ್ಪನ್ನಗಳ ಬೆಲೆಯನ್ನು ಹೆಚ್ಚು ಮಾಡದೆ ಇರುವ ಪರಿಣಾಮವಾಗಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಕಳೆದ 10 ವಾರಗಳಲ್ಲಿ ₹1 ಲಕ್ಷ ಕೋಟಿಗೂ ಹೆಚ್ಚು ನಷ್ಟ ಕಂಡಿವೆ ಎಂದು ಮೂಲಗಳು ತಿಳಿಸಿವೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು.

ಇಸ್ರೇಲ್ ಮತ್ತು ಅಮೆರಿಕ ಒಟ್ಟಾಗಿ ಇರಾನ್ ವಿರುದ್ಧ ಫೆಬ್ರುವರಿ 28ರಂದು ಯುದ್ಧ ಆರಂಭಿಸಿದ ನಂತರದಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಕಂಡಿದ್ದರೂ, ಈ ಕಂಪನಿಗಳು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಗ್ರಾಹಕರಿಗೆ ಪೆಟ್ರೋಲ್, ಡೀಸೆಲ್ ಮತ್ತು ಮನೆಬಳಕೆಯ ಅಡುಗೆ ಅನಿಲವನ್ನು ಪೂರೈಸುತ್ತಿವೆ. ಆದರೆ, ಬೇರೆ ಕೆಲವು ದೇಶಗಳಲ್ಲಿ ಬೆಲೆ ಹೆಚ್ಚಳವನ್ನು ಗ್ರಾಹಕರಿಗೆ ಈಗಾಗಲೇ ವರ್ಗಾಯಿಸಲಾಗಿದೆ.

ಈ ಕಂಪನಿಗಳು ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಮಾರಾಟದಿಂದ ದಿನಕ್ಕೆ ಅಂದಾಜು ₹1,600 ಕೋಟಿಯಿಂದ ₹1,700 ಕೋಟಿಯಷ್ಟು ನಷ್ಟ ಕಾಣುತ್ತಿವೆ. ಇದರ ಒಟ್ಟು ಮೊತ್ತವು ಕಳೆದ 10 ವಾರದಲ್ಲಿ ₹1 ಲಕ್ಷ ಕೋಟಿಗೂ ಅಧಿಕವಾಗಿದೆ. ಬಂಡವಾಳದ ಅಗತ್ಯಕ್ಕಾಗಿ (ಅಂದರೆ ಕಚ್ಚಾತೈಲ ಖರೀದಿಗೆ ಬೇಕಿರುವ ಹಣಕ್ಕಾಗಿ) ಕಂಪನಿಗಳು ಸಾಲ ಮಾಡಬೇಕಾಗಬಹುದು ಎಂದು ಗೊತ್ತಾಗಿದೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುವುದು ಈಗ ಸರ್ಕಾರ ತೆಗೆದುಕೊಳ್ಳಬೇಕಾದ ನಿರ್ಧಾರವಾಗಿದೆ ಎಂದು ಪ್ರತ್ಯೇಕ ಮೂಲವೊಂದು ಹೇಳಿದೆ. ಇಂಧನ ಬೆಲೆ ಏರಿಕೆ ಅನಿವಾರ್ಯ ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಹೆಚ್ಚಳದ ಸಮಯ ಮತ್ತು ಪ್ರಮಾಣವನ್ನು ಸರ್ಕಾರ ನಿರ್ಧರಿಸಬೇಕು ಎಂದು ಮೂಲವು ತಿಳಿಸಿದೆ.

ಹೂಡಿಕೆ ಬುಟ್ಟಿಯಲ್ಲಿ ಎಷ್ಟು ಮೊಟ್ಟೆ ಇರಬೇಕು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

‘ಎಲ್ಲ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡಬೇಡಿ’ ಎಂಬ ಮಾತು ಹೂಡಿಕೆ ಲೋಕಕ್ಕೆ ಅನ್ವಯಿಸುತ್ತದೆ. ಆದರೆ ‘ಹೂಡಿಕೆಯ ಬುಟ್ಟಿಯಲ್ಲಿ ಎಷ್ಟು ಮೊಟ್ಟೆಗಳಿರಬೇಕು’ ಎಂಬ ಪ್ರಶ್ನೆಯೂ ಇದೆ. ಅನೇಕ ಹೂಡಿಕೆದಾರರು 40ರಿಂದ 50 ಕಂಪನಿಗಳ ಷೇರುಗಳನ್ನು ಖರೀದಿಸಿದರೆ ತಮ್ಮ ಹೂಡಿಕೆ ಸಂಪೂರ್ಣ ಸುರಕ್ಷಿತ ಎಂದು ನಂಬುತ್ತಾರೆ. ಹಣಕಾಸು ತಜ್ಞರ ಪ್ರಕಾರ, ಅತಿಯಾದ ಹೂಡಿಕೆ ವೈವಿಧ್ಯತೆಯು ಲಾಭದ ಬದಲು ಸಂಕಷ್ಟವನ್ನೇ ತಂದೊಡ್ಡಬಹುದು. ಹಾಗಾದರೆ, ಒಬ್ಬ ಹೂಡಿಕೆದಾರನ ಬಳಿ ಇರಬೇಕಾದ ಷೇರುಗಳ ಸಂಖ್ಯೆ ಎಷ್ಟು?

ಅಪಾಯಗಳ ನಿರ್ವಹಣೆ ಹೇಗೆ?: ಷೇರು ಮಾರುಕಟ್ಟೆಯಲ್ಲಿ ಪ್ರಮುಖವಾಗಿ ಎರಡು ರೀತಿಯ ಅಪಾಯಗಳನ್ನು ಎದುರಿಸುತ್ತೇವೆ. ಮೊದಲನೆಯದು ಅಪರಿಮಿತ ಅಪಾಯ. ಇದು ಕೇವಲ ಒಂದು ನಿರ್ದಿಷ್ಟ ಕಂಪನಿಯ ಆಂತರಿಕ ಸಮಸ್ಯೆಗಳಾದ ಮ್ಯಾನೇಜ್‌ಮೆಂಟ್ ಹಗರಣ, ಲಾಭದಲ್ಲಿ ಕುಸಿತ ಅಥವಾ ಉತ್ಪನ್ನದ ವೈಫಲ್ಯಕ್ಕೆ ಸೀಮಿತವಾಗಿರುತ್ತದೆ. ಇಂತಹ ಅಪಾಯವನ್ನು ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡುವ ಮೂಲಕ ಸುಲಭವಾಗಿ ನಿಯಂತ್ರಿಸಬಹುದು. ಎರಡನೆಯದು ವ್ಯವಸ್ಥಿತ ಅಪಾಯ. ಇದು ಇಡೀ ಮಾರುಕಟ್ಟೆಯ ಮೇಲೆ ಪ್ರಭಾವ ಬೀರುವ ಹಣದುಬ್ಬರ, ಯುದ್ಧ ಅಥವಾ ಬಡ್ಡಿದರ ಏರಿಕೆಯಂತಹ ಜಾಗತಿಕ ವಿದ್ಯಮಾನಗಳಾಗಿದ್ದು, ಇದನ್ನು ವೈವಿಧ್ಯೀಕರಣದಿಂದ ತಪ್ಪಿಸಲು ಸಾಧ್ಯವಿಲ್ಲ. ದೊಡ್ಡ ಕಂಪನಿಗಳ ಷೇರುಗಳು ಸಹ ನೆಲ ಕಚ್ಚುತ್ತವೆ. ಇಂತಹ ಸಂದರ್ಭದಲ್ಲಿ ಹೂಡಿಕೆದಾರರು ಕೇವಲ ‘ಹೆಡ್ಜಿಂಗ್ ತಂತ್ರ’ಗಳ ಮೂಲಕ ತಮ್ಮ ಹೂಡಿಕೆಯನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ.

20 ಷೇರುಗಳ ಮ್ಯಾಜಿಕ್ ಸಂಖ್ಯೆ: ಹಣಕಾಸು ಸಂಶೋಧನೆಗಳ ಪ್ರಕಾರ, 15ರಿಂದ 20 ಉತ್ತಮ ಗುಣಮಟ್ಟದ ಷೇರುಗಳನ್ನು ಹೊಂದಿದ್ದರೆ ನಿಮ್ಮ ಪೋರ್ಟ್‌ಫೋಲಿಯೊದ ಶೇ 90ರಷ್ಟು ಅನ್‌-ಸಿಸ್ಟಮ್ಯಾಟಿಕ್ ಅಪಾಯವು ಇಲ್ಲವಾಗುತ್ತದೆ. ನಿಮ್ಮ ಬಳಿ 20 ಕಂಪನಿಗಳ ಷೇರುಗಳಾದ ಮೇಲೆ ನೀವು 21ನೇ ಕಂಪನಿಯ ಷೇರನ್ನು ಸೇರಿಸಿದಾಗ, ನಿಮ್ಮ ಅಪಾಯವೇನೂ ಗಣನೀಯವಾಗಿ ಕಡಿಮೆಯಾಗುವುದಿಲ್ಲ. ಬದಲಿಗೆ, ಅಷ್ಟು ಕಂಪನಿಗಳಿಗೆ ಸಂಬಂಧಿಸಿದ ವಿದ್ಯಮಾನಗಳ ಮೇಲೆ ಗಮನ ಇರಿಸುವುದು ನಿಮಗೆ ತಲೆನೋವಾಗಿ ಪರಿಣಮಿಸುತ್ತದೆ. ಹೆಚ್ಚಿನ ಕಂಪನಿಗಳ ಷೇರುಗಳನ್ನು ಹೊಂದುವುದರಿಂದ ನಿಮ್ಮ ಪೋರ್ಟ್‌ಫೋಲಿಯೊ ಒಟ್ಟಾರೆ ಮಾರುಕಟ್ಟೆಯ ಸೂಚ್ಯಂಕದಂತೆ ವರ್ತಿಸಲು ಶುರು ಮಾಡುತ್ತದೆ. ಇದರಿಂದ ಸರಾಸರಿಗಿಂತ ಹೆಚ್ಚಿನ ಲಾಭ ಗಳಿಸುವ ನಿಮ್ಮ ಆಸೆ ಕೈಗೂಡದಿರಬಹುದು.

ಅತಿಯಾದ ಸಂಖ್ಯೆ ಏಕೆ ಅಪಾಯಕಾರಿ?: ಹೂಡಿಕೆ ಎನ್ನುವುದು ಹಣ ಹಾಕಿ ಸುಮ್ಮನೆ ಕೂರುವುದಲ್ಲ. ನೀವು ಹೂಡಿಕೆ ಮಾಡಿದ ಕಂಪನಿಗಳ ಪ್ರಗತಿಯನ್ನು ನಿರಂತರವಾಗಿ ಗಮನಿಸುವುದು ಅಗತ್ಯ. ಸಾಮಾನ್ಯ ಹೂಡಿಕೆದಾರನಿಗೆ 50 ಕಂಪನಿಗಳ ತ್ರೈಮಾಸಿಕ ವರದಿಗಳು, ಆಡಳಿತ ಮಂಡಳಿಯ ನಿರ್ಧಾರಗಳು ಮತ್ತು ಮಾರುಕಟ್ಟೆಯ ಸುದ್ದಿಗಳ ಮೇಲೆ ನಿಗಾ ಇಡುವುದು ಅಸಾಧ್ಯದ ಮಾತು. 20ಕ್ಕಿಂತ ಹೆಚ್ಚು ಕಂಪನಿಗಳ ಷೇರುಗಳನ್ನು ಹೊಂದಿದ್ದರೆ, ಯಾವುದೋ ಒಂದು ಕಂಪನಿ ಸಂಕಷ್ಟಕ್ಕೆ ಸಿಲುಕಿದಾಗ ಸಮಯಕ್ಕೆ ಸರಿಯಾಗಿ ನಿರ್ಧಾರ ತೆಗೆದುಕೊಳ್ಳಲು ಹೂಡಿಕೆದಾರರು ವಿಫಲರಾಗಬಹುದು. ಬದಲಿಗೆ, 15-20 ಕಂಪನಿಗಳ ಮೇಲೆ ಸಂಪೂರ್ಣ ಗಮನವಿಟ್ಟರೆ, ಅವುಗಳ ವ್ಯವಹಾರದ ಏರಿಳಿತಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಹೂಡಿಕೆ ಮಾಡಿದ ಕಂಪನಿಗಳ ಸಂಖ್ಯೆ ಕಡಿಮೆಯಿದ್ದಷ್ಟೂ, ಹೂಡಿಕೆದಾರರ ನಿರ್ಧಾರಗಳಲ್ಲಿ ಸ್ಪಷ್ಟತೆ ಇರುತ್ತದೆ ಮತ್ತು ಅನಗತ್ಯ ನಷ್ಟದಿಂದ ಪಾರಾಗುವುದು ಸುಲಭವಾಗುತ್ತದೆ.

ಮೇಲ್ನೋಟದ ವೈವಿಧ್ಯೀಕರಣ ಬೇಡ: ಬಹಳಷ್ಟು ಮಂದಿ ಐದು ವಿಭಿನ್ನ ಬ್ಯಾಂಕ್‌ಗಳ ಷೇರುಗಳನ್ನು ಖರೀದಿಸಿ, ‘ಹೂಡಿಕೆ ವೈವಿಧ್ಯಮಯವಾಗಿದೆ’ ಎಂದು ಬೀಗುತ್ತಾರೆ. ಆದರೆ ಇದು ತಪ್ಪು. ಆರ್ಥಿಕತೆಯಲ್ಲಿ ಬದಲಾವಣೆಯಾದಾಗ ಎಲ್ಲ ಬ್ಯಾಂಕುಗಳೂ ಒಟ್ಟಿಗೇ ಏರಬಹುದು ಅಥವಾ ಬೀಳಬಹುದು. ನಿಜವಾದ ವೈವಿಧ್ಯೀಕರಣ ಎಂದರೆ ಪರಸ್ಪರ ಸಂಬಂಧವಿಲ್ಲದ ವಲಯಗಳಲ್ಲಿ ಹೂಡಿಕೆ ಮಾಡುವುದು. ಹೂಡಿಕೆ ಬುಟ್ಟಿಯಲ್ಲಿ ಬ್ಯಾಂಕಿಂಗ್ ಜೊತೆಗೆ ಮಾಹಿತಿ ತಂತ್ರಜ್ಞಾನ, ಔಷಧ, ಎಫ್‌ಎಂಸಿಜಿ ಮತ್ತು ತಯಾರಿಕಾ ವಲಯದ ಕಂಪನಿಗಳೂ ಇರಲಿ. ಒಂದಕ್ಕೊಂದು ಸಂಬಂಧವಿಲ್ಲದ ವಲಯಗಳು ಹೂಡಿಕೆಗೆ ಸಮತೋಲನ ನೀಡುತ್ತವೆ. ಒಂದು ವೇಳೆ ಒಂದು ವಲಯ ಸಂಕಷ್ಟಕ್ಕೆ ಸಿಲುಕಿದರೆ, ಬೇರೆ ವಲಯದ ಷೇರುಗಳು ಕಾಪಾಡುತ್ತವೆ.

ಹೂಡಿಕೆಯಲ್ಲಿ ಯಶಸ್ವಿಯಾಗಲು ಕೆಲವು ಶಿಸ್ತುಬದ್ಧ ನಡೆಗಳನ್ನು ಪಾಲಿಸುವುದು ಅಗತ್ಯ. ಮೊದಲನೆಯದಾಗಿ, ಅರ್ಥವಾಗದ ಉದ್ಯಮಗಳಲ್ಲಿ ಹಣ ತೊಡಗಿಸಬಾರದು. ಎರಡನೆಯದಾಗಿ, ಯಾವುದೇ ಒಂದು ಕಂಪನಿಯ ಷೇರಿನಲ್ಲಿ ಒಟ್ಟು ಹೂಡಿಕೆಯ ಶೇ 10ಕ್ಕಿಂತ ಹೆಚ್ಚು ಹಣ ತೊಡಗಿಸಬಾರದು. ಹಾಗೆಯೇ, ಒಂದು ನಿರ್ದಿಷ್ಟ ವಲಯಕ್ಕೆ ಪೋರ್ಟ್‌ಫೋಲಿಯೊದ ಶೇ 20ಕ್ಕಿಂತ ಹೆಚ್ಚು ಪಾಲು ನೀಡಬಾರದು. ಒಂದು ವೇಳೆ ಯಾವುದಾದರೂ ಒಂದು ವಲಯದ ಬಗ್ಗೆ ಆಳವಾದ ಜ್ಞಾನವಿಲ್ಲದಿದ್ದರೆ, ನೇರವಾಗಿ ಷೇರು ಖರೀದಿಸುವ ಬದಲು ಮ್ಯೂಚುವಲ್ ಫಂಡ್ ಅಥವಾ ಇಟಿಎಫ್ ಮೂಲಕ ಹೂಡಿಕೆ ಮಾಡುವುದು ಜಾಣತನ.

ಹೂಡಿಕೆದಾರರು ಷೇರುಗಳ ಸಂಗ್ರಹಕಾರರಲ್ಲ, ಬದಲಿಗೆ ಲಾಭ ಗಳಿಸುವ ಉದ್ದೇಶ ಇರುವವರು. ಅತಿಯಾದ ಷೇರುಗಳು ಹೂಡಿಕೆದಾರರ ಗಮನವನ್ನು ಚದುರಿಸುತ್ತವೆ ಮತ್ತು ಪೋರ್ಟ್‌ಫೋಲಿಯೊದ ಗುಣಮಟ್ಟವನ್ನು ಕುಂದಿಸುತ್ತವೆ. 15ರಿಂದ 20 ಅತ್ಯುತ್ತಮ ಕಂಪನಿಗಳನ್ನು ಆರಿಸಿ, ಅವುಗಳ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿ, ಮಾರುಕಟ್ಟೆಯ ಅನಿಶ್ಚಿತತೆಯಿಂದ ರಕ್ಷಿಸಿಕೊಳ್ಳಲು ಹೆಡ್ಜಿಂಗ್ ತಂತ್ರಗಳನ್ನು ಕಲಿಯಬೇಕು. ಚಿಕ್ಕ-ಚೊಕ್ಕ ಪೋರ್ಟ್‌ಫೋಲಿಯೊ ದೀರ್ಘಕಾಲದ ಶ್ರೀಮಂತಿಕೆಗೆ ರಾಜಮಾರ್ಗ

ಆಸ್ತಿ ವರ್ಗಗಳಲ್ಲಿಯೂ ವೈವಿಧ್ಯ ಇರಲಿ

ಪೋರ್ಟ್‌ಫೋಲಿಯೊ ನಿರ್ವಹಣೆಯಲ್ಲಿ ಷೇರುಗಳ ಸಂಖ್ಯೆಯನ್ನು ನೋಡುವುದು ಒಂದು ಮಗ್ಗುಲಾದರೆ, ಹಣವನ್ನು ವಿವಿಧ ಆಸ್ತಿ ವರ್ಗಗಳಲ್ಲಿ ಹಂಚುವುದು ಇನ್ನೊಂದು ಪ್ರಮುಖ ಮಗ್ಗುಲು. ಮಾರುಕಟ್ಟೆ ಅತ್ಯಂತ ಅಸ್ಥಿರವಾಗಿದ್ದಾಗ ಅಥವಾ ಆರ್ಥಿಕ ಕುಸಿತದ ಸಮಯದಲ್ಲಿ ಷೇರುಗಳು ಮಾತ್ರವಲ್ಲದೆ ಇಡೀ ಮಾರುಕಟ್ಟೆಯೇ ಕುಸಿಯಬಹುದು. ಇಂತಹ ಸಮಯದಲ್ಲಿ ಹೂಡಿಕೆದಾರರನ್ನು ರಕ್ಷಿಸುವುದು ಬಂಗಾರ, ನಿಶ್ಚಿತ ಠೇವಣಿ (ಎಫ್.ಡಿ) ಅಥವಾ ರಿಯಲ್ ಎಸ್ಟೇಟ್ ಹೂಡಿಕೆಗಳು.

ಉದಾಹರಣೆಗೆ, ಷೇರು ಮಾರುಕಟ್ಟೆ ಬಿದ್ದಾಗ ಸಾಮಾನ್ಯವಾಗಿ ಚಿನ್ನದ ಬೆಲೆ ಏರುತ್ತದೆ. ಹೀಗಾಗಿ ಒಟ್ಟು ಆಸ್ತಿಯಲ್ಲಿ ಶೇ 10ರಿಂದ ಶೇ 15ರಷ್ಟು ಚಿನ್ನ ಅಥವಾ ಸಾಲಪತ್ರಗಳಲ್ಲಿ (ಬಾಂಡ್ಸ್) ಹೂಡಿಕೆ ಮಾಡಿದ್ದರೆ, ಅದು ಪೋರ್ಟ್‌ಫೋಲಿಯೊಗೆ ಒಂದು ಗಟ್ಟಿಯಾದ ಅಡಿಪಾಯದಂತೆ ಕೆಲಸ ಮಾಡುತ್ತದೆ.

WAN-IFRA I COLOR QUALITY CLUB 2026-2028 I V2

ಹೂವಿನ ಕಾಂತಿ

ಪಿಟಿಐ ಚಿತ್ರ

ಪಂಜಾಬ್‌ನ ಪಟಿಯಾಲದ ಹೊಲವೊಂದರಲ್ಲಿ ಸೂರ್ಯಕಾಂತಿ ಹೂ ಅರಳಿದ್ದು ಭಾನುವಾರ ಕಂಡು ಬಂದದ್ದು ಹೀಗೆ...

ಟ್ರಿನಿಡಾಡ್– ಟೊಬಾಗೊ ಜೊತೆ 8 ಒಪ್ಪಂದ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಪ್ರವಾಸೋದ್ಯಮ, ಆರೋಗ್ಯ, ಮೂಲಸೌಕರ್ಯ ಹಾಗೂ ಆಯುರ್ವೇದ ಕ್ಷೇತ್ರದಲ್ಲಿ ಟ್ರಿನಿಡಾಡ್– ಟೊಬಾಗೊ ಜೊತೆ ಭಾರತವು ಎಂಟು ಒಪ್ಪಂದಗಳನ್ನು ಮಾಡಿಕೊಂಡಿದೆ.

ಎಸ್‌. ಜೈಶಂಕರ್

ಕೆರಿಬಿಯನ್ ರಾಷ್ಟ್ರಕ್ಕೆ ಶುಕ್ರವಾರ, ಶನಿವಾರ ಭೇಟಿ ನೀಡಿದ್ದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ ಎಂದು ಭಾರತದ ವಿದೇಶಾಂಗ ಸಚಿವಾಲಯವು ಭಾನುವಾರ ತಿಳಿಸಿದೆ.

ಟ್ರಿನಿಡಾಡ್– ಟೊಬಾಗೊದ ಪ್ರಧಾನಿ ಕಮಲಾ ಪೆಸ್ರಾದ್ ಬಿಸ್ಸೆಸ್ಸರ್ ಹಾಗೂ ಅಲ್ಲಿನ ಹಿರಿಯ ಮುಖಂಡರೊಂದಿಗೆ ಜೈಶಂಕರ್ ಅವರು ಮೂಲಸೌಕರ್ಯ, ಭದ್ರತೆ, ವಿಧಿವಿಜ್ಞಾನ, ಆರೋಗ್ಯ, ಸಾಮರ್ಥ್ಯವರ್ಧನೆಯಲ್ಲಿನ ಸಹಕಾರ ಕುರಿತಂತೆ ದ್ವಿಪಕ್ಷೀಯ ಚರ್ಚೆ ನಡೆಸಿದ್ದಾರೆ ಎಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2025ರಲ್ಲಿ ಭೇಟಿ ನೀಡಿದ್ದ ಸಂದರ್ಭ ಘೋಷಿಸಿದ್ದ ಯೋಜನೆಗಳ ಪ್ರಗತಿಯನ್ನು ಜೈಶಂಕರ್ ಪರಿಶೀಲಿಸಿದರು ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಿದೆ.

ಟ್ರಿನಿಡಾಡ್ – ಟೊಬಾಗೊದ ಪ್ರಧಾನಿ ಸಮ್ಮುಖದಲ್ಲಿ ಆಯ್ದ ಶಾಲೆಗಳ ವಿದ್ಯಾರ್ಥಿಗಳಿಗೆ ಎರಡು ಸಾವಿರ ಲ್ಯಾಪ್‌ಟಾಪ್ ವಿತರಿಸಿದ ಜೈಶಂಕರ್, ಕೃಷಿ ಸಂಸ್ಕರಣಾ ಸೌಲಭ್ಯ ಕೇಂದ್ರ ಹಾಗೂ ರಾಷ್ಟ್ರೀಯ ಪ್ರಾಸ್ಥೆಟಿಕ್ಸ್ ಕೇಂದ್ರವನ್ನು ಉದ್ಘಾಟಿಸಿದರು ಎಂದಿದೆ.

3 ವರ್ಷದಲ್ಲಿ 1 ಸಾವಿರ ಸಿಬ್ಬಂದಿ ವಜಾ: ಏರ್ ಇಂಡಿಯಾ

ಮುಂಬೈ (ಪಿಟಿಐ): ನಿಯಮಗಳನ್ನು ಉಲ್ಲಂಘಿಸಿದ 1 ಸಾವಿರಕ್ಕೂ ಹೆಚ್ಚಿನ ಸಿಬ್ಬಂದಿಯನ್ನು ಏರ್ ಇಂಡಿಯಾ ಕಂಪನಿಯು ಕಳೆದ ಮೂರು ವರ್ಷಗಳಲ್ಲಿ ಕೆಲಸದಿಂದ ವಜಾ ಮಾಡಿದೆ.

ಸಿಬ್ಬಂದಿಯು ವಿಮಾನದಲ್ಲಿ ವಸ್ತುಗಳನ್ನು ಕಳ್ಳಸಾಗಣೆ ಮಾಡುವುದು, ಶುಲ್ಕ ವಿಧಿಸದೇ ಹೆಚ್ಚಿನ ಲಗೇಜುಗಳಿಗೆ ಅನುಮತಿ ನೀಡುವ ಕೆಲಸ ಮಾಡಿದ ನಿದರ್ಶನಗಳು ಇವೆ. ಅಲ್ಲದೆ, ನೂರಾರು ಸಿಬ್ಬಂದಿಯು ಪ್ರವಾಸ (ಇಎಲ್‌ಟಿ) ಸವಲತ್ತನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ.

ನಿಯಮಗಳನ್ನು ಪಾಲಿಸದಿದ್ದಕ್ಕೆ ಪ್ರತಿ ವರ್ಷ ನೂರಾರು ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ. ಸಿಬ್ಬಂದಿಯು ಶಿಸ್ತುಬದ್ಧವಾಗಿ ನಡೆದುಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದ್ದಾರೆ. ಟಾಟಾ ಸಮೂಹದ ಏರ್ ಇಂಡಿಯಾದಲ್ಲಿ ಪ್ರಸ್ತುತ 24 ಸಾವಿರ ಸಿಬ್ಬಂದಿ ಇದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹370-634
ದ್ವಿತಳಿ (ಬಿ.ವಿ)	₹380-800

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹590	₹595
12 ಕ್ಕೆ	₹84	

ಪಾಕ್: ಆತ್ಮಾಹುತಿ ದಾಳಿಗೆ 15 ಬಲಿ

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಬನ್ನು ಪೊಲೀಸ್ ಠಾಣೆಯ ಮೇಲೆ ಆತ್ಮಾಹುತಿ ಬಾಂಬ್ ದಾಳಿ ನಡೆಸಲಾಗಿದ್ದು, ಘಟನೆಯಲ್ಲಿ ಕನಿಷ್ಠ 15 ಮಂದಿ ಭದ್ರತಾ ಸಿಬ್ಬಂದಿ ಸಾವಿಗೀಡಾಗಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ.

ಭಾರಿ ಸ್ಫೋಟಕ ತುಂಬಿದ್ದ ಕಾರನ್ನು ಪೊಲೀಸ್ ಠಾಣೆಗೆ ನುಗ್ಗಿಸಲು ಯತ್ನಿಸಲಾಗಿದೆ. ಈ ವೇಳೆ ಭದ್ರತಾ ಸಿಬ್ಬಂದಿಯು ಕಾರಿಗೆ ಗುಂಡು ಹಾರಿಸಿದಾಗ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟದ ತೀವ್ರತೆಗೆ ಪೊಲೀಸ್ ಠಾಣೆ ಕಟ್ಟಡವು ಕುಸಿದಿದೆ. ಸುತ್ತಲಿನ ಹಲವು ಮನೆಗಳ ಮೇಲ್ಛಾವಣಿಗಳೂ ಧ್ವಂಸಗೊಂಡಿವೆ. ಹಲವು ಭದ್ರತಾ ಸಿಬ್ಬಂದಿ ಠಾಣೆಯ ಕಟ್ಟಡದ ಅವಶೇಷದಡಿ ಸಿಲುಕಿ ಸಾವಿಗೀಡಾಗಿದ್ದಾರೆ.

ಸ್ಫೋಟದ ಬಳಿಕ ಉಗ್ರರ ಗುಂಪೊಂದು ಠಾಣೆ ಮೇಲೆ ದಾಳಿ ನಡೆಸಿತು. ಈ ವೇಳೆ ಭಾರಿ ಗುಂಡಿನ ಚಕಮಕಿ ನಡೆಯಿತು ಎಂದು ಪೊಲೀಸರು ತಿಳಿಸಿದರು. ಆದರೆ ಘಟನೆಯಲ್ಲಿ ಉಗ್ರರು ಸಾವಿಗೀಡಾಗಿರುವ ಅಥವಾ ಅವರನ್ನು ಬಂಧಿಸಿರುವ ಕುರಿತು ಮಾಹಿತಿ ಇಲ್ಲ.

ಎಫ್‌ಎಂಸಿಜಿ: ಬೆಲೆ ಹೆಚ್ಚಳಕ್ಕೆ ಸಿದ್ಧತೆ

ಜಾಗತಿಕ ಸಂಘರ್ಷಗಳ ಪರಿಣಾಮ ಗ್ರಾಹಕರಿಗೆ ವರ್ಗಾವಣೆ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿನ ಸಂಘರ್ಷಗಳ ಪರಿಣಾಮವಾಗಿ ಎಫ್‌ಎಂಸಿಜಿ ಕಂಪನಿಗಳ ಲಾಭದ ಪ್ರಮಾಣ ಕಡಿಮೆ ಆಗುತ್ತಿದ್ದು, ಕಂಪನಿಗಳು ಉತ್ಪನ್ನಗಳ ಬೆಲೆಯನ್ನು ಅಳೆದು-ತೂಗಿ ಹೆಚ್ಚು ಮಾಡಲು ಸಿದ್ಧತೆ ನಡೆಸಿವೆ.

ಹೀಗಾಗಿ ನಿತ್ಯದ ಬಳಕೆಯ ಸೋಪು, ಡಿಟರ್ಜೆಂಟ್, ಬಿಸ್ಕತ್ತು, ಪ್ಯಾಕ್ ಮಾಡಲಾದ ಆಹಾರ ಪದಾರ್ಥ, ಪಾನೀಯಗಳು ದುಬಾರಿ ಆಗುವ ಸಾಧ್ಯತೆ ಇದೆ.

ಕಚ್ಚಾ ತೈಲದ ಬೆಲೆಯಲ್ಲಿನ ಅಸ್ಥಿರತೆ, ಸರಕು ಸಾಗಣೆ ವೆಚ್ಚ ಹೆಚ್ಚಳ, ರೂಪಾಯಿ ಮೌಲ್ಯದಲ್ಲಿನ ಕುಸಿತ, ಜಾಗತಿಕ ಪೂರೈಕೆ ವ್ಯವಸ್ಥೆಗೆ ಆಗಿರುವ ಧಕ್ಕೆಯ ಕಾರಣದಿಂದಾಗಿ ವಿವಿಧ ಉತ್ಪನ್ನಗಳ ಬೆಲೆ ಹೆಚ್ಚಳಕ್ಕೆ ಸಿದ್ಧತೆ ನಡೆದಿದೆ ಎಂಬುದನ್ನು ಪ್ರಮುಖ ಎಫ್‌ಎಂಸಿಜಿ ಕಂಪನಿಗಳು ತಮ್ಮ ಈಚಿನ ಹಣಕಾಸಿನ ಫಲಿತಾಂಶವನ್ನು ಪ್ರಕಟಿಸುವ ಸಂದರ್ಭದಲ್ಲಿ ಹೇಳಿವೆ.

ಬೆಲೆ ಹೆಚ್ಚಳ ಮಾಡಬೇಕಾದ ಒತ್ತಡವು ಎಲ್ಲ ಬಗೆಯ ಉತ್ಪನ್ನಗಳ ಮೇಲೆಯೂ ಇದೆ. ಎಫ್‌ಎಂಸಿಜಿ ಕಂಪನಿ ಗಳು ತಮ್ಮ ಲಾಭ ಗಳಿಕೆ ಪ್ರಮಾಣವನ್ನು ಉಳಿಸಿಕೊಳ್ಳಲು ಬೆಲೆ ಹೆಚ್ಚಿಸುವ ಅಥವಾ ಪೊಟ್ಟಣದಲ್ಲಿನ ಉತ್ಪನ್ನದ ತೂಕವನ್ನು ಕಡಿಮೆ ಮಾಡುವ ಮಾರ್ಗ ಅನುಸರಿಸುತ್ತಿವೆ.

> ಬಾಟಲಿ ನೀರು ಹಾಗೂ ವಿವಿಧ ಪಾನೀಯಗಳನ್ನು ಮಾರಾಟ ಮಾಡುವ ಕಂಪನಿಗಳು ರಿಯಾಯಿತಿ ಪ್ರಮಾಣ ಕಡಿಮೆ ಮಾಡಲು ಆರಂಭಿಸಿವೆ. ಇಂಧನ ಬೆಲೆ ಜಾಸ್ತಿ ಆದರೆ ರಿಯಾಯಿತಿ ಇನ್ನಷ್ಟು ಕಡಿಮೆ ಆಗಬಹುದು
> **ವರುಣ್ ಬೆವರೇಜಸ್ ಲಿಮಿಟೆಡ್**

ರಿಯಾಯಿತಿ ಪ್ರಮಾಣ ಕಡಿಮೆ ಮಾಡಿ, ಪೂರೈಕೆ ವ್ಯವಸ್ಥೆಯಲ್ಲಿನ ಲೋಪಗಳನ್ನು ಸರಿಪಡಿಸಿ ವೆಚ್ಚ ಹೆಚ್ಚಳವನ್ನು ನಿಭಾಯಿಸಲು ಕಂಪನಿಗಳು ಯತ್ನಿಸುತ್ತಿವೆಯಾದರೂ, ಬೆಲೆ ಹೆಚ್ಚಳದ ಹೊರೆ ಗ್ರಾಹಕರಿಗೆ ವರ್ಗಾವಣೆ ಆಗುವ ಸಾಧ್ಯತೆ ಇದೆ.

ವೆಚ್ಚ ಹೆಚ್ಚಳದ ಪರಿಣಾಮವನ್ನು ಎದುರಿಸಲು ಉತ್ಪನ್ನಗಳ ಬೆಲೆಯನ್ನು ಜಾಸ್ತಿ ಮಾಡುವ ಕೆಲಸ ಆರಂಭವಾಗಿದೆ ಎಂದು ಡಾಬರ್ ಇಂಡಿಯಾ ಕಂಪನಿಯ ಜಾಗತಿಕ ವಹಿವಾಟುಗಳ ಸಿಇಒ ಮೋಹಿತ್ ಮಲ್ಹೋತ್ರಾ ಹೇಳಿದ್ದಾರೆ.

‘ನಾವು ವಿವಿಧ ಉತ್ಪನ್ನಗಳ ಬೆಲೆಯಲ್ಲಿ ಶೇ 4ರಷ್ಟು ಹೆಚ್ಚಳ ಮಾಡಿದ್ದೇವೆ... ಆದರೆ ಬೆಲೆ ಏರಿಕೆ ಹಾಗೂ ಮಾರಾಟ ಹೆಚ್ಚಳದಿಂದಾಗಿ ದೇಶದ ಮಾರುಕಟ್ಟೆಯಲ್ಲಿ ನಮ್ಮ ವಹಿವಾಟು ಮೊತ್ತ ಈ ವರ್ಷ ಎರಡಂಕಿಯ ಪ್ರಮಾಣದಲ್ಲಿ ಬೆಳೆಯುವ ನಿರೀಕ್ಷೆ ಇದೆ’ ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

ಇಂಧನ ಮತ್ತು ಪೊಟ್ಟಣದ ವೆಚ್ಚಗಳಲ್ಲಿನ ಸರಿಸುಮಾರು ಶೇ 20ರಷ್ಟು ಏರಿಕೆ ನಿಭಾಯಿಸಲು ಉತ್ಪನ್ನಗಳ ಬೆಲೆಯನ್ನು ಶೀಘ್ರವೇ ಹೆಚ್ಚು ಮಾಡಲಾಗುತ್ತದೆ ಎಂಬ ಸೂಚನೆಯನ್ನು ಬಿಸ್ಕತ್ತು, ಬೇಕರಿ ಉತ್ಪನ್ನಗಳನ್ನು ಸಿದ್ಧಪಡಿಸುವ ಬ್ರಿಟಾನಿಯಾ ನೀಡಿದೆ.

ಪೊಟ್ಟಣದಲ್ಲಿ ಇರುವ ಉತ್ಪನ್ನದ ತೂಕವನ್ನು ಕಡಿಮೆ ಮಾಡುವ ಹಾಗೂ ಬೆಲೆಯನ್ನು ಹೆಚ್ಚಿಸುವ ಆಯ್ಕೆಗಳನ್ನು ಬ್ರಿಟಾನಿಯಾ ಪರಿಶೀಲಿಸುತ್ತಿದೆ. ‘ನಾವು ಕೆಲವು ಉತ್ಪನ್ನಗಳ ಬೆಲೆ ಹೆಚ್ಚಿಸಬೇಕಾಗುತ್ತದೆ...’ ಎಂದು ಕಂಪನಿಯ ಎಂ.ಡಿ ಹಾಗೂ ಸಿಇಒ ರಕ್ಷಿತ್ ಹರ್ಗವೆ ತಿಳಿಸಿದ್ದಾರೆ. ಎಲ್‌ಪಿಜಿ ಮತ್ತು ಪಿಎನ್‌ಜಿ ಬೆಲೆ ಏರಿಕೆಯು ಕೂಡ ಉತ್ಪನ್ನಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತಿದೆ.

ಎಫ್‌ಎಂಸಿಜಿ ಕ್ಷೇತ್ರ ದೈತ್ಯ ಹಿಂದುಸ್ತಾನ್ ಯೂನಿಲಿವರ್ (ಎಚ್‌ಯುಎಲ್) ತನ್ನ ವಿವಿಧ ಉತ್ಪನ್ನಗಳ ಬೆಲೆಯನ್ನು ಈಗಾಗಲೇ ಶೇ 5ರವರೆಗೆ ಹೆಚ್ಚು ಮಾಡಿದೆ. ‘ವೆಚ್ಚಗಳನ್ನು ಗಮನಿಸಿ ಅಗತ್ಯ ಎದುರಾದಾಗ ನಾವು ಇನ್ನಷ್ಟು ಪ್ರಮಾಣದಲ್ಲಿ ಬೆಲೆ ಹೆಚ್ಚಳದ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಕಂಪನಿಯ ಸಿಎಫ್‌ಒ ನಿರಂಜನ್ ಗುಪ್ತಾ ಹೇಳಿದ್ದಾರೆ.

ಪಿಡಿಲೈಟ್ ಕಂಪನಿಯು ತನ್ನ ಉತ್ಪನ್ನಗಳ ಬೆಲೆಯನ್ನು ಈ ವರ್ಷ ಎರಡು ಬಾರಿ ಹೆಚ್ಚಿಸಿದೆ. ಇನ್ನೊಂದು ಬಾರಿ ಬೆಲೆ ಏರಿಕೆ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ವಿಚಾರ ಸಂಕಿರಣದಲ್ಲಿ ವಕೀಲ ಪ್ರಶಾಂತ್ ಭೂಷಣ್

‘ಎಸ್‌ಐಆರ್: ಬಿಜೆಪಿ ಮುಂದಿನ ಗುರಿ ಕರ್ನಾಟಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮುಂದಿನ ಗುರಿ ಕರ್ನಾಟಕ’ ಎಂದು ಸುಪ್ರೀಂಕೋರ್ಟ್‌ನ ವಕೀಲ ಪ್ರಶಾಂತ್ ಭೂಷಣ್ ಹೇಳಿದರು.

ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಾಂತ್ ಭೂಷಣ್ –ಪ್ರಜಾವಾಣಿ ಚಿತ್ರ

ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಭಾನುವಾರ ನಗರದಲ್ಲಿ ಆಯೋಜಿಸಿದ್ದ ‘ಕ್ಷೇತ್ರ ಮರುವಿಂಗಡಣೆ, ಮಹಿಳಾ ಮೀಸಲಾತಿ ಮತ್ತು ಎಸ್‌ಐಆರ್’ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಚುನಾವಣಾ ಆಯೋಗವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಪಶ್ಚಿಮ ಬಂಗಾಳದಲ್ಲಿ ವ್ಯವಸ್ಥಿತವಾಗಿ ವಿಶೇಷ ಸಮಗ್ರ ಪರಿಷ್ಕರಣೆ ಜಾರಿಗೆ ತಂದಿತು. ಸುಪ್ರೀಂಕೋರ್ಟ್ ನಿರ್ದೇಶನದ ನಂತರವೂ ಹೆಚ್ಚು ಬದಲಾವಣೆಯಾಗದೇ ಹೆಚ್ಚಿನ ಮಂದಿ ಮತದಾರರ ಪಟ್ಟಿಯಿಂದ ಹೊರಗುಳಿದರು. ಇದರಿಂದಾಗಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವ ಬಿಜೆಪಿ ಕನಸು ಈಡೇರಿದೆ. ಮುಂದಿನ ಗುರಿ ಕರ್ನಾಟಕ ಹಾಗೂ ಕೇರಳ. ಇಲ್ಲಿ ಅಧಿಕಾರ ಹಿಡಿಯಲು ಎಸ್‌ಐಆರ್ ಅನ್ನು ಬಳಸಿಕೊಳ್ಳಲಿದ್ದಾರೆ’ ಎಂದು ಹೇಳಿದರು.

‘ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಬಿಜೆಪಿಯ ಏಜೆಂಟರಂತೆ ಕೆಲಸ ಮಾಡಿದರು. ಬಂಗಾಳದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಜವಾಬ್ದಾರಿ ಹೊತ್ತಿದ್ದ ಅಧಿಕಾರಿಯೊಬ್ಬರು ಅಲ್ಲಿನ ಮುಖ್ಯಮಂತ್ರಿಯ ವಿಶೇಷ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಚುನಾವಣಾ ವ್ಯವಸ್ಥೆಯನ್ನೇ ಹೈಜಾಕ್ ಮಾಡಿ ಬಿಜೆಪಿ ಅಧಿಕಾರ ಹಿಡಿಯುತ್ತಿರುವ ಮಾದರಿ ನೋಡಿದರೆ ನಮ್ಮಲ್ಲಿ ಪ್ರಜಾಪ್ರಭುತ್ವ ಅಂತ್ಯವಾಗುತ್ತಿದೆಯೇ ಎನ್ನುವ ಆತಂಕ ಎದುರಾಗಿದೆ’ ಎಂದರು.

‘ಮುಸ್ಲಿಂ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ರಾಷ್ಟ್ರೀಯ ಪೌರತ್ವ ನೋಂದಣಿಗೆ (ಎನ್‌ಆರ್‌ಸಿ) ಕೇಂದ್ರ ಸರ್ಕಾರ ಮುಂದಾಯಿತು. ಇದರಲ್ಲಿ ಯಶಸ್ಸು ಸಿಗದೇ ವಿಶೇಷ ಸಮಗ್ರ ಪರಿಷ್ಕರಣೆಗೆ ಮಾರ್ಗ ಬದಲಿಸಿತು. ಮೊದಲು ಇದನ್ನು ಬಿಹಾರದಲ್ಲಿ ಜಾರಿಗೊಳಿಸಲಾಯಿತು. ಸುಪ್ರೀಂಕೋರ್ಟ್ ಸೂಚನೆ ನಂತರ 11 ದಾಖಲೆಗಳ ಪಟ್ಟಿಯಲ್ಲಿ ಆಧಾರ್ ಕಾರ್ಡ್ ಸೇರಿಸಿದ್ದರಿಂದಾಗಿ ಅಲ್ಲಿ ಹೆಚ್ಚಿನ ತೊಂದರೆಯಾಗಲಿಲ್ಲ’ ಎಂದರು.

ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್‌ನ ಸುಧೀರ್‌ಕುಮಾರ್ ಮುರೊಳ್ಳಿ, ಸಾಮಾಜಿಕ ಹೋರಾಟಗಾರ್ತಿ ಕೆ.ಎಸ್. ವಿಮಲಾ ಉಪಸ್ಥಿತರಿದ್ದರು.

‘ಕ್ಷೇತ್ರ ಪುನರ್ ವಿಂಗಡಣೆ: ಎಚ್ಚರ ಇರಲಿ’

‘ಅಸ್ಸಾಂನಲ್ಲಿ ಧರ್ಮದ ಆಧಾರದ ಮೇಲೆ ಗಡಿ ಗುರುತಿಸಿ ಮೂರು ಕ್ಷೇತ್ರಗಳ ಪೈಕಿ ಎರಡನ್ನು ಗೆಲ್ಲುವ ರೀತಿ ಜಾರಿಗೊಳಿಸುವಲ್ಲಿ ಬಿಜೆಪಿ ಯಶಸ್ವಿ ಆಗಿದೆ. ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕು’ ಎಂದು ಪ್ರಶಾಂತ್ ಭೂಷಣ್ ಹೇಳಿದರು.

‘ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡುವ ಪ್ರಯತ್ನ ನಡೆದಿದೆ. ಇದರಿಂದ ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಿ, ಉತ್ತರ ಭಾರತದ ಕ್ಷೇತ್ರಗಳು ಹೆಚ್ಚಲಿವೆ. ಈ ಮೂಲಕ ಸುಲಭವಾಗಿ ಅಧಿಕಾರ ಹಿಡಿಯುವ ಪ್ರಯತ್ನ ನಡೆದಿದೆ’ ಎಂದು ಟೀಕಿಸಿದರು.

ಕಲ್ಯಾಣ್ ಜ್ಯುವೆಲರ್ಸ್ ಲಾಭ ಹೆಚ್ಚಳ

ಬೆಂಗಳೂರು: ಕಲ್ಯಾಣ್ ಜುವೆಲರ್ಸ್ ಇಂಡಿಯಾ ಲಿಮಿಟೆಡ್ ಕಂಪನಿಯು 2025–26ನೆಯ ಹಣಕಾಸು ವರ್ಷದಲ್ಲಿ ₹35,743 ಕೋಟಿ ವರಮಾನ ಗಳಿಸಿದೆ, ಕಂಪನಿಯ ತೆರಿಗೆ ನಂತರದ ಲಾಭವು (ಪಿಎಟಿ) ₹1,350 ಕೋಟಿ ಆಗಿದೆ.

ವರಮಾನವು ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 43ರಷ್ಟು ಜಾಸ್ತಿ ಆಗಿದೆ, ಲಾಭವು ಶೇ 86ರಷ್ಟು ಏರಿಕೆ ಕಂಡಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನ ಹಾಗೂ ತೆರಿಗೆ ನಂತರದ ಲಾಭವು ಕ್ರಮವಾಗಿ ₹10,275 ಕೋಟಿ ಮತ್ತು ₹410 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕ್ರಮವಾಗಿ ಶೇ 66ರಷ್ಟು ಹಾಗೂ ಶೇ 118ರಷ್ಟು ಜಾಸ್ತಿ ಎಂದು ಕಂಪನಿಯು ಹೇಳಿದೆ.

ತೈಲ ಟ್ಯಾಂಕರ್ ಮೇಲಿನ ದಾಳಿಗೆ ತಕ್ಕ ಉತ್ತರ: ಇರಾನ್

ದುಬೈ(ಎಪಿ): ಇರಾನ್‌ಗೆ ಸೇರಿದ ತೈಲ ಟ್ಯಾಂಕರ್‌ಗಳು ಇಲ್ಲವೇ ವಾಣಿಜ್ಯ ಹಡಗುಗಳ ಮೇಲೆ ಒಂದು ವೇಳೆ ಅಮೆರಿಕ ದಾಳಿ ಮಾಡಿದಲ್ಲಿ, ಕೊಲ್ಲಿ ಪ್ರದೇಶದಲ್ಲಿ ಅದು ಹೊಂದಿರುವ ಸೇನಾ ನೆಲೆ ಮೇಲೆ ಭಾರಿ ದಾಳಿ ಮೂಲಕ ಪ್ರತ್ಯುತ್ತರ ನೀಡಲಾಗುವುದು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್(ಐಆರ್‌ಜಿಸಿ) ಎಚ್ಚರಿಸಿದೆ.

ಕದನ ವಿರಾಮ ಜಾರಿಯಲ್ಲಿರುವ ಸಂದರ್ಭದಲ್ಲಿಯೇ ಇರಾನ್‌ಗೆ ಸೇರಿದ ಎರಡು ತೈಲ ಟ್ಯಾಂಕರ್‌ಗಳ ಮೇಲೆ ಅಮೆರಿಕ ದಾಳಿ ನಡೆಸಿದ ಬೆನ್ನಲ್ಲೇ ಐಆರ್‌ಜಿಸಿ ಈ ಎಚ್ಚರಿಕೆ ನೀಡಿದೆ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ವರದಿ ಮಾಡಿದೆ.

ಇನ್ನೊಂದೆಡೆ, ಐಆರ್‌ಜಿಸಿ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಹಲವರನ್ನು ಬಂಧಿಸಲಾಗಿದೆ ಎಂದು ಬಹರೇನ್ ಹೇಳಿದೆ.

ಪಾಕಿಸ್ತಾನದ ಸೇನಾ ಪಡೆಗಳ ಮುಖ್ಯಸ್ಥ ಆಸಿಮ್ ಮುನೀರ್ ಹೇಳಿಕೆ

‘ಕದನ ವಿರಾಮಕ್ಕೆ ಭಾರತವೇ ಮನವಿ ಮಾಡಿತ್ತು’

ಪ್ರಜಾವಾಣಿ ವಾರ್ತೆ/ಪಿಟಿಐ

ಇಸ್ಲಾಮಾಬಾದ್: ‘ಭಾರತದ 26ಕ್ಕೂ ಹೆಚ್ಚು ಸೇನಾ ನೆಲೆಗಳ ಮೇಲೆ ನಾವು ನಡೆಸಿದ ದಾಳಿ ಯಶಸ್ವಿಯಾಗಿತ್ತು. ಈ ಬಳಿಕ ಆ ದೇಶವು ಅಮೆರಿಕದ ನಾಯಕತ್ವದ ಬಳಿ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿಕೊಳ್ಳುವಂತೆ ಮನವಿ ಮಾಡಿತು. ಪ್ರಾದೇಶಿಕ ಶಾಂತಿಗಾಗಿ ನಾವೂ ಇದಕ್ಕೆ ಒಪ್ಪಿದೆವು’ ಎಂದು ಪಾಕಿಸ್ತಾನದ ಸೇನಾ ಪಡೆಗಳ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಹೇಳಿದರು.

‘ಕದನ ವಿರಾಮ ಮಾತುಕತೆಯಲ್ಲಿ ಯಾವ ದೇಶವೂ ಮಧ್ಯಸ್ಥಿಕೆ ವಹಿಸಿಕೊಂಡಿರಲಿಲ್ಲ. ಪಾಕಿಸ್ತಾನ ಮತ್ತು ಭಾರತದ ಮಧ್ಯೆಯೇ ನೇರ ಮಾತುಕತೆ ನಡೆದಿತ್ತು’ ಎಂದು ಭಾರತ ಹೇಳುತ್ತಲೇ ಬಂದಿದೆ.

> ಭಾರತದ ವಿರುದ್ಧದ ಕಾರ್ಯಾಚರಣೆಯು ನಮ್ಮ ವಿದೇಶಾಂಗ ನೀತಿ ಮತ್ತು ರಾಜತಾಂತ್ರಿಕ ಮಹತ್ವವನ್ನು ಹೆಚ್ಚಿಸಿತು. ಜಗತ್ತು ಈಗ ನಮ್ಮನ್ನು ಅಜೇಯ ಶಕ್ತಿಯಾಗಿ ನೋಡುತ್ತಿದೆ
> **ಅಸೀಮ್ ಮುನೀರ್,**
> ಪಾಕಿಸ್ತಾನದ ಸೇನಾ ಪಡೆಗಳ ಮುಖ್ಯಸ್ಥ

ಪಹಲ್ಗಾಮ್ ದಾಳಿಯ ಬಳಿಕ ಭಾರತವು ಪಾಕಿಸ್ತಾನದ ಮೇಲೆ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಭಾರತದ ವಿರುದ್ಧ ‘ಮರ್ಕಾ-ಎ-ಹಕ್’ ಹೆಸರಿನ ಸೇನಾ ಕಾರ್ಯಾಚರಣೆ ನಡೆಸಿತ್ತು. ಈ ಕಾರ್ಯಾಚರಣೆಗೆ ಒಂದು ವರ್ಷ ತುಂಬಿದ ಸಲುವಾಗಿ ರಾವಲ್ಪಿಂಡಿಯಲ್ಲಿನ ಸೇನಾ ಮುಖ್ಯ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮ ದಾಳಿಗಳಿಂದ ಭಾರತದ ಹಲವರು ಮೃತಪಟ್ಟರು ಮತ್ತು ಆ ದೇಶವು ಆರ್ಥಿಕ ನಷ್ಟವನ್ನೂ ಅನುಭವಿಸಿತು. ಮುಂದಿನ ಹಲವು ವರ್ಷಗಳವರೆಗೆ ಭಾರತವು ಇದರ ಬೆಲೆಯನ್ನು ತೆರುತ್ತಲೇ ಇರುತ್ತದೆ. ಭಾರತದ ವಿರುದ್ಧದ ಸಂಘರ್ಷದಲ್ಲಿ ಪಾಕಿಸ್ತಾನದ ತಂತ್ರಗಾರಿಕೆಯು ಶಕ್ತಿಯುತವಾಗಿತ್ತು’ ಎಂದರು.

‘ಕಳೆದ ವರ್ಷ ಮೇ 6, 7 ಮತ್ತು 10ರಂದು ಭಾರತವು ನಮ್ಮ ಸಾರ್ವಭೌಮತ್ವ ಮತ್ತು ಭೂಪ್ರದೇಶವನ್ನು ಉಲ್ಲಂಘಿಸಿತ್ತು. ಇದಕ್ಕೆ ನಾವು ರಾಷ್ಟ್ರೀಯ ಏಕತೆ ಮತ್ತು ಸೇನಾ ಪಡೆಗಳ ಸಂಪೂರ್ಣ ಬಲದೊಂದಿಗೆ ಪ್ರತಿಕ್ರಿಯೆ ನೀಡಿದೆವು. ಈ ಸಂಘರ್ಷವು ಸಾಂಪ್ರದಾಯಿಕ ಯುದ್ಧ ಮಾತ್ರವೇ ಆಗಿರಲಿಲ್ಲ. ಇದು ಎರಡು ಸಿದ್ಧಾಂತಗಳ ಮಧ್ಯದ ಹೋರಾಟವಾಗಿತ್ತು’ ಎಂದರು.

‘ಕಾಶ್ಮೀರ ಇಲ್ಲದೆ ನಾವು ಅಪೂರ್ಣ’

‘ಕಾಶ್ಮೀರವು ಒಳಗೊಳ್ಳದ ಪಾಕಿಸ್ತಾನದ ಎಲ್ಲ ಕತೆಗಳೂ ಅಪೂರ್ಣವಾಗುತ್ತವೆ. ವಿಶ್ವ ಸಂಸ್ಥೆಯ ನಿರ್ಣಯ ಮತ್ತು ಕಾಶ್ಮೀರಿ ಜನರ ಆಶೋತ್ತರಗಳನ್ನು ಪರಿಗಣಿಸಿ ಮಾಡುವ ಪರಿಹಾರೋಪಾಯಗಳು ಮಾತ್ರವೇ ಕಾಶ್ಮೀರ ವಿವಾದವನ್ನು ಬಗೆಹರಿಸಲು ಸಾಧ್ಯ’ ಎಂದು ಅಸೀಮ್ ಮುನೀರ್ ಹೇಳಿದರು.

‘ಭಾರತದ ಹಿಂಸೆ ಮತ್ತು ಕ್ರೌರ್ಯದಿಂದ ಮುಕ್ತಿ ಪಡೆಯುವುದಕ್ಕೆ ಈ ವಿವಾದ ಬಗೆಹರಿಯುವುದು ಅಗತ್ಯವಾಗಿದೆ. ಸಾಮಾಜಿಕ ಸ್ಥಿತಿಗತಿಯನ್ನು ಬದಲಿಸಿ ಭಾರತದ ಆಕ್ರಮಿತ ಕಾಶ್ಮೀರದ ಚಿತ್ರಣವನ್ನು ಬೇರೆ ಮಾಡಲು ಸಾಧ್ಯವಿಲ್ಲ. ಈ ಜನರ ಹಕ್ಕುಗಳಿಗಾಗಿ ನಾವು ಧ್ವನಿ ಎತ್ತುತ್ತಲೇ ಇರುತ್ತೇವೆ. ನಮ್ಮ ರಾಜಕೀಯ ಮತ್ತು ನೈತಿಕ ಬೆಂಬಲವು ಕಾಶ್ಮೀರದ ಜನರಿಗೆ ಇದ್ದೇ ಇರುತ್ತದೆ’ ಎಂದೂ ಹೇಳಿದರು.

ಪಾಕ್‌ನಿಂದ ಜಾಗತಿಕ ಶಾಂತಿ ಖಾತರಿ: ಪ್ರಧಾನಿ ಷರೀಫ್

ಇಸ್ಲಾಮಾಬಾದ್ (ಪಿಟಿಐ): ‘ಜಗತ್ತಿನ ಜವಾಬ್ದಾರಿಯುತ ರಾಷ್ಟ್ರವಾಗಿ ಗುರುತಿಸಿಕೊಂಡಿದ್ದು, ಜಾಗತಿಕ ಶಾಂತಿ ಹಾಗೂ ಸ್ಥಿರತೆಯ ಖಾತರಿಯಾಗಿಯೂ ಹೊರಹೊಮ್ಮಿದ್ದೇವೆ’ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿಕೊಂಡಿದ್ದಾರೆ.

ಶೆಹಬಾಜ್ ಷರೀಫ್

ಕಳೆದ ವರ್ಷ ಭಾರತದೊಂದಿಗಿನ ನಾಲ್ಕು ದಿನಗಳ ಸಂಘರ್ಷಕ್ಕೆ ಇಸ್ಲಾಮಾಬಾದ್ ನೀಡಿದ ಹೆಸರು ‘ಮರ್ಕ್– ಎ– ಹಕ್’ನ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಪ್ರಧಾನಿ ಕಚೇರಿಯು ಶನಿವಾರ ರಾತ್ರಿ ಬಿಡುಗಡೆ ಮಾಡಿರುವ ಸಂದೇಶದಲ್ಲಿ ಈ ವಿಷಯ ಉಲ್ಲೇಖಿಸಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸುವ ತನ್ನ ಪ್ರಯತ್ನಗಳಿಗೆ ಪಾಕಿಸ್ತಾನ ಬದ್ಧವಾಗಿದೆ’ ಎಂದೂ ತಿಳಿಸಿದ್ದಾರೆ.

‘ಭೂಮಿ, ಸಮುದ್ರ, ವಾಯು ಹಾಗೂ ಸೈಬರ್ ಕ್ಷೇತ್ರಗಳಲ್ಲಿ ಪಾಕಿಸ್ತಾನದ ಪಡೆಗಳ ಸಂಘಟಿತ ಪ್ರತಿಕ್ರಿಯೆಯು ದೇಶದ ರಕ್ಷಣಾ ಸಾಮರ್ಥ್ಯ ಹಾಗೂ ರಾಷ್ಟ್ರೀಯ ಸಂಕಲ್ಪವನ್ನು ಬಲಪಡಿಸಿದೆ’ ಎಂದು ಹೇಳಿದ್ದಾರೆ.

‘ನಮ್ಮ ವಿರುದ್ಧ ಯಾವುದೇ ದಾಳಿ ನಡೆದರೂ ಪ್ರತ್ಯುತ್ತರ ನೀಡಲಾಗುವುದು’ ಎಂದು ಎಚ್ಚರಿಸಿರುವ ಶೆಹಬಾಜ್, ‘ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದು ಪಾಕ್‌ಗೆ ಗೊತ್ತಿದೆ’ ಎಂದಿದ್ದಾರೆ.

ಭಾರತದೊಂದಿಗಿನ ಸಂಘರ್ಷದ ಸಮಯದಲ್ಲಿ ಸಶಸ್ತ್ರ ಪಡೆಗಳು ನಡೆಸಿದ ಹೋರಾಟ, ವಹಿಸಿದ ಪಾತ್ರವನ್ನು ಶೆಹಬಾಜ್ ಶ್ಲಾಘಿಸಿದ್ದು, ‘ಭಯೋತ್ಪಾದನೆ ವಿರುದ್ಧ ಪಾಕ್ ಹೋರಾಡಲಿದೆ ಹಾಗೂ ತನ್ನ ಗಡಿಯಲ್ಲಿ ಜಾಗರೂಕತೆಯನ್ನು ಕಾಪಾಡಿಕೊಳ್ಳಲಿದೆ’ ಎಂದು ತಮ್ಮ ಸಂದೇಶದಲ್ಲಿ ಪ್ರಸ್ತಾಪಿಸಿದ್ದಾರೆ.

ಸೋಮವಾರ, ಮೇ 11, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭುವಿಗೆ ನಾಲ್ಕು ವಿಕೆಟ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಭುವನೇಶ್ವರ್ ಕುಮಾರ್ ಅವರು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ನಾಲ್ಕು ವಿಕೆಟ್ ಗಳಿಸಿದರು

'ಅಗ್ನಿ ತಪಸ್ಯ'

ರಷ್ಯಾ ಮೂಲದ ಯೋಗಿನಿ ಅನ್ನಪೂರ್ಣನಾಥ್ ಅವರು ರಾಜಸ್ಥಾನದ ಅಜ್ಮೇರ್‌ನಲ್ಲಿ ನಡೆದ ಧುನಿ ಅಗ್ನಿ ತಪಸ್ಯ ಮತ್ತು ಶಿವಧ್ಯಾನದಲ್ಲಿ ಭಾಗಿಯಾಗಿದ್ದರು

भारत सरकार | सोमनाथ
अनंत ऊर्जा का अनुभव

सोमलिङ्गं नरो दृष्ट्वा सर्वपापैः प्रमुच्यते।
लभते फलं मनोवाञ्छितं मृतः स्वर्गं समाश्रयेत्॥

ಸೋಮನಾಥ

ಪರಂಪರೆಯ 75 ವರ್ಷಗಳು

ಸೋಮನಾಥ ಭಾರತದ ಅದಮ್ಯ ನಾಗರಿಕತೆಯ ಪ್ರತೀಕವಾಗಿದೆ. 1000 ವರ್ಷಗಳ ಕಾಲ ವಿನಾಶಕಾರಿ ಪ್ರಹಾರಗಳಿಗೆ ಈಡಾಗಿದ್ದರೂ, ಇಂದಿಗೂ ಕೂಡ ಸೋಮನಾಥ ನಮ್ಮ ಆತ್ಮಗೌರವ ಮತ್ತು ಸಾಹಸಗಳ ಪ್ರತಿರೂಪವಾಗಿ ತಲೆಯೆತ್ತಿ ನಿಂತಿದೆ.

75 ವರ್ಷಗಳ ಹಿಂದೆ, ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲ್‌ರವರ ಸಂಕಲ್ಪದಿಂದ ಆಧುನಿಕ ಸೋಮನಾಥ ಮಾರ್ಗ ನಿರ್ಮಾಣಗೊಂಡಿತು.

ಈಗ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಈ ಪವಿತ್ರ ಕ್ಷೇತ್ರವು ಭಾರತದ ಸಾಂಸ್ಕೃತಿಕ ಪುನರುತ್ಥಾನವನ್ನು ಹೆಮ್ಮೆಯಿಂದ ಸಾರುತ್ತಿದೆ.

ಈ ಅವಿಸ್ಮರಣೀಯ ಸಂದರ್ಭಕ್ಕೆ ಸಾಕ್ಷಿಯಾಗೋಣ ಬನ್ನಿ

ಪ್ರಮುಖ ವಿಧಿ ವಿಧಾನಗಳು

ಕಳಸ ಯಾತ್ರೆ | ಸಂಜೆ ಭಜನೆ | ಓಂಕಾರ ಮಂತ್ರ ಪಠಣ
ಸೋಮನಾಥ ಕೃತಿಯಲ್ಲಿ ಮಂತ್ರ ಲೇಖನ | ಸೋಮನಾಥಕ್ಕೆ ಸಂಬಂಧಿತ ಕಥೆಗಳ ವಾಚನ

ಶ್ರೀ ಸೋಮನಾಥ ಮಂದಿರದ ಆವರಣ, ಪ್ರಭಾಸ್ ಪಾಟನ್ | 8–11 ಮೇ, 2026

"ಸೋಮನಾಥ ಆಶಾ ಗೀತೆಯು, ಸೃಷ್ಟಿಯ ಶಕ್ತಿಯು ವಿನಾಶಕ್ಕಿಂತ ಅಧಿಕ ಪ್ರಬಲವಾಗಿರುತ್ತದೆ, ಎಂಬುದನ್ನು ನಮಗೆ ಕಲಿಸುತ್ತದೆ."

–ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ (ಅಧ್ಯಕ್ಷರು, ಶ್ರೀ ಸೋಮನಾಥ ಟ್ರಸ್ಟ್)

CBC 09101/13/0007/2627

ಸೋಮನಾಥದ ದಿವ್ಯತೆ ಮತ್ತು ಭವ್ಯತೆಗೆ ಕೊಡುಗೆ ಸಲ್ಲಿಸಲು ಹಾಗೂ ಗೌರವಶಾಲಿ ಇತಿಹಾಸದ ಭಾಗವಾಗಿರಲು ಇಲ್ಲಿ ಸ್ಕ್ಯಾನ್ ಮಾಡಿ

ಉಪೇಂದ್ರ, ಇಂದ್ರಜಿತ್ ಲಂಕೇಶ್ ಜತೆ ಚಿತ್ರತಂಡ

ಸೆಪ್ಟೆಂಬರ್ 21ಕ್ಕೆ ಉಪೇಂದ್ರ ಸಾಥ್

ಪ್ರಿಯಾಂಕಾ ಉಪೇಂದ್ರ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಸೆಪ್ಟೆಂಬರ್ 21' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಉಪೇಂದ್ರ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಸಾಥ್ ನೀಡಿದರು. ಕರೇನ್ ಕ್ರಿಸ್ಟಿ ಸುವರ್ಣ ನಿರ್ದೇಶಿಸಿರುವ ಚಿತ್ರ ಮೇ 22ರಂದು ತೆರೆಗೆ ಬರಲಿದೆ.

'ವಿಶೇಷವಾದ ಸಿನಿಮಾವಿದು. ಕ್ರಿಸ್ಟಿ ಚೊಚ್ಚಲ ನಿರ್ದೇಶನದ ಸಿನಿಮಾವೇ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುತ್ತಿದೆ. ನಮ್ಮ ಮನೆಯಲ್ಲಿ ಪ್ರಿಯಾಂಕಾ ಪ್ಯಾನ್ ಇಂಡಿಯಾ ನಟಿ. ಅವರು ಒಂದಾದ ನಂತರ ಮತ್ತೊಂದು ಭಾಷೆಯಲ್ಲಿ ನಟಿಸುತ್ತಲೇ ಇರುತ್ತಾರೆ. ಇಡೀ ತಂಡಕ್ಕೆ ತುಂಬ ಒಳಿತಾಗಲಿ. ನಾನಿನ್ನು ಸಿನಿಮಾ ನೋಡಿಲ್ಲ. ಆದರೆ ನೋಡಿದವರೆಲ್ಲ ಚಿತ್ರ ತುಂಬ ಅದ್ಭುತ ಎನ್ನುತ್ತಿದ್ದಾರೆ. ಕಮರ್ಷಿಯಲ್ ಅಂಶಗಳ ಜತೆಗೆ ಕಂಟೆಂಟ್ ಹೊಂದಿರುವ ಅಂತರರಾಷ್ಟ್ರೀಯ ಶೈಲಿಯ ಸಿನಿಮಾವಿದು' ಎಂದರು ಉಪೇಂದ್ರ.

'ನಿರ್ದೇಶಕಿ ಜೂಮ್ ಕಾಲ್‌ನಲ್ಲಿ ಈ ಕಥೆಯನ್ನು ಹೇಳಿದರು. ಒಂದು ಗಂಟೆ ಅಲುಗಾಡದೆ ಕಥೆ ಕೇಳಿದೆ. ಈ ಪಾತ್ರಕ್ಕೆ ನನ್ನನ್ನು ಏಕೆ ಆಯ್ಕೆ ಮಾಡುತ್ತಿದ್ದಾರೆ ಎಂಬ ಅನುಮಾನವಿತ್ತು. ಆಗ ನಿರ್ದೇಶಕಿ ಈ ಪಾತ್ರಕ್ಕೆ ನಿಮ್ಮಗ್ರೇಸ್ ಬೇಕು ಎಂದರು. ಈ ಸಿನಿಮಾದಿಂದ ಸಾಕಷ್ಟು ಕಲಿತಿದ್ದೇನೆ. 25 ವರ್ಷಗಳಲ್ಲಿ 50 ಸಿನಿಮಾಗಳಾಗಿವೆ. ಈಗಲೂ ಕಲಿಕೆ ನಿರಂತರ. ಯುವ ನಿರ್ದೇಶಕರು ಇಂಥ ಅವಕಾಶ ಕೊಟ್ಟಾಗ ಖುಷಿಯಾಗುತ್ತದೆ. ಕ್ರಿಸ್ಟಿ ಅವರ ಆಲೋಚನೆ ವಿಭಿನ್ನವಾಗಿದೆ' ಎಂದರು ಪ್ರಿಯಾಂಕಾ.

'22 ವರ್ಷದ ಹುಡುಗಿ ನಿರ್ದೇಶಕಿ ಎಂದು ನೋಡದೇ ಪ್ರಿಯಾಂಕಾ ಪ್ರೋತ್ಸಾಹ ನೀಡಿದ್ದಾರೆ. ನೈಜ ಕಥೆ ಆಧಾರಿತ ಸಿನಿಮಾವಿದು. ಆಲ್ಝೈಮರ್ ಖಾಯಿಲೆ ಹೊಂದಿರುವವರ ಕುರಿತು ಸಾಕಷ್ಟು ಸಿನಿಮಾಗಳು ಬಂದಿವೆ. ಆದರೆ ಈ ಸಿನಿಮಾದಲ್ಲಿ ನಾವು ಅವರಿಗೆ ಆರೈಕೆ ಮಾಡುವ ವ್ಯಕ್ತಿಗಳ ದೃಷ್ಟಿಕೋನದಿಂದ ಚಿತ್ರವನ್ನು ಮಾಡಿದ್ದೇವೆ' ಎಂದರು ನಿರ್ದೇಶಕಿ.

'ಈ ಸಿನಿಮಾ ಮುಹೂರ್ತಕ್ಕೆ ಬಂದಿದ್ದೆ. ಈ ನಿರ್ದೇಶಕಿ ಏನೋ ವಿಭಿನ್ನವಾಗಿ ಮಾಡುತ್ತಾರೆ ಎಂದು ಆವತ್ತೇ ಅನ್ನಿಸಿತ್ತು. ಇವತ್ತು ಸಿನಿಮಾ ಕಾನ್ ಚಿತ್ರೋತ್ಸವಕ್ಕೆ ಹೊರಟು ನಿಂತಿದೆ. ಪ್ರಿಯಾಂಕಾ ಅವರು ಗ್ಲಾಮರ್ ಬಿಟ್ಟು ಒಂದು ಕಷ್ಟದ ಪಾತ್ರವನ್ನು ಆಯ್ಕೆ ಮಾಡಿಕೊಂಡಿರುವುದು ವಿಶೇಷ. ಮನೆ ಕೆಲಸ ಮಾಡಿಕೊಂಡು, ರೋಗಿಯನ್ನು ಆರೈಕೆ ಮಾಡುವ ಪಾತ್ರ ಅವರದ್ದು. ಆಲ್ಝೈಮರ್ ಖಾಯಿಲೆ ಹೊಂದಿರುವ ವ್ಯಕ್ತಿಯಾಗಿ ಪ್ರವೀಣ್ ಸಿಸೋಡಿಯ ಗಮನ ಸೆಳೆಯುತ್ತಾರೆ. ಚಿತ್ರವನ್ನು ಈಗಾಗಲೇ ನೋಡಿರುವೆ. ತುಂಬ ಸೂಕ್ಷ್ಮ ಕಥಾವಸ್ತುವಿನ ಸಿನಿಮಾ' ಎಂದು ಇಂದ್ರಜಿತ್ ಲಂಕೇಶ್ ಹೇಳಿದರು.

ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯ, ಝುರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ, ಸಚಿನ್ ಪಾಟೆಕರ್ ನಟಿಸಿದ್ದಾರೆ. ರಾಜಶೇಖರ್ ಕಥೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

'ರುದ್ರಾಭಿಷೇಕಂ'ನ ಹಾಡು ಬಿಡುಗಡೆ

ವೀರಗಾಸೆ ಕಲೆ ಕುರಿತಾದ ಕಥೆಯನ್ನು ಹೊಂದಿರುವ 'ರುದ್ರಾಭಿಷೇಕಂ' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ವಿಜಯ ರಾಘವೇಂದ್ರ, ಪ್ರಿಯಾಂಕಾ ತಿಮ್ಮೇಶ್ ಜೋಡಿಯಾಗಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ. ವಸಂತ್ ಕುಮಾರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ.

'ನನಗೆ ವೀರಗಾಸೆ ಪಾತ್ರ ಮಾಡುವುದು ತುಂಬಾ ಸವಾಲಾಗಿತ್ತು. ಈ ಪಾತ್ರವನ್ನು ಅನುಭವಿಸಿ ಮಾಡಿದ್ದೇನೆ. ನನ್ನ ಪೂರ್ವಜರ ಕಾಲದಲ್ಲಿ ನಡೆದ ಘಟನೆ ಈಗಿನ ಕಾಲದ ವ್ಯಕ್ತಿಗೆ ಕನೆಕ್ಟ್ ಆಗುತ್ತ ಹೋಗುತ್ತದೆ. ತಂದೆ, ಮಗನಾಗಿ ಎರಡೂ ಪಾತ್ರಗಳನ್ನು ನಿಭಾಯಿಸಿದ್ದೇನೆ ಎಂದರು' ವಿಜಯ ರಾಘವೇಂದ್ರ.

'ದೈವದ ಹಿನ್ನೆಲೆ ಇರುವ ಜನಪದ ಕಲೆಯನ್ನು ನಾಡಿನ ಮನೆ ಮನೆಗೂ ತಲುಪಿಸಬೇಕು ಎನ್ನುವುದೇ ನಮ್ಮ ಉದ್ದೇಶ. ಚಿತ್ರದಲ್ಲಿ ನಾನೂ ಓರ್ವ ತತ್ವಜ್ಞಾನಿಯಾಗಿ ನಟಿಸಿದ್ದೇನೆ. ತಂದೆ, ಮಗ ಎರಡೂ ಪಾತ್ರಗಳ ಜತೆ ಇಡೀ ಚಿತ್ರದಲ್ಲಿ ಬರುವ ನನ್ನ ಪಾತ್ರಕ್ಕೂ ಎರಡು ಗೆಟಪ್ ಇದೆ. ಸದ್ಯ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ದೇವನಹಳ್ಳಿ ಸುತ್ತಮುತ್ತ ಹಾಗೂ ಗೋಕರ್ಣ, ಹೊನ್ನಾವರ, ಕುಮಟ, ಅಘನಾಶಿನಿ ಹಿನ್ನೀರಿನ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕ.

ಫ್ಯಾನ್ ಇಂಡಿಯಾ ಕ್ರಿಯೇಶನ್ಸ್ ಮೂಲಕ ಒಂಬತ್ತು ಮಂದಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ವಿ.ಮನೋಹರ್ ಸಂಗೀತವಿದೆ. ಬಲ ರಾಜವಾಡಿ, ವಿ.ಮನೋಹರ್, ಮನು, ಸನತ್, ಬುಲೆಟ್ ವಿನು, ಮಮತಾ, ನವನಿತಾ ಶೆಟ್ಟಿ, ಮಂಜುಳಾ ಮುಂತಾದವರು ಚಿತ್ರದಲ್ಲಿದ್ದಾರೆ. ಮುತ್ತುರಾಜ್ ಅವರ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ವಿಜಯ ರಾಘವೇಂದ್ರ, ಪ್ರಿಯಾಂಕಾ ತಿಮ್ಮೇಶ್

'ದೃಶ್ಯಂ' ಚಿತ್ರದ ಪೋಸ್ಟರ್

ಮೇ 21ರಂದು 'ದೃಶ್ಯಂ 3' ತೆರೆಗೆ

ಮೋಹನ್ ಲಾಲ್ ನಟಿಸಿ, ಜಿತು ಜೋಸೆಫ್ ನಿರ್ದೇಶಿಸಿರುವ ಬಹುನಿರೀಕ್ಷಿತ 'ದೃಶ್ಯಂ 3' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ಮೂಲ ಸಿನಿಮಾ 'ದೃಶ್ಯಂ'ನಂತೆ ಇಲ್ಲಿಯೂ ಜಾರ್ಜ್‌ಕುಟ್ಟಿ ಕಥೆಯೇ ಮುಂದುವರಿದಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

2015ರಲ್ಲಿ 'ದೃಶ್ಯಂ' ಚಿತ್ರ ತೆರೆಕಂಡು, ಭಾರತೀಯ ಚಿತ್ರರಂಗದಲ್ಲಿ ಹೊಸ ಸಂಚಲನ ಮೂಡಿಸಿತ್ತು. ಈ ಸಿನಿಮಾದ ಎರಡನೇ ಭಾಗ 2022ರಲ್ಲಿ ನೇರವಾಗಿ ಒಟಿಟಿಯಲ್ಲಿ ಬಿಡುಗಡೆ ಆಗಿತ್ತು. ಇದೀಗ ಮೂರನೇ ಭಾಗ ಸಿದ್ಧಗೊಂಡಿದ್ದು, ಮೇ 21ರಂದು ತೆರೆ ಕಾಣಲಿದೆ.

ಮೂಲ ಕಥೆಯ ನಾಯಕ ಜಾರ್ಜ್‌ಕುಟ್ಟಿ, ತನ್ನ ಹಿಂದಿನ ಕೃತ್ಯಗಳ ಬಗ್ಗೆ ಪಶ್ಚಾತ್ತಾಪ ಪಡುತ್ತಿದ್ದಾನೆ. ತನ್ನ ಮಕ್ಕಳು ತನ್ನನ್ನು ಓರ್ವ ಅಪರಾಧಿ ಎಂದು ಭಾವಿಸುತ್ತಿರಬಹುದೇ ಎಂಬ ಆತಂಕ ಅವನನ್ನು ಕಾಡುತ್ತಿದೆ. ಪೊಲೀಸರಿಂದ ತನ್ನ ಕುಟುಂಬವನ್ನು ರಕ್ಷಿಸಲು ಆತ ಈ ಸಲ ಯಾವ ರೀತಿಯ ಹೊಸ ತಂತ್ರಗಳನ್ನು ಹೆಣೆಯುತ್ತಾನೆ ಎಂಬುದೇ ಒಟ್ಟಾರೆ ಕಥೆ ಎಂಬುದು ಟ್ರೇಲರ್‌ನಿಂದ ಗೊತ್ತಾಗುತ್ತಿದೆ.

ಮೋಹನ್ ಲಾಲ್ ಜಾರ್ಜ್‌ಕುಟ್ಟಿಯಾಗಿ ಕಾಣಿಸಿಕೊಂಡಿದ್ದಾರೆ. ಮೀನಾ, ಅನ್ಸಿಬಾ ಹಸನ್ ಮತ್ತು ಎಸ್ತರ್ ಅನಿಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಅನಿಲ್ ಜಾನ್ಸನ್ ಸಂಗೀತ, ಸತೀಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಹಕ್ಕು ಮಂಡಿಸಿದ ಹಿಮಂತ

ಅಸ್ಸಾಂ ರಾಜ್ಯಪಾಲರನ್ನು ಭೇಟಿಯಾದ ಎನ್‌ಡಿಎ ನಾಯಕರು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ನೂತನ ಸರ್ಕಾರ ರಚನೆಗೆ ಹಿಮಂತ ಬಿಸ್ವ ಶರ್ಮಾ ಅವರ ನೇತೃತ್ವದಲ್ಲಿ ಎನ್‌ಡಿಎ ಮುಖಂಡರು ಭಾನುವಾರ ಹಕ್ಕು ಮಂಡಿಸಿದರು.

ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಆಹ್ವಾನ ನೀಡುವಂತೆ ಕೋರಿದರು.

'ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗಿದ್ದೇನೆ. ಮಿತ್ರಪಕ್ಷಗಳು ನನ್ನನ್ನು ತಮ್ಮ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿವೆ. ಎನ್‌ಡಿಎಯ 102 ಶಾಸಕರ ಬೆಂಬಲವಿದೆ. ಅವರೆಲ್ಲರೂ ಸಹಿ ಮಾಡಿರುವ ಪತ್ರವೂ ನನ್ನ ಬಳಿಯಿದೆ' ಎಂದು ರಾಜ್ಯಪಾಲರಿಗೆ ಪತ್ರ ಸಲ್ಲಿಸಿದ ಬಳಿಕ ಹಿಮಂತ ಬಿಸ್ವ ಶರ್ಮಾ ಅವರು ತಿಳಿಸಿದರು.

ಎಜಿಪಿ ಮುಖ್ಯಸ್ಥ ಅತುಲ್ ಬೋರಾ, ಬಿಪಿಎಫ್ ನಾಯಕ ರಿಹೋನ್ ದೈಮಾರಿ ತಮ್ಮ ಪಕ್ಷಗಳ ಬೆಂಬಲದ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದರು.

ಹಿಮಂತ ಬಿಸ್ವ ಶರ್ಮಾ

ಹಿಮಂತ ಅವರನ್ನು ಅಸ್ಸಾಂನ ಮುಖ್ಯಮಂತ್ರಿಯಾಗಿ ನೇಮಿಸಿರುವ ರಾಜ್ಯಪಾಲರು, ಮೇ 12ರಂದು ಪ್ರಮಾಣವಚನ ಸ್ವೀಕರಿಸುವಂತೆ ಸೂಚನೆ ನೀಡಿದ್ದಾರೆ.

ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುತ್ತಿದೆ. 2016ರಲ್ಲಿ ಈಗಿನ ಕೇಂದ್ರ ಸಚಿವ ಸರ್ಬಾನಂದ ಸೋನೊವಾಲ್ ನೇತೃತ್ವದಲ್ಲಿ ಮೊದಲ ಬಾರಿಗೆ ರಾಜ್ಯದ ಚುಕ್ಕಾಣಿ ಹಿಡಿದಿತ್ತು.

ಹಿಮಂತ ಅವರು 2021ರಲ್ಲಿ ಅಸ್ಸಾಂ ಮುಖ್ಯಮಂತ್ರಿಯಾದರು. ಸತತ ಎರಡನೇ ಅವಧಿಗೂ ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ಸಿಗರಲ್ಲದ ಏಕೈಕ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಭಾಜನರಾಗಲಿದ್ದಾರೆ.

ಸಿ.ಎಂ ಗಾದಿಯೆಡೆಗಿನ ರೋಚಕ ಪಯಣ

ಪ್ರಜಾವಾಣಿ ವಾರ್ತೆ

ಚೆನ್ನೈ: ಸಿನಿಮಾದ ಗ್ಲಾಮರಸ್ ಜಗತ್ತಿನಿಂದ ರಾಜಕೀಯಕ್ಕೆ ಕಾಲಿರಿಸಿ, ಮುಖ್ಯಮಂತ್ರಿ ಹುದ್ದೆಗೆ ಏರಿರುವ ಸಿ. ಜೋಸೆಫ್ ವಿಜಯ್ ಅವರ ಪಯಣವು ಒಂದು 'ಬ್ಲಾಕ್‌ಬಸ್ಟರ್' ಸಿನಿಮಾಕ್ಕಿಂತ ಕಡಿಮೆಯಲ್ಲ.

ರಾಜಕೀಯ ಪಕ್ಷ ಸ್ಥಾಪಿಸಿ, ಎದುರಿಸಿದ ಮೊದಲ ಚುನಾವಣೆಯಲ್ಲಿಯೇ ಮುಖ್ಯಮಂತ್ರಿಯಾದ ಎಂ.ಜಿ. ರಾಮಚಂದ್ರನ್ ಮತ್ತು ಎನ್.ಟಿ. ರಾಮರಾವ್ ಅವರಂತಹ ಗಣ್ಯರ ಸಾಲಿಗೆ 51 ವರ್ಷದ ವಿಜಯ್ ಅವರು ಸೇರಿದ್ದಾರೆ.

ಕೇವಲ ಎರಡು ವರ್ಷಗಳ ಹಿಂದೆ (2024ರಲ್ಲಿ) 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷ ಸ್ಥಾಪಿಸಿ ವಿಧಾನಸಭಾ ಚುನಾವಣೆಯಲ್ಲಿ ಎಲ್ಲ 234 ಕ್ಷೇತ್ರಗಳಲ್ಲಿ ಮೊದಲ ಬಾರಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಅವರು, ತಮ್ಮ ಪ್ರಥಮ ಪ್ರಯತ್ನದಲ್ಲೇ ಅಚ್ಚರಿಯ ಗೆಲುವು ದಕ್ಕಿಸಿಕೊಂಡಿದ್ದಾರೆ.

ದ್ರಾವಿಡ ರಾಜಕಾರಣದ ಹೆಸರಿನಲ್ಲಿ ರಾಜ್ಯದಲ್ಲಿ ಪಾರಮ್ಯ ಸಾಧಿಸಿದ್ದ ಡಿಎಂಕೆ, ಎಐಎಡಿಎಂಕೆಯಂಥ ಪಕ್ಷಗಳನ್ನು ಮತ್ತು ಅವುಗಳ ಅನುಭವಿ ನಾಯಕರನ್ನು ಮಣಿಸಿ, ತಮಿಳುನಾಡಿನ ಮುಖ್ಯಮಂತ್ರಿ ಗಾದಿ ಏರಿರುವುದು ಕಡಿಮೆ ಸಾಧನೆಯೇನಲ್ಲ.

ವಿಜಯ್ ಅವರು ಪ್ರಚಾರದ ವೇಳೆ ತಮ್ಮ ಎದುರಾಳಿಗಳಂತೆ ಬಿಸಿಲಿನಲ್ಲಿ ಬೆವರು ಸುರಿಸಲಿಲ್ಲ. ದೀರ್ಘ ರಾಜಕೀಯ ಭಾಷಣಗಳನ್ನೂ ಮಾಡಲಿಲ್ಲ. ದೂರದರ್ಶನ ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಜಾಹೀರಾತು ನೀಡಲು ಹಣ ಖರ್ಚು ಮಾಡಲಿಲ್ಲ. ನಟರಾಗಿ ಗಳಿಸಿದ ಜನಪ್ರಿಯತೆಯೊಂದಿಗೆ ಅವರು ಜನರೊಂದಿಗೆ ಭಾವನಾತ್ಮಕ ಸಂಪರ್ಕ ಸಾಧಿಸಿದರು. 'ಪಕ್ಕದ ಮನೆಯ ಹುಡುಗ'ನ ರೀತಿಯಲ್ಲಿ 'ನನಗೆ ಒಂದೇ ಒಂದು ಅವಕಾಶ ಕೊಡಿ' ಎಂದು ಮತದಾರರಿಗೆ ಮನವಿ ಮಾಡಿದರು. ಇದರಿಂದ ಯುವಜನರು ಮತ್ತು ಮಹಿಳೆಯರ ಮನ ಗೆಲ್ಲುವಲ್ಲಿ ಯಶಸ್ವಿಯಾದರು.

'ಟಿವಿಕೆ ಪ್ರಾರಂಭಿಸಿದ ಬಳಿಕ ಯಾವುದೇ ಮನೆಗೆ ಭೇಟಿ ನೀಡುವುದಿಲ್ಲ. ಪ್ರತಿ ಮನೆಗೆ ಪ್ರವೇಶಿಸಿದ ನಂತರವೇ ರಾಜಕೀಯಕ್ಕೆ ಧುಮುಕಿದ್ದೇನೆ' ಎಂದು ನಿರಂತರವಾಗಿ ಹೇಳಿಕೊಂಡದ್ದು ಕೂಡಾ ಅವರಿಗೆ ಜನರ ಜತೆ ಭಾವನಾತ್ಮಕ ಸಂಬಂಧ ಬೆಳೆಸಲು ಸಾಧ್ಯವಾಯಿತು.

ವಿಜಯ್ ಅವರು ಸರ್ಕಾರವನ್ನು ಮುನ್ನಡೆಸುವಾಗ ಹಲವು ಸವಾಲು ಎದುರಿಸಬೇಕಾಗುತ್ತದೆ. ಚುನಾವಣಾ ಭರವಸೆಗಳನ್ನು ಈಡೇರಿಸುವುದು ಪ್ರಮುಖವಾದುದು. ಇದು ಸರ್ಕಾರದ ಬೊಕ್ಕಸಕ್ಕೆ ಮತ್ತಷ್ಟು ಹೊರೆಯಾಗಲಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ರಾಜ್ಯದಲ್ಲಿ ವ್ಯಾಪಕವಾಗಿರುವ ಮಾದಕ ವಸ್ತು ಪಿಡುಗನ್ನು ನಿಲ್ಲಿಸುವ ಸವಾಲು ಅವರ ಮುಂದಿದೆ.

ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ, ಭರವಸೆ ನೀಡಿರುವ ಎಲ್ಲ ಯೋಜನೆಗಳನ್ನು ಜಾರಿಗೊಳಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ಈ ಸತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡಲು ವಿಜಯ್ ಅವರು ತಮ್ಮ ವರ್ಚಸ್ಸು ಮತ್ತು ಜನರೊಂದಿಗಿನ ಭಾವನಾತ್ಮಕ ಸಂಬಂಧವನ್ನು ಬಳಸಿಕೊಳ್ಳಬೇಕಾಗುತ್ತದೆ.

ಕೇರಳದಲ್ಲಿ ಮುಖ್ಯಮಂತ್ರಿ ಆಯ್ಕೆ ಕಗ್ಗಂಟಾಗಿರುವುದಕ್ಕೆ ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿರುವುದೇ ಕಾರಣ

ಹೌದು | ಇಲ್ಲ | ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ



ತಮಿಳುನಾಡಿನ ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬಂದಿದ್ದ ಚಿತ್ರನಟಿ ತ್ರಿಶಾ ಅವರು ಅಭಿಮಾನಿಗಳತ್ತ ಕೈಬೀಸಿದರು ಪಿಟಿಐ ಚಿತ್ರ

ಸಿ.ಎಂ ಆಕಾಂಕ್ಷಿಗಳೊಂದಿಗೆ ಖರ್ಗೆ, ರಾಹುಲ್ ಚರ್ಚೆ

ಕೇರಳಂ: ನಿರ್ಧಾರ ಮರೀಚಿಕೆ

• ಶೆಮಿನ್ ಜಾಯ್

ನವದೆಹಲಿ: ತಮಿಳುನಾಡಿನಲ್ಲಿ ಮಿತ್ರಪಕ್ಷ ಡಿಎಂಕೆಗೆ ತಡವಿಲ್ಲದೇ ಕೈಕೊಟ್ಟ ಕಾಂಗ್ರೆಸ್, ನಟ ವಿಜಯ್ ನೇತೃತ್ವದ ಟಿವಿಕೆ ಬೆಂಬಲಿಸಿ ಸರ್ಕಾರ ರಚನೆಯಲ್ಲಿ ನೆರವಾಯಿತು. ಆದರೆ, ಸ್ಪಷ್ಟ ಬಹುಮತ ಹೊಂದಿರುವ ಕೇರಳಂನಲ್ಲಿ ಮಾತ್ರ ಮುಖ್ಯಮಂತ್ರಿ ಆಯ್ಕೆ ಕುರಿತಂತೆ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮಾಡುತ್ತಿದೆ.

ಆಕಾಂಕ್ಷಿಗಳ ಪೈಕಿ ಯಾರಿಗೆ ಕಾರ್ಯಕರ್ತರ ಬೆಂಬಲ ಅಧಿಕವಿದೆಯೊ ಅವರನ್ನೇ ಮುಖ್ಯಮಂತ್ರಿ ಗಾದಿ ಮೇಲೆ ಕೂರಿಸಲು ಕಾಂಗ್ರೆಸ್ ನಾಯಕತ್ವ ಮುಂದಾಗಿರುವುದು ಪಕ್ಷದ ಕಾರ್ಯಕರ್ತರಲ್ಲಿ ಒಡಕು ಮೂಡಿಸಿದೆ. ಇದು ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ವಿಳಂಬವಾಗುವುದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ.

ಕೆ.ಸಿ.ವೇಣುಗೋಪಾಲ್, ವಿ.ಡಿ. ಸತೀಶನ್ ಹಾಗೂ ರಮೇಶ ಚೆನ್ನಿತ್ತಲ ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಈ ಮೂವರೊಂದಿಗೆ ಪ್ರತ್ಯೇಕವಾಗಿ ಹಾಗೂ ಒಟ್ಟಾಗಿ ಮಾತುಕತೆಯನ್ನೂ ನಡೆಸಿದ್ದಾರೆ. ಪಕ್ಷದ ಕೇರಳ ಘಟಕದ ಮುಖ್ಯಸ್ಥ ಸಣ್ಣಿ ಜೋಸೆಫ್, ಎಐಸಿಸಿಯ ರಾಜ್ಯ ಉಸ್ತುವಾರಿ ದೀಪಾ ದಾಸ್‌ಮುನ್ಷಿ, ವೀಕ್ಷಕರಾದ ಅಜಯ್ ಮಾಕೆನ್ ಹಾಗೂ ಮುಕುಲ್ ವಾಸ್ನಿಕ್ ಅವರೊಂದಿಗೆ ಶನಿವಾರ ಮೂರು ಗಂಟೆ ಚರ್ಚೆಯನ್ನೂ ನಡೆಸಿದ್ದಾರೆ. ಇಷ್ಟಾದರೂ ಯಾವುದೇ ನಿರ್ಧಾರಕ್ಕೆ ಬರಲು ಪಕ್ಷಕ್ಕೆ ಸಾಧ್ಯವಾಗಿಲ್ಲ.

ವ್ಯಾಪಕ ಸಮಾಲೋಚನೆಗೆ ಒತ್ತು

ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಚಾರದಲ್ಲಿ ಅವಸರವಾಗಿ ನಿರ್ಧಾರ ಕೈಗೊಳ್ಳುವುದಕ್ಕೂ ಖರ್ಗೆ ಮತ್ತು ರಾಹುಲ್ ಅವರು ಸಿದ್ಧರಿಲ್ಲ. ನಾಯಕರಾದ ಸೋನಿಯಾ ಗಾಂಧಿ ಹಾಗೂ ಎ.ಕೆ.ಆ್ಯಂಟನಿ ಅವರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸುವ ನಿರೀಕ್ಷೆ ಇದೆ ಎನ್ನಲಾಗಿದೆ.

ಸತೀಶನ್ ಅವರೇ ಮುಖ್ಯಮಂತ್ರಿಯಾಗಬೇಕು ಎಂಬುದಕ್ಕೆ ಜನರಿಂದ ಭಾರಿ ಬೆಂಬಲ ಇದೆ ಎಂಬ ಗ್ರಹಿಕೆ ಪಕ್ಷದಲ್ಲಿ ಮನೆಮಾಡಿದೆ. ಈ ಕಾರಣಕ್ಕೆ, ಪಕ್ಷದ ರಾಜ್ಯ ಘಟಕದ ಹಿರಿಯ ನಾಯಕರ ಅಭಿಪ್ರಾಯಗಳನ್ನು ಸಂಗ್ರಹಿಸಲು ಖರ್ಗೆ ಹಾಗೂ ರಾಹುಲ್ ಮುಂದಾಗಿದ್ದಾರೆ ಎನ್ನಲಾಗಿದೆ.

ವಿದ್ಯಮಾನಗಳಿಂದ ಅಸಮಾಧಾನ

ಕೇರಳಂನಲ್ಲಿ ವಿದ್ಯಮಾನಗಳಿಂದ ಖರ್ಗೆ, ರಾಹುಲ್ ಗಾಂಧಿ ಅವರು ಅಸಮಾಧಾನಗೊಂಡಿದ್ದಾರೆ. ಅದರಲ್ಲೂ, ಸತೀಶನ್ ಪರ ಬೆಂಬಲಿಗರಿಂದ ನಡೆದ ಪ್ರದರ್ಶನ, ಎಲ್ಲ ಆಕಾಂಕ್ಷಿಗಳ ಪರ ಬ್ಯಾನರ್‌ಗಳ ಅಳವಡಿಕೆ ಇದಕ್ಕೆ ಕಾರಣ ಎನ್ನಲಾಗಿದೆ.

ಇಂತಹ ಬಣಗಳ ಜಗಳಕ್ಕೆ ಕಡಿವಾಣ ಹಾಕುವುದು ಹಾಗೂ ಮೂವರಿಂದಲೂ ಜಂಟಿ ಹೇಳಿಕೆ ಹೊರಬೀಳುವಂತೆ ಮಾಡುವುದು ಪಕ್ಷದ ನಾಯಕತ್ವದ ಮೊದಲ ಕಾರ್ಯವಾಗಿದೆ ಎನ್ನಲಾಗಿದೆ.

ಆದರೆ, ಈ ಮೂವರ ಬೆಂಬಲಿಗರಿಂದ ಪ್ರದರ್ಶನ ನಡೆಯುತ್ತಿರುವ ವೇಳೆ, ಮುಖ್ಯಮಂತ್ರಿ ಆಗುವವರ ಕುರಿತು ಮಾಡುವ ಘೋಷಣೆ ಪಕ್ಷವನ್ನು ಇಬ್ಭಾಗ ಮಾಡಬಹುದು ಎಂಬ ಆತಂಕ ಕೂಡ ವರಿಷ್ಠರನ್ನು ಕಾಡುತ್ತಿದೆ. ಒಂದೊಮ್ಮೆ ಈ ರೀತಿ ಘೋಷಣೆ ಮಾಡಿದಲ್ಲಿ, ಅಧಿಕಾರ ಸ್ವೀಕಾರದ ಸಂಭ್ರಮವನ್ನೇ ಕಸಿಯಬಹುದು. ಭರ್ಜರಿ ಜಯ ಗಳಿಸಿರುವ ಮೈತ್ರಿಕೂಟದ ನೂತನ ಸರ್ಕಾರವು ಅಹಿತಕರ ಆರಂಭ ಮಾಡುವುದು ಕೂಡ ವರಿಷ್ಠರಿಗೆ ಇಷ್ಟ ಇಲ್ಲ ಎಂದು ಇವೇ ಮೂಲಗಳು ಹೇಳುತ್ತವೆ

ಶಾಸಕಾಂಗ ಪಕ್ಷದ ಬೆಂಬಲ ವೇಣುಗೋಪಾಲ್ ಅವರಿಗಿದ್ದರೆ, ಪಕ್ಷದ ಕಾರ್ಯಕರ್ತರು ಹಾಗೂ ಮಿತ್ರ ಪಕ್ಷಗಳು ಸತೀಶನ್ ಪರ ಒಲವು ಹೊಂದಿದ್ದಾರೆ. ಇನ್ನು, ಚೆನ್ನಿತ್ತಲ ಅವರು ಪಕ್ಷದ ಹಿರಿಯ ನಾಯಕರಾಗಿದ್ದು, ಈ ಹಿಂದೆ ಪಕ್ಷ ಮತ್ತು ಸರ್ಕಾರದಲ್ಲಿ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸಿದ ಅನುಭವ ಹೊಂದಿದ್ದಾರೆ. ಇದನ್ನೇ ದಾಳವಾಗಿಸಿಕೊಂಡು, ಮುಖ್ಯಮಂತ್ರಿ ಹುದ್ದೆಗೇರಲು ಚೆನ್ನಿತ್ತಲ ಮುಂದಾಗಿದ್ದಾರೆ ಎನ್ನಲಾಗಿದೆ.

ವಂದೇ ಮಾತರಂ: ಸಿಪಿಐ ಆಕ್ಷೇಪ

ಚೆನ್ನೈ (ಪಿಟಿಐ): ನಟ ವಿಜಯ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭದಲ್ಲಿ ನಾಡಗೀತೆ 'ತಮಿಳ್ ತಾಯ್ ವಾಜ್ತು' ಹಾಡುವುದಕ್ಕೂ ಮೊದಲು 'ವಂದೇ ಮಾತರಂ' ಹಾಡಿರುವ ಬಗ್ಗೆ ಟಿವಿಕೆ ಮಿತ್ರ ಪಕ್ಷವಾದ ಸಿಪಿಐ ಆಕ್ಷೇಪ ವ್ಯಕ್ತಪಡಿಸಿದೆ.

'ಶಿಷ್ಟಾಚಾರದ ಪ್ರಕಾರ ರಾಜ್ಯ ಸರ್ಕಾರದ ಸಮಾರಂಭಗಳಲ್ಲಿ ನಾಡಗೀತೆಗೆ ಮೊದಲ ಆದ್ಯತೆ ನೀಡಬೇಕಿತ್ತು. ನಾಡಗೀತೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡು, ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳ್ಳುವುದು ರಾಜ್ಯದ ಸ್ಥಾಪಿತ ಸಂಪ್ರದಾಯ. ಆದರೆ, ಈ ಬಾರಿ ಮೊದಲಿಗೆ 'ವಂದೇ ಮಾತರಂ' ಹಾಡಲಾಗಿದ್ದು, ನಂತರದಲ್ಲಿ ರಾಷ್ಟ್ರಗೀತೆ ಮತ್ತು ಕೊನೆಯ ಸ್ಥಾನವನ್ನು ನಾಡಗೀತೆಗೆ ನೀಡಲಾಗಿತ್ತು' ಎಂದು ಸಿಪಿಐನ ಕಾರ್ಯದರ್ಶಿ ಎಂ.ವೀರ ಪಾಂಡ್ಯನ್ ಹೇಳಿದ್ದಾರೆ.



ಎಂ.ವೀರ ಪಾಂಡ್ಯನ್

'ಲೋಕಭವನದ ನಿರ್ದೇಶನದ ಮೇರೆಗೆ ನಾಡಗೀತೆಗೆ ಈ ರೀತಿ ಮೂರನೇ ಸ್ಥಾನ ನೀಡಲಾಗಿದ್ದು, ಇದು ನಿಯಮಗಳ ಉಲ್ಲಂಘನೆಯಾಗಿದೆ. ತಮಿಳುನಾಡು ಸರ್ಕಾರವು ಈ ಬಗ್ಗೆ ಸಾರ್ವಜನಿಕ ಸ್ಪಷ್ಟನೆ ನೀಡಬೇಕಿದೆ. ಜತೆಗೆ ಈ ಲೋಪಕ್ಕೆ ಕಾರಣರಾದವರನ್ನು ಗುರುತಿಸಬೇಕಿದೆ' ಎಂದೂ ವೀರ ಪಾಂಡ್ಯನ್ ಆಗ್ರಹಿಸಿದ್ದಾರೆ.

ಅಲ್ಲದೇ, ಸಮಾರಂಭದಲ್ಲಿ ಭಾಗವಹಿಸುತ್ತಿರುವ ಪ್ರಮುಖ ಪಕ್ಷವಾಗಿರುವ ವಿಜಯ್ ನೇತೃತ್ವದ ಟಿವಿಕೆ ನಾಡಗೀತೆಗೆ ಮೊದಲ ಆದ್ಯತೆ ನೀಡಿರುವುದನ್ನು ಖಾತರಿಪಡಿಸಿಕೊಳ್ಳಬೇಕಿತ್ತು. ಮುಂದೆ ಈ ರೀತಿಯ ತಪ್ಪುಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು ಎಂದೂ ಒತ್ತಾಯಿಸಿದ್ದಾರೆ.

'ಫ್ಯಾಸಿಸ್ಟರ ವಿರುದ್ಧ ಹೋರಾಡೋಣ'

ಬೆಂಗಳೂರು: 'ಸಿನಿಮಾ ಜಗತ್ತಿನಿಂದ ಜನಸೇವೆಯ ಕಡೆಗೆ ಪ್ರಜಾಸತ್ತಾತ್ಮಕ ಪಯಣ ಆರಂಭಿಸಿರುವ ವಿಜಯ್ ಜತೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ನಮ್ಮ ಎರಡು ರಾಜ್ಯಗಳ ನಡುವಿನ ಪಾಲುದಾರಿಕೆ ಮತ್ತು ಜಾತ್ಯತೀತ, ಸಾಂವಿಧಾನಿಕ ಮೌಲ್ಯಗಳನ್ನು ಗಟ್ಟಿಗೊಳಿಸಲು ಒಂದಾಗಿ ನಡೆಯೋಣ. ವಿಭಜಕ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸಂಘಟಿತ ಹೋರಾಟ ನಡೆಸಲು ಬಯಸುತ್ತೇನೆ' ಎಂದಿದ್ದಾರೆ.

'ಕರ್ನಾಟಕ ಮತ್ತು ತಮಿಳುನಾಡಿನ ನಾಗರಿಕ ಸಂಬಂಧವು ಆಳವಾಗಿದ್ದು ಸಾಂಸ್ಕೃತಿಕ ಬಾಂಧವ್ಯ ಹೊಂದಿದೆ. ಸಾಮಾಜಿಕ ನ್ಯಾಯ, ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ಸಹಕಾರದಂತಹ ಸಾಮಾನ್ಯ ಆಶಯಗಳನ್ನು ಹಂಚಿಕೊಳ್ಳಲು ಉತ್ಸುಕನಾಗಿದ್ದೇನೆ' ಎಂದೂ ಹೇಳಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ವಿಜಯ್ ಸಂಪುಟದ ಸದಸ್ಯರ ಕಿರು ಪರಿಚಯ

ಯುವಜನ– ಅನುಭವಿಗಳ ಮಿಶ್ರಣ

ಎನ್.ಆನಂದ್

'ಬುಸ್ಸಿ' ಎಂದೇ ಖ್ಯಾತರಾದ ಎನ್. ಆನಂದ್ 15 ವರ್ಷಗಳಿಂದ ಟಿವಿಕೆ ಮುಖ್ಯಸ್ಥ ವಿಜಯ್ ಅವರ ಅತ್ಯಂತ ನಿಕಟವರ್ತಿ. 2006ರಿಂದ 2011ರವರೆಗೆ ಪುದುಚೆರಿ ಮುನ್ನೇತ್ರ ಕಾಂಗ್ರೆಸ್‌ನಿಂದ ಪುದುಚೆರಿಯ ಬುಸ್ಸಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ವಿಜಯ್ ಮಕ್ಕಳ ಇಯಕ್ಕಂ (ವಿಎಂಐ) ಮುಖ್ಯಸ್ಥರಾಗಿದ್ದ ಆನಂದ್, ವಿಎಂಐ ಅನ್ನು ಟಿವಿಕೆಯಾಗಿ ಪರಿವರ್ತಿಸುವಲ್ಲಿ ಮತ್ತು ಪಕ್ಷದ ಅಭ್ಯರ್ಥಿಗಳ ಆಯ್ಕೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಟಿವಿಕೆ ನಾಯಕರಲ್ಲಿ ಎರಡನೇ ಸ್ಥಾನದಲ್ಲಿರುವ ಅವರು ತಮಿಳುನಾಡಿನ 17ನೇ ವಿಧಾನಸಭೆಯ ಸದಸ್ಯರಾಗಿ ವಿಜಯ್ ಸಂಪುಟ ಸೇರಿದ್ದಾರೆ.

ಆಧವ್ ಅರ್ಜುನ

ಬ್ಯಾಸ್ಕೆಟ್ ಬಾಲ್ ಪಟು, ಭಾರತೀಯ ಬ್ಯಾಸ್ಕೆಟ್ ಬಾಲ್ ಫೆಡರೇಷನ್‌ನ ಹಾಲಿ ಅಧ್ಯಕ್ಷರೂ ಹೌದು. ರಾಜಕೀಯ ತಂತ್ರಗಾರನಾದ ಆಧವ್, ಅಲ್ಪಾವಧಿಗೆ ವಿಡುತಲೈ ಚಿರುತೈಗಳ್ ಕಚ್ಚಿ (ವಿಸಿಕೆ) ಪಕ್ಷದ ಉಪ ಪ್ರಧಾನ ಕಾರ್ಯದರ್ಶಿ ಆಗಿದ್ದರು. ವಿಸಿಕೆ ಮುಖ್ಯಸ್ಥ ತೋಲ್ ತಿರುಮಾವಳವನ್ ಸಖ್ಯ ತೊರೆದು ಟಿವಿಕೆ ಸೇರಿದ್ದ ಅವರು, ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿಯಂತಹ ಪ್ರಭಾವಿ ಹುದ್ದೆಯಲ್ಲಿದ್ದರು. ವಿಜಯ್ ಅವರಿಗೆ ಹೆಚ್ಚು ಆಪ್ತರಾಗಿದ್ದು, ಟಿವಿಕೆ ಬೆಳವಣಿಗೆಯಲ್ಲಿ ಗಣನೀಯ ಕೆಲಸ ಮಾಡಿದ್ದರು. ವಿಳ್ಳಿವಾಕ್ಕಂ ಕ್ಷೇತ್ರದಿಂದ ಆಯ್ಕೆಯಾಗಿರುವ ಆಧವ್ 'ಲಾಟರಿ ದೊರೆ' ಎಂದೇ ಹೆಸರಾಗಿರುವ ಸ್ಯಾಂಟಿಯಾಗೋ ಮಾರ್ಟಿನ್ ಅವರ ಅಳಿಯ.

ಅರುಣ್‌ರಾಜ್

ವೃತ್ತಿಯಿಂದ ವೈದ್ಯರಾದ ಕೆ.ಜಿ. ಅರುಣ್‌ರಾಜ್, ಭಾರತೀಯ ರೆವೆನ್ಯೂ ಸೇವೆಯ (ಐಆರ್‌ಎಸ್) ಅಧಿಕಾರಿಯಾಗಿದ್ದರು. ಐಆರ್‌ಎಸ್ ಅಧಿಕಾರಿ ಹುದ್ದೆಗೆ 2025ರಲ್ಲಿ ರಾಜೀನಾಮೆ ನೀಡಿದ್ದ ಅವರು, ವಿಜಯ್ ನೇತೃತ್ವದ ಟಿವಿಕೆ ಸೇರಿದ್ದರು. ಪಕ್ಷದ ನೀತಿ ಮತ್ತು ಪ್ರಚಾರ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಕೃಷ್ಣಗಿರಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರವೊಂದರಲ್ಲಿ ಕೆಲ ಕಾಲ ಸರ್ಕಾರಿ ವೈದ್ಯಾಧಿಕಾರಿಯಾಗಿಯೂ ಕೆಲಸ ಮಾಡಿದ್ದರು. ಕರೂರ್ ಕಾಲ್ತುಳಿತ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೆ ವಿಜಯ್ ಅವರ ಸಂದೇಶ ತಲುಪಿಸಿ, ಮನವೊಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ವೆಂಕಟರಮಣನ್

ಮೈಲಾಪೋರ್ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಪಿ. ವೆಂಕಟರಮಣನ್, ಟಿವಿಕೆ ಪಕ್ಷದ ಖಜಾಂಚಿ. ವೃತ್ತಿಯಿಂದ ವಕೀಲರಾಗಿರುವ ಇವರು, ಹಲವು ವರ್ಷಗಳಿಂದ ವಿಜಯ್ ಅವರೊಂದಿಗೆ ಗುರುತಿಸಿಕೊಂಡಿದ್ದರು. ಪಕ್ಷದ ಬ್ರಾಹ್ಮಣ ನಾಯಕರಲ್ಲಿ ಪ್ರಮುಖರು. ವಿಜಯ್ ಅವರ ಆತ್ಮೀಯ ಗೆಳೆಯನಾದ ಕಾರಣದಿಂದಲೇ ಪಕ್ಷದ ಮುಂಚೂಣಿ ನಾಯಕರಾಗಿ ಹೊರಹೊಮ್ಮಿದ್ದರು.

ನಿರ್ಮಲ್ ಕುಮಾರ್

ಟಿವಿಕೆಯ ಮಾಹಿತಿ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮ ವಿಭಾಗಗಳ ಉಸ್ತುವಾರಿ ಹೊಂದಿದ್ದ ನಿರ್ಮಲ್ ಕುಮಾರ್, ಅದಕ್ಕೂ ಮುನ್ನ ಬಿಜೆಪಿ ಮತ್ತು ಎಐಎಡಿಎಂಕೆ ಪಕ್ಷಗಳ ಐಟಿ ಘಟಕಗಳಲ್ಲಿ ಕೆಲಸ ಮಾಡಿದ್ದರು. ಮದುರೈನ ತಿರುಪ್ಪಾರಕುಂದ್ರಂ ಕ್ಷೇತ್ರದಿಂದ ಆಯ್ಕೆಯಾಗಿರುವ ಇವರು, ಚುನಾವಣೋತ್ತರ ಮೈತ್ರಿಯ ಮಾತುಕತೆಗಳಲ್ಲಿ ಮಹತ್ತರ ಪಾತ್ರ ನಿರ್ವಹಿಸಿದ್ದರು. ಎಡ ಪಕ್ಷಗಳ ನಾಯಕರ ಮನವೊಲಿಸಿ ಟಿವಿಕೆ ನೇತೃತ್ವದ ಸರ್ಕಾರಕ್ಕೆ ಅವರ ಬೆಂಬಲ ಪಡೆಯಲು ಕಾರಣಕರ್ತರು. ಎಂಜಿನಿಯರಿಂಗ್ ಮತ್ತು ಕಾನೂನು ಪದವೀಧರರಾಗಿರುವ ಇವರು, ಡಿಜಿಟಲ್ ಮಾಧ್ಯಮಗಳ ಮೂಲಕ ಟಿವಿಕೆಯು ಜನರನ್ನು ತಲುಪುವಲ್ಲಿ ಯಶಸ್ವಿಯಾಗುವಂತಹ ಕಾರ್ಯತಂತ್ರ ರೂಪಿಸಿದ್ದರು.

ರಾಜ್‌ಮೋಹನ್

2008–09ರಲ್ಲಿ 'ತಮಿಳ್ ಪೇಚ್ಚು ಎಂಗಳ್ ಮೂಚ್ಚು' (ತಮಿಳ್ ನಮ್ಮ ಉಸಿರು) ಶೀರ್ಷಿಕೆಯ ಟೆಲಿವಿಷನ್ ರಿಯಾಲಿಟಿ ಶೋ ಮೂಲಕ ಎ. ರಾಜ್‌ಮೋಹನ್ ಜನಪ್ರಿಯರಾದರು. ಬಳಿಕ ಜನಪ್ರಿಯ ಮಾಧ್ಯಮ ವ್ಯಕ್ತಿತ್ವ ಹಾಗೂ ಯೂಟ್ಯೂಬರ್ ಆಗಿ ಹೊರಹೊಮ್ಮಿದ ಅವರು, 'ಪುಟ್ ಚಟ್ನಿ' ರಾಜ್‌ಮೋಹನ್ ಎಂದೇ ಖ್ಯಾತರಾದರು. ನೀಟ್ ವಿರುದ್ಧ ಮಾತನಾಡುವ ಮೂಲಕ ತಮಿಳುನಾಡಿನಲ್ಲಿ ಜನಪ್ರಿಯತೆ ಗಳಿಸಿದರು. ಕೆಲ ಕಾಲ ಸಿನಿಮಾ ನಿರ್ದೇಶನ ಮಾಡಿದ ರಾಜ್‌ಮೋಹನ್, ಬಳಿಕ ಟಿವಿಕೆ ಸೇರಿ ಪಕ್ಷದ ಪ್ರಚಾರ ವಿಭಾಗದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಎಗ್ಮೋರ್ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಕೀರ್ತನಾ ಸಂಪತ್

ಶಿವಕಾಶಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕೀರ್ತನಾ ಸಂಪತ್ ಅವರು ವಿಜಯ್ ಸಂಪುಟದ ಅತಿ ಕಿರಿಯ ಸದಸ್ಯೆ. ರಾಜಕೀಯ ಪ್ರವೇಶಕ್ಕೂ ಮೊದಲು ಐಪ್ಯಾಕ್‌ನಲ್ಲಿ ಕಾರ್ಯ ನಿರ್ವಹಿಸಿದ್ದ ಇವರು, ರಾಜಕೀಯ ಸಲಹೆ ಮತ್ತು ಡಿಜಿಟಲ್ ಪ್ರಚಾರ ತಂತ್ರಗಾರಿಕೆಯಲ್ಲಿ ಕೆಲಸ ಮಾಡಿದ್ದರು. ಸಕ್ರಿಯ ರಾಜಕಾರಣ ಪ್ರವೇಶಿಸುವ ಮೊದಲು ಟಿಡಿಪಿ, ಟಿಎಂಸಿ ಮತ್ತು ಡಿಎಂಕೆ ಪಕ್ಷಗಳಿಗೆ ಪ್ರಚಾರ ಸಲಹೆಗಾರ್ತಿಯಾಗಿಯೂ ಕೆಲಸ ಮಾಡಿದ್ದರು. ತಮಿಳು, ಇಂಗ್ಲಿಷ್, ಹಿಂದಿ ಮತ್ತು ತೆಲುಗು ಭಾಷೆಗಳ ಮೇಲೆ ಹಿಡಿತ ಹೊಂದಿರುವ ಇವರು, 'ವಿರುಧುನಗರದ ಮಗಳು' ಎಂದು ಬಿಂಬಿಸಿಕೊಂಡು ಚುನಾವಣೆಯಲ್ಲಿ ಗೆದ್ದು ಬೀಗಿದರು.

ಕೆ.ಎ. ಸೆಂಗೊಟ್ಟೈಯನ್

ವಿಜಯ್ ಸಂಪುಟದ ಅತಿ ಹಿರಿಯ (79 ವರ್ಷ) ಸದಸ್ಯ. ತಮಿಳುನಾಡು ಮುಖ್ಯಮಂತ್ರಿಗಳಾಗಿದ್ದ ಎಂ.ಜಿ. ರಾಮಚಂದ್ರನ್ ಮತ್ತು ಜೆ. ಜಯಲಲಿತಾ ಅವರ ನಿಕಟವರ್ತಿಯಾಗಿದ್ದ ಸೆಂಗೊಟ್ಟೈಯನ್, ಸಾರಿಗೆ, ಶಾಲಾ ಶಿಕ್ಷಣ ಸೇರಿದಂತೆ ಹಲವು ಖಾತೆಗಳ ಸಚಿವರಾಗಿದ್ದರು. ಪಳನಿಸ್ವಾಮಿ ಅವರೊಂದಿಗಿನ ಭಿನ್ನಾಭಿಪ್ರಾಯದ ಕಾರಣದಿಂದ 2025ರಲ್ಲಿ ಎಐಎಡಿಎಂಕೆ ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಬಳಿಕ ಟಿವಿಕೆ ಸೇರಿದ್ದ ಅವರು, ಆಡಳಿತಾತ್ಮಕ ಮತ್ತು ರಾಜಕೀಯ ಅನುಭವದಿಂದ ಪಕ್ಷಕ್ಕೆ ನೆರವಾಗಿದ್ದರು. ಪಕ್ಷದ ಸಮಾವೇಶಗಳ ರೂಪುರೇಷೆ ಸಿದ್ಧಪಡಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿದ್ದರು.

ಡಾ.ಕೆ.ಟಿ. ಪ್ರಭು

ಶಿವಗಂಗಾ ಜಿಲ್ಲೆಯ ಕಾರೈಕುಡಿ ವಿಧಾನಸಭಾ ಕ್ಷೇತ್ರದಿಂದ ಗೆದ್ದಿರುವ ಡಾ.ಟಿ.ಕೆ. ಪ್ರಭು ಟಿವಿಕೆಯ ಎರಡನೇ ಹಂತದ ಜನಪ್ರಿಯ ನಾಯಕರಲ್ಲಿ ಒಬ್ಬರು. ಕಾಂಗ್ರೆಸ್ ನಂಟಿನ ಕುಟುಂಬದಿಂದ ಬಂದ ಇವರು, ಟಿವಿಕೆ ಟಿಕೆಟ್ ನಿರೀಕ್ಷೆಯಲ್ಲಿ ಎರಡು ವರ್ಷಗಳಿಂದ ಸಾರ್ವಜನಿಕ ಕೆಲಸ ಮಾಡುತ್ತಾ ಬಂದಿದ್ದರು. ವೃತ್ತಿಯಿಂದ ದಂತ ವೈದ್ಯರಾದ ಇವರು, ಇನ್‌ಸ್ಟಾಗ್ರಾಂನಲ್ಲಿ ಹೆಚ್ಚು ಪರಿಚಿತರು. ಎನ್‌ಟಿಕೆ ಸಂಸ್ಥಾಪಕ, ನಟ–ನಿರ್ದೇಶಕ ಸೀಮನ್ ಅವರನ್ನು ಪರಾಭವಗೊಳಿಸಿ ತಮಿಳುನಾಡು ವಿಧಾನಸಭೆ ಪ್ರವೇಶಿಸಿದ್ದಾರೆ.

prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಉರ್ವಿಲ್ ವೇಗದ ಅರ್ಧಶತಕ

ಸಿಎಸ್‌ಕೆ ತಂಡದ ಉರ್ವಿಲ್ ಪಟೇಲ್ ಅವರು ಭಾನುವಾರ ಎಲ್‌ಎಸ್‌ಜಿ ವಿರುದ್ಧ ನಡೆದ ಪಂದ್ಯದಲ್ಲಿ ಕೇವಲ 13 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು. ಇದು ಐಪಿಎಲ್‌ನಲ್ಲಿ ಜಂಟಿ ವೇಗದ ಅರ್ಧಶತಕವಾಗಿದೆ

ಇಂದು 12 ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ 4

ದ್ರಾವಿಡ ನಾಡಿಗೆ ವಿಜಯ್ 'ದಳಪತಿ'

ತಮಿಳುನಾಡು ಮುಖ್ಯಮಂತ್ರಿಯಾಗಿ ಟಿವಿಕೆ ಮುಖ್ಯಸ್ಥ ಅಧಿಕಾರಕ್ಕೆ ಸಚಿವರಾಗಿ ಒಂಬತ್ತು ಮಂದಿ ಪ್ರಮಾಣ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, 'ದಳಪತಿ' ಎಂದೇ ಜನಪ್ರಿಯರಾಗಿರುವ ನಟ ಸಿ. ಜೋಸೆಫ್ ವಿಜಯ್ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ಇದರೊಂದಿಗೆ ಡಿಎಂಕೆ–ಎಐಎಡಿಎಂಕೆಯ ಆರು ದಶಕಗಳ ಪರ್ಯಾಯ ಆಡಳಿತ ಕೊನೆಗೊಂಡು, ದ್ರಾವಿಡ ನಾಡಿನ ರಾಜಕೀಯದಲ್ಲಿ ಹೊಸ ಶಕೆ ಆರಂಭವಾಗಿದೆ.

ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ವಿಜಯ್ ಅವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಟಿವಿಕೆ ಪಕ್ಷದ ಚಿನ್ಹೆ 'ಸೀಟಿ' ಊದುವ ಮೂಲಕ ವಿಜಯ್ ಅಭಿಮಾನಿಗಳು ಸಮಾರಂಭಕ್ಕೆ ಕಳೆ ತುಂಬಿದರು. ಪಕ್ಷದ ಧ್ವಜದ ಬಣ್ಣ ಹೊಂದಿರುವ ಶಾಲುಗಳನ್ನು ಬೀಸಿ ಸಂಭ್ರಮಿಸಿದರು. ತಮ್ಮ ನೆಚ್ಚಿನ 'ದಳಪತಿ' (ಕಮಾಂಡರ್), 'ಮುದಲಮೈಚರ್' (ಮುಖ್ಯಮಂತ್ರಿ) ಆಗಿ ಅಧಿಕಾರ ವಹಿಸಿಕೊಳ್ಳುವ ಐತಿಹಾಸಿಕ ಕ್ಷಣವನ್ನು ತುಂಬಿಕೊಳ್ಳಲು ಸಾವಿರಾರು ಜನರು ಸೇರಿದ್ದರಿಂದ ಇಡೀ ಕ್ರೀಡಾಂಗಣ ಉತ್ಸಾಹದ ಸಮುದ್ರವಾಗಿ ಮಾರ್ಪಟ್ಟಿತು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಚೊಚ್ಚಲ ಭಾಷಣ ಮಾಡಿದ ವಿಜಯ್, 'ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ತಮಿಳುನಾಡಿನಲ್ಲಿ ನೈಜ ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯದ ಹೊಸ ಯುಗ ಪ್ರಾರಂಭವಾಗಿದೆ' ಎಂದು ಘೋಷಿಸಿದರು.

ಈ ಸರ್ಕಾರದಲ್ಲಿ ತನ್ನನ್ನು ಹೊರತುಪಡಿಸಿ ಇನ್ನೊಂದು ಶಕ್ತಿ ಕೇಂದ್ರ ಇರುವುದಿಲ್ಲ ಎಂದು ಪ್ರತಿಪಾದಿಸಿದ ಅವರು, 'ನಾನು ಮಾತ್ರ ಏಕೈಕ ಶಕ್ತಿಕೇಂದ್ರ' ಎಂಬುದನ್ನು ಒತ್ತಿ ಹೇಳಿದರು. ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಗೃಹ ಬಳಕೆದಾರರಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಮತ್ತು ಮಹಿಳೆಯರ ರಕ್ಷಣೆಗೆ ವಿಶೇಷ ಪಡೆ ರಚಿಸುವ ಕಡತಗಳಿಗೆ ಅವರು ಸಹಿ ಹಾಕಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ವಿಜಯ್ ಅವರು ತಮಿಳುನಾಡು ರಾಜ್ಯಪಾಲರ ಜತೆ ಮಾತನಾಡಿದರು —ಪಿಟಿಐ ಚಿತ್ರ

> **ನಾನು ಯಾವುದೇ ರಾಜಮನೆತನದ ಹಿನ್ನೆಲೆಯಿಂದ ಬಂದವನಲ್ಲ. ಜನರೇ ನನ್ನನ್ನು ಸ್ವಾಗತಿಸಿ, ಸ್ವೀಕರಿಸಿದ್ದಾರೆ. ಸುಳ್ಳು ಭರವಸೆಗಳಿಂದ ಜನರನ್ನು ಮೋಸ ಮಾಡುವುದಿಲ್ಲ**
> **ವಿಜಯ್,** ತಮಿಳುನಾಡು ಮುಖ್ಯಮಂತ್ರಿ

> **ವಿಜಯ್ ಅವರಿಗೆ ಅಭಿನಂದನೆಗಳು. ಜನರ ಜೀವನವನ್ನು ಸುಧಾರಿಸಲು ಕೇಂದ್ರ ಸರ್ಕಾರವು ತಮಿಳುನಾಡು ಸರ್ಕಾರದೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ**
> **ನರೇಂದ್ರ ಮೋದಿ,** ಪ್ರಧಾನಿ

> **ಸಹಾನುಭೂತಿ, ಎಲ್ಲರ ಒಳಗೊಳ್ಳುವಿಕೆ ಮತ್ತು ಬದ್ಧತೆಯಿಂದ ತಮಿಳುನಾಡಿನ ಜನರ ಸೇವೆ ಸಲ್ಲಿಸುವಲ್ಲಿ ಹೊಸ ಸರ್ಕಾರವು ಯಶಸ್ಸು ಪಡೆಯಲಿ ಎಂದು ಹಾರೈಸುತ್ತೇನೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

9 ಸಚಿವರ ಪ್ರಮಾಣ: ವಿಜಯ್ ಸಂಪುಟದ ಸದಸ್ಯರಾಗಿ ಒಂಬತ್ತು ಮಂದಿ ಪ್ರಮಾಣ ವಚನ ಸ್ವೀಕರಿಸಿದರು. ಹಿರಿಯ ನಾಯಕ ಕೆ.ಎ. ಸೆಂಗೊಟ್ಟೈಯನ್ ಮತ್ತು ಯುವ ಮುಖಗಳಾದ ಡಾ. ಟಿ.ಕೆ.ಪ್ರಭು ಹಾಗೂ ಎಸ್.ಕೀರ್ತನಾ ಅವರು ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ವಿಜಯ್ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಆಧವ್ ಅರ್ಜುನ, ಎನ್. ಆನಂದ್, ಆರ್. ನಿರ್ಮಲ್ ಕುಮಾರ್, ಎ. ರಾಜ್‌ಮೋಹನ್, ಪಿ. ವೆಂಕಟರಮಣನ್ ಮತ್ತು ಕೆ.ಜಿ. ಅರುಣ್‌ರಾಜ್ ಅವರೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

'ಇದು ಜನರ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನ ಮಹಿಳೆಯರ ಮತ್ತು ಯುವ ಜನರ ಗೆಲುವು. ಖಂಡಿತವಾಗಿಯೂ ನಮ್ಮ ನಾಯಕರು ಮತ್ತು ಸಚಿವರು ಪಾರದರ್ಶಕ ಆಡಳಿತ ನೀಡಲಿದ್ದಾರೆ. ರಾಜ್ಯದ ಎಲ್ಲರ ಒಳಿತಿಗಾಗಿ ಕೆಲಸ ಮಾಡಲಿದ್ದಾರೆ' ಎಂದು ಆಧವ್ ಅರ್ಜುನ ಹೇಳಿದರು.

ರಾಹುಲ್ ಭಾಗಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಮಾರಂಭದ ವೇದಿಕೆಯಲ್ಲಿ ಹಾಜರಿದ್ದರು. ಕಾಂಗ್ರೆಸ್ ನಾಯಕ ಪ್ರವೀಣ್ ಚಕ್ರವರ್ತಿ, ಬಿಜೆಪಿ ನಾಯಕಿ ತಮಿಳ್‌ಇಸೈ ಸೌಂದರರಾಜನ್, ವಿಜಯ್ ಅವರ ತಂದೆ, ಸಿನಿಮಾ ನಿರ್ದೇಶಕ ಎಸ್.ಎ.ಚಂದ್ರಶೇಖರ್, ತಾಯಿ ಶೋಭಾ, ನಟಿ ತ್ರಿಷಾ ಸೇರಿದಂತೆ ಹಲವು ಗಣ್ಯರು ಸಮಾರಂಭಕ್ಕೆ ಸಾಕ್ಷಿಯಾದರು.

▶ 7

ಪೆರಂಬೂರು ಉಳಿಸಿಕೊಂಡ ವಿಜಯ್

- ಎರಡು ಕ್ಷೇತ್ರಗಳಲ್ಲಿ ಜಯಿಸಿದ್ದ ವಿಜಯ್ ಅವರು ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಪೆರಂಬೂರು ಕ್ಷೇತ್ರವನ್ನು ಉಳಿಸಿಕೊಂಡಿದ್ದಾರೆ
- ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ವಿಜಯ್
- ಟಿವಿಕೆ ಶಾಸಕ ಎಂ.ವಿ ಕರುಪ್ಪಯ್ಯ ಅವರು ಹಂಗಾಮಿ ಸ್ಪೀಕರ್ ಆಗಿ ಭಾನುವಾರ ಅಧಿಕಾರ ವಹಿಸಿಕೊಂಡರು
- 234 ಸದಸ್ಯಬಲದ ತಮಿಳುನಾಡು ವಿಧಾನಸಭೆಗೆ ಆಯ್ಕೆಯಾಗಿರುವ ಶಾಸಕರು ಸೋಮವಾರ ಪ್ರಮಾಣವಚನ ಸ್ವೀಕರಿಸುವರು
- ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಕೆ ಅವರು ವಿಜಯ್‌ಗೆ ಅಭಿನಂದನೆ ಸಲ್ಲಿಸಿದ್ದಾರೆ
- ಸರ್ಕಾರ ರಚಿಸಲು ಬೆಂಬಲ ನೀಡಿದ ಕಾಂಗ್ರೆಸ್, ವಿಸಿಕೆ, ಐಯುಎಂಎಲ್ ಮತ್ತು ಎಡ ಪಕ್ಷಗಳಿಗೆ ಧನ್ಯವಾದ ಸಲ್ಲಿಸಿದ ವಿಜಯ್

ಬಿಳಿ ಶರ್ಟ್, ಕಪ್ಪು ಬ್ಲೇಜರ್

ರಾಜಕೀಯ ಪ್ರವೇಶಿಸಿದ ಬಳಿಕ ಹೆಚ್ಚಾಗಿ ಬಿಳಿ ಶರ್ಟ್ ಮತ್ತು ಖಾಕಿ ಬಣ್ಣದ ಪ್ಯಾಂಟ್‌ನಲ್ಲೇ ಕಾಣಿಸಿಕೊಳ್ಳುತ್ತಿದ್ದ ವಿಜಯ್ ಅವರು ಪ್ರಮಾಣ ವಚನ ಸಮಾರಂಭದಲ್ಲಿ ಭಿನ್ನ ಧಿರಿಸಿನಲ್ಲಿ ಪಾಲ್ಗೊಂಡರು. ಬಿಳಿ ಶರ್ಟ್, ಕಪ್ಪು ಪ್ಯಾಂಟ್ ಹಾಗೂ ಕಪ್ಪು ಬಣ್ಣದ ಬ್ಲೇಜರ್ ಧರಿಸಿದ್ದರು. ಅವರ ಹೆಚ್ಚಿನ ಸಂಪುಟ ಸಹೋದ್ಯೋಗಿಗಳೂ ಶರ್ಟ್ ಮತ್ತು ಪ್ಯಾಂಟ್ ಧರಿಸಿದ್ದರಿಂದ, ಟಿವಿಕೆ ಸಂಪುಟದ 'ಡ್ರೆಸ್ ಕೋಡ್' ಕೂಡಾ ಈ ಹಿಂದಿನ ಸಂಪುಟಗಳಿಗಿಂತ ಭಿನ್ನವಾಗಿ ಕಂಡಿದೆ.

ತಮಿಳುನಾಡಿನ ರಾಜಕಾರಣಿಗಳಲ್ಲಿ ಪುರುಷರು ಬಿಳಿ ಬಣ್ಣದ ಧೋತಿ ಮತ್ತು ಶರ್ಟ್ ಧರಿಸುವುದು ರೂಢಿಯಾಗಿದೆ. ಎಡಪ್ಪಾಡಿ ಕೆ.ಪಳನಿಸ್ವಾಮಿ, ಓ.ಪನ್ನೀರಸೆಲ್ವಂ ಮತ್ತು ಎಂ.ಕೆ.ಸ್ಟಾಲಿನ್ ಒಳಗೊಂಡಂತೆ ಈ ಹಿಂದಿನ ಬಹುತೇಕ ಮುಖ್ಯಮಂತ್ರಿಗಳ ಔಪಚಾರಿಕ ಉಡುಗೆ ಧೋತಿ ಮತ್ತು ಬಿಳಿ ಬಣ್ಣದ ಶರ್ಟ್ ಆಗಿದೆ.

'ಸಿಂಗ ಪೆಣ್' ಕಾರ್ಯಪಡೆ

ವಿಜಯ್ ಅವರು ತಮ್ಮ ಚುನಾವಣಾ ಭರವಸೆಗಳನ್ನು ಈಡೇರಿಸುವ ಭಾಗವಾಗಿ ಗೃಹ ಬಳಕೆದಾರರಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್, ಮಹಿಳಾ ಸುರಕ್ಷತೆ ಮತ್ತು ಮಾದಕ ದ್ರವ್ಯ ನಿರ್ಮೂಲನೆಗೆ ಸಂಬಂಧಿಸಿದ ಮೂರು ಯೋಜನೆಗಳನ್ನು ಜಾರಿಗೊಳಿಸುವ ಆದೇಶಗಳಿಗೆ ಸಹಿ ಹಾಕಿದರು.

ಮಹಿಳೆಯರಲ್ಲಿ ವಿಶ್ವಾಸ ಮೂಡಿಸಲು ಮತ್ತು ಅವರ ಸುರಕ್ಷತೆಯನ್ನು ಖಾತರಿಪಡಿಸಲು, ಅಗತ್ಯ ಸಿಬ್ಬಂದಿ ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ 'ಸಿಂಗ ಪೆಣ್ ವಿಶೇಷ ಕಾರ್ಯಪಡೆ'ಯನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗುವುದು. 'ಸಿಂಗ ಪೆಣ್' ಎಂದರೆ 'ಸಿಂಹಿಣಿ' ಎಂದರ್ಥ. ಸಾಮಾನ್ಯವಾಗಿ ಧೈರ್ಯಶಾಲಿ ಮಹಿಳೆಯರನ್ನು ಹೀಗೆ ಕರೆಯಲಾಗುತ್ತದೆ.

ಮಾದಕ ವಸ್ತು ಸಂಬಂಧಿತ ಅಪರಾಧಗಳನ್ನು ತಡೆಯಲು ರಾಜ್ಯದಾದ್ಯಂತ ಒಟ್ಟು 65 'ಮಾದಕ ದ್ರವ್ಯ ತಡೆ ಘಟಕ' ಸ್ಥಾಪಿಸಲು ನಿರ್ಧರಿಸಲಾಗಿದೆ.

ಬಿಜೆಪಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೈಸೂರು ಶಾಲು–ಪೇಟ ತೊಡಿಸಿ, ಮೋದಿ ಅವರದ್ದೇ ಬೆಳ್ಳಿಯ ಪ್ರತಿಮೆಯನ್ನು ನೀಡಿ ಸನ್ಮಾನಿಸಲಾಯಿತು. ವಿ.ಸೋಮಣ್ಣ, ಛಲವಾದಿ ನಾರಾಯಣಸ್ವಾಮಿ, ರಾಧಾಮೋಹನ್ ದಾಸ್ ಅಗರ್‌ವಾಲ್, ಬಿ.ವೈ. ವಿಜಯೇಂದ್ರ, ಪ್ರಲ್ಹಾದ ಜೋಶಿ, ಆರ್‌.ಅಶೋಕ, ಬಿ.ಎಸ್‌.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಪಿ.ಸಿ.ಮೋಹನ್ ಮತ್ತು ಮಂಜುಳಾ ಅರವಿಂದ ಲಿಂಬಾವಳಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಸಿಎಂ ಕುರ್ಚಿ ಅಲುಗಾಡುತ್ತಿದೆ'

ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಲ್ಲೆಲ್ಲಾ ಸರ್ಕಾರ ಅಭದ್ರ: ಮೋದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರದಲ್ಲಿ ಒಳಜಗಳವೇ ತುಂಬಿಹೋಗಿದ್ದು, ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಲೇವಡಿ ಮಾಡಿದರು.

ಕಾರ್ಯಕ್ರಮ ನಿಮಿತ್ತ ಭಾನುವಾರ ಬೆಂಗಳೂರಿಗೆ ಬಂದಿದ್ದ ಮೋದಿ ಅವರಿಗೆ ಇಲ್ಲಿನ ಎಚ್‌ಎಎಲ್ ವಿಮಾನ ನಿಲ್ದಾಣ ಆವರಣದಲ್ಲಿ ಬಿಜೆಪಿ ರಾಜ್ಯ ಘಟಕ ಅಭಿನಂದನೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿದ ಕಾರಣಕ್ಕೆ ಏರ್ಪಡಿಸಿದ್ದ ಸನ್ಮಾನ ಸ್ವೀಕರಿಸಿ ಮೋದಿ ಅವರು ಮಾತನಾಡಿದರು.

'ಬೆಂಗಳೂರು ಅಣ್ಣಮ್ಮನಿಗೆ ಮತ್ತು ಕೆಂಪೇಗೌಡರಿಗೆ ನಮಸ್ಕಾರಗಳು' ಎಂದು ಅವರು ಮಾತು ಆರಂಭಿಸಿದರು.

'ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಲ್ಲೆಲ್ಲಾ ಸರ್ಕಾರಗಳು ಅಭದ್ರವಾಗಿವೆ. ಮುಖ್ಯಮಂತ್ರಿ ಹುದ್ದೆ ಐದು ವರ್ಷದ್ದೋ, ಎರಡೂವರೆ ವರ್ಷದ್ದೋ ಎಂಬ ಗಾಳಿ ಕರ್ನಾಟಕದಿಂದ ಕೇರಳಂ ಕಾಂಗ್ರೆಸ್‌ಗೆ ಬೀಸಿದೆ. ಗ್ಯಾರಂಟಿಗೆ ಹಣ ಹೊಂದಿಸಲಾಗದೆ ತೆಲಂಗಾಣ, ಹಿಮಾಚಲ ಪ್ರದೇಶ ಸರ್ಕಾರಗಳು ಅಭದ್ರವಾಗಿವೆ' ಎಂದರು.

▶ 4

ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ: ಡಿಕೆಶಿ

ಮುದಗಲ್ (ರಾಯಚೂರು ಜಿಲ್ಲೆ): 'ಕರ್ನಾಟಕದಲ್ಲಿ ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಪ್ರಧಾನಿಯವರ ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಧಾನಿಯವರ ಕಣ್ಣಿಗೆ ಏನು ಕಾಣಿಸುತ್ತಿದೆಯೋ ಗೊತ್ತಿಲ್ಲ. ಯಾವ ಕುರ್ಚಿಯೂ ಅಲ್ಲಾಡುತ್ತಿಲ್ಲ' ಎಂದರು.

▶ 4

'ಬೆನ್ನಿಗೆ ಚೂರಿ ಹಾಕುವ ಕಾಂಗ್ರೆಸ್'

'ಬೆನ್ನಿಗೆ ಚೂರಿ ಹಾಕುವ ಬುದ್ಧಿ ಕಾಂಗ್ರೆಸ್‌ಗೆ ರಕ್ತಗತವಾಗಿ ಬಂದಿದೆ. ಅಧಿಕಾರಕ್ಕಾಗಿ ಅದು ಏನು ಬೇಕಾದರೂ ಮಾಡುತ್ತದೆ. 2014ಕ್ಕೂ ಮುನ್ನ ಕಾಂಗ್ರೆಸ್ ಕೇಂದ್ರದಲ್ಲಿ 10 ವರ್ಷ ಅಧಿಕಾರದಲ್ಲಿ ಇದ್ದದ್ದು, ಡಿಎಂಕೆಯ ಬೆಂಬಲದ ಕಾರಣಕ್ಕೆ. ಕಾಂಗ್ರೆಸ್‌ನ ಕಷ್ಟಕಾಲದಲ್ಲಿ ಡಿಎಂಕೆ ಅದರ ಜತೆಗಿತ್ತು. ಆದರೆ, ಈಗ ಡಿಎಂಕೆ ಅಧಿಕಾರದಲ್ಲಿ ಇಲ್ಲ ಎಂದ ಮಾತ್ರಕ್ಕೆ ಅದರ ಬೆನ್ನಿಗೆ ಕಾಂಗ್ರೆಸ್ ಚೂರಿ ಹಾಕಿದೆ. ಹೊಸ ಪಕ್ಷದ ಬೆನ್ನೇರಿದೆ. ಅದರ ಬೆನ್ನಿಗೂ ಕಾಂಗ್ರೆಸ್ ಚೂರಿ ಹಾಕುವ ಕಾಲ ದೂರವಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಕೆ ನೀಡಿದರು.

▶ 4

ಆತಂಕ ಸೃಷ್ಟಿಸಿದ್ದ ಜಿಲೆಟಿನ್ ಕಡ್ಡಿ

ಪ್ರಧಾನಿ ಮೋದಿ ಅವರು ಸಂಚರಿಸಿದ ನೈಸ್ ರಸ್ತೆಯ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದು, ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿ ಸೇತುವೆ ಬಳಿ ಭಾನುವಾರ ಬೆಳಿಗ್ಗೆ 10.30ರ ಸುಮಾರಿಗೆ 'ವಿಧ್ವಂಸಕ ಕೃತ್ಯ ತಡೆ ಪಡೆ'ಯ ಸಿಬ್ಬಂದಿ ಪರಿಶೀಲನೆ ನಡೆಸುವಾಗ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆ ಆಗಿದ್ದವು.

▶ 4

ಸಚಿವ ಡಿ.ಸುಧಾಕರ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಡಿ.ಸುಧಾಕರ್

ಚಿತ್ರದುರ್ಗ: ಯೋಜನಾ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ (66) ಭಾನುವಾರ ನಸುಕಿನ 3.15ರ ವೇಳೆಗೆ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರ ಗೌರವಾರ್ಥ ರಾಜ್ಯದಲ್ಲಿ ಮಂಗಳವಾರದವರೆಗೆ (ಮೇ 12) ಶೋಕಾಚರಣೆ ಘೋಷಿಸಲಾಗಿದ್ದು, ಸರ್ಕಾರದ ಅಧಿಕೃತ ಕಾರ್ಯಕ್ರಮಗಳು ನಡೆಯುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಸೋಮವಾರ ಸರ್ಕಾರಿ ರಜೆ ಘೋಷಿಸಲಾಗಿದೆ. ಸುಧಾಕರ್ ಅವರಿಗೆ ಪತ್ನಿ ಹರ್ಷಿಣಿ, ಪುತ್ರ ಸುಹಾಸ್ ಹಾಗೂ ಪುತ್ರಿ ಸ್ಫೂರ್ತಿ ಇದ್ದಾರೆ. ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ ಸುಧಾಕರ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಭಾನುವಾರ ಮಧ್ಯಾಹ್ನ 2.25ಕ್ಕೆ ಮೃತದೇಹವನ್ನು ಹಿರಿಯೂರು ಪಟ್ಟಣಕ್ಕೆ ತರಲಾಯಿತು. ನೆಹರೂ ಮೈದಾನದಲ್ಲಿ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು. ಸಂಜೆ ಅವರ ಹುಟ್ಟೂರು ಚಳ್ಳಕೆರೆಯ ನಿವಾಸದಲ್ಲಿ ಕುಟುಂಬದ ಸದಸ್ಯರು ಜೈನ ಸಂಪ್ರದಾಯದಂತೆ ಧಾರ್ಮಿಕ ವಿಧಿವಿಧಾನ ನೆರವೇರಿಸಿದರು.

ಸೋಮವಾರ ಬೆಳಿಗ್ಗೆ ಚಳ್ಳಕೆರೆಯ ಸುಧಾಕರ್ ಸ್ಟೇಡಿಯಂನಲ್ಲಿ ಮೃತದೇಹವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುತ್ತದೆ. ಸಂಜೆ 4 ಗಂಟೆಗೆ ವಿಠಲ ನಗರದಲ್ಲಿರುವ ಷಟಲ್ ಕೋರ್ಟ್ ಆವರಣದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾರ್ಚ್ 27ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಂಡಿ ಚಿಪ್ಪಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಮರುದಿನ ಆಸ್ಪತ್ರೆಯಲ್ಲೇ ಜನ್ಮದಿನ ಆಚರಿಸಿಕೊಂಡಿದ್ದರು. ಚೇತರಿಕೆ ಹಂತದಲ್ಲಿದ್ದ ಅವರು ಮಾರ್ಚ್ 30ರಂದು ಶ್ವಾಸಕೋಶದ ಸೋಂಕಿಗೆ ಒಳಗಾಗಿದ್ದರು. ನಂತರ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದರು. ಹೀಗಾಗಿ ಹೆಚ್ಚಿನ ಚಿಕಿತ್ಸೆಗಾಗಿ ಎಲೆಕ್ಟ್ರಾನಿಕ್ ಸಿಟಿಯ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. 15 ದಿನದ ಹಿಂದೆ ಗಂಭೀರ ಸ್ಥಿತಿಗೆ ತಲುಪಿದ್ದಾಗ ಹೈದರಾಬಾದ್‌ನ ವೈದ್ಯರ ತಂಡ ಚಿಕಿತ್ಸೆ ನೀಡಿತ್ತು. ವಾರದ ಹಿಂದೆ ದೆಹಲಿಯ ಏಮ್ಸ್ ಆಸ್ಪತ್ರೆ ವೈದ್ಯರು ಚಿಕಿತ್ಸೆ ನೀಡಿದ್ದರು. ಆದರೂ, ಸೋಂಕಿನಿಂದ ಮುಕ್ತರಾಗಿರಲಿಲ್ಲ.

ಚಿನಕುರುಳಿ ಪ್ರಕಾಶ್ ಶೆಟ್ಟಿ

'ಜೂನ್ 14ರಂದು ಮಾದರ ಶಕ್ತಿ ಪ್ರದರ್ಶನ'

ಬೆಂಗಳೂರು: ಜೂನ್ 14ರಂದು ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸುವ ಮೂಲಕ ಶಕ್ತಿ ಪ್ರದರ್ಶಿಸಲು ಕರ್ನಾಟಕ ಮಾದರ ಮಹಾಸಭಾ ನಿರ್ಣಯ ತೆಗೆದುಕೊಂಡಿದೆ.

ಮಹಾಸಭಾದ ಅಧ್ಯಕ್ಷರೂ ಆಗಿರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ನೇತೃತ್ವದಲ್ಲಿ ಮಹಾಸಭಾದ ರಾಜ್ಯ ಕಾರ್ಯಕಾರಣಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪಧಾದಿಕಾರಿಗಳ ಸಭೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಭಾನುವಾರ ನಡೆಯಿತು.

ವಿವರ ಪುಟ ▶ 4

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಕೇಂದ್ರ ಪಾಲಿಕೆ: ಬಿದ್ದ ಮರಗಳ ತೆರವು

ಬೆಂಗಳೂರು: ಮಳೆ-ಗಾಳಿಗೆ ಬಿದ್ದಿರುವ ಮರಗಳು ಹಾಗೂ ರೆಂಬೆ-ಕೊಂಬೆ ತೆರವು ಕಾರ್ಯಾಚರಣೆ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಂದುವರಿದಿದ್ದು, ಈವರೆಗೂ 136 ಮರ, 264 ರೆಂಬೆ–ಕೊಂಬೆ ತೆರವುಗೊಳಿಸಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಎರಡು ವಾರದಲ್ಲಿ ಮಳೆ- ಗಾಳಿಗೆ 136 ಮರಗಳು ಹಾಗೂ 269 ರೆಂಬೆ-ಕೊಂಬೆಗಳು ಬಿದ್ದಿದ್ದವು. ರಸ್ತೆಯಲ್ಲಿ ಬಿದ್ದ ಮರ, ರೆಂಬೆ- ಕೊಂಬೆಗಳನ್ನು ಕತ್ತರಿಸಿ ರಸ್ತೆ ಪಕ್ಕದಲ್ಲಿ ಹಾಕಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ನಂತರ, ಆದ್ಯತೆ ಮೇರೆಗೆ ಎಲ್ಲ ಮರ, ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಕೇಂದ್ರ ನಗರ ಪಾಲಿಕೆ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಅಪಾಯಕಾರಿ ಮರ, ರೆಂಬೆ-ಕೊಂಬೆಗಳು ಕಂಡುಬಂದಲ್ಲಿ ಅವುಗಳನ್ನು ತೆರವುಗೊಳಿಸಲಾಗುವುದು. ಈ ಬಗ್ಗೆ ಪಾಲಿಕೆ ಅರಣ್ಯ ವಿಭಾಗದ ಅಧಿಕಾರಿಗಳು ಇಲ್ಲವೇ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಿ ದೂರು ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ದೊಮ್ಮಲೂರಿನಲ್ಲಿ ಉರುಳಿ ಬಿದ್ದಿದ್ದ ಮರಗಳನ್ನು ತೆರವು ಮಾಡಲಾಗಿದೆ

CONNECT

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Tata

TATA HEXA 2017 Model, White. Done 56,000 kms. Three new tyres are in good condition. Single owner, excellent condition. Price expected 8.30 lakhs. No loan, insurance paid. Immediate settlement. No Brokers. Negotiable to some extent. Contact: 9845885199.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

BUSINESS

Business Offers

Business For Sale

USED AS good as new-weld mech machine-4nos, wire straightening & cutting machine-16 nos. interested contact on 98866 12942 & 88802 70330 mail ID is: usedmachines2026@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಜಿಲೆಟಿನ್ ಕಡ್ಡಿ ಪತ್ತೆ: ತನಿಖೆ ಚುರುಕು

ಪ್ರಧಾನಿ ಮೋದಿ ಭೇಟಿ: ಸ್ಫೋಟದ ಬೆದರಿಕೆ ಹಾಕಿದ್ದ ವ್ಯಕ್ತಿಯ ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಆರ್ಟ್ ಆಫ್ ಲಿವಿಂಗ್'ನ 45ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಭಾನುವಾರ ನಗರಕ್ಕೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಿದ ನೈಸ್ ರಸ್ತೆಯ ಸಮೀಪದಲ್ಲೇ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿ, ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು.

ಎಚ್‌ಎಎಲ್ ಬಳಿ ಬಿಜೆಪಿ ರಾಜ್ಯ ಘಟಕ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದ ಬಳಿಕ ಮೋದಿ ಅವರು ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನಿಗದಿ ಆಗಿತ್ತು. ಪ್ರಧಾನಿ ಸಾಗುವ ಮಾರ್ಗದಲ್ಲಿ ವಿಧ್ವಂಸಕ ಕೃತ್ಯ ನಿಗ್ರಹ ಪಡೆಯ ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದರು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿ ಸೇತುವೆಯ ಬಳಿ ಭಾನುವಾರ ಬೆಳಿಗ್ಗೆ 10.30ರ ಸುಮಾರಿಗೆ ಪರಿಶೀಲನೆ ನಡೆಸುತ್ತಿರುವಾಗ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಅವುಗಳನ್ನು ವಶಕ್ಕೆ ಪಡೆದು ಕಗ್ಗಲೀಪುರ ಠಾಣೆಗೆ ಕೊಂಡೊಯ್ದು ತನಿಖೆ ಮುಂದುವರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಇದಕ್ಕೂ ಮುನ್ನ ಬೆಳಿಗ್ಗೆ 7.30ರ ಸುಮಾರಿಗೆ ವ್ಯಕ್ತಿಯೊಬ್ಬ ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ ಎಚ್‌ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್ ಬಳಿ ಸ್ಫೋಟ ನಡೆಸುವುದಾಗಿ ಬೆದರಿಕೆ ಹಾಕಿದ್ದ. ಅತ್ತ ಜಿಲೆಟಿನ್ ಕಡ್ಡಿಗಳು ಸಿಕ್ಕಿದ ಬಳಿಕ ಎಚ್ಚೆತ್ತ ಕೋರಮಂಗಲ ಠಾಣೆಯ ಪೊಲೀಸರು, ಸಿಸಿಬಿ ಪೊಲೀಸರ ಜತೆಗೆ ಜಂಟಿ ಕಾರ್ಯಾಚರಣೆ ನಡೆಸಿ ಬೆದರಿಕೆ ಹಾಕಿದ್ದ ಲೋಹಿತ್ (40) ಎಂಬಾತನನ್ನು ವಶಕ್ಕೆ ಪಡೆದುಕೊಂಡಿದ್ದರು.

ಸಾಂದರ್ಭಿಕ ಚಿತ್ರ

'ಕೋರಮಂಗಲದ ಮನೆಯಲ್ಲಿದ್ದ ಲೋಹಿತ್‌ನನ್ನು ವಶಕ್ಕೆ ಪಡೆದು ಬಂಧಿಸಲಾಗಿದೆ. ಆರೋಪಿಯ ವಿಚಾರಣೆ ಮುಂದುವರಿದಿದೆ. ಹಿಂದೆಯೂ ಗಣ್ಯರು ನಗರಕ್ಕೆ ಬಂದಾಗ ಈತ ಇದೇ ರೀತಿಯಲ್ಲಿ ಬೆದರಿಕೆ ಕರೆ ಮಾಡಿದ್ದ. ಆಗಲೂ ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಆತ ಭಾನುವಾರ ಬೆಳಿಗ್ಗೆಯೂ ಅದೇ ರೀತಿಯ ವರ್ತನೆ ತೋರಿದ್ದಾನೆ. ಕಗ್ಗಲೀಪುರದ ಬಳಿ ಸಿಕ್ಕಿರುವ ಜಿಲೆಟಿನ್ ಕಡ್ಡಿಗಳಲ್ಲಿ ಲೋಹಿತ್ ಪಾತ್ರವಿದೆಯೇ ಎಂಬುದರ ಕುರಿತೂ ತನಿಖೆ ನಡೆಸಲಾಗುತ್ತಿದೆ. ಲೋಹಿತ್ ಹಿನ್ನೆಲೆಯನ್ನೂ ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಜಿಲೆಟಿನ್ ಕಡ್ಡಿಗಳನ್ನು ಉದ್ದೇಶಪೂರ್ವಕವಾಗಿ ರಸ್ತೆಬದಿಯಲ್ಲಿ ಇರಿಸಲಾಗಿತ್ತೇ ಅಥವಾ ಅದರ ಹಿಂದಿನ ಉದ್ದೇಶವೇನು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಕ್ವಾರಿಗಳಲ್ಲಿ ಕಲ್ಲುಗಳನ್ನು ಸ್ಫೋಟಿಸುವ ಉದ್ದೇಶದಿಂದ ಜಿಲೆಟಿನ್ ಕಡ್ಡಿ ಗಳನ್ನು ಸಂಗ್ರಹಿಸಿಡಲಾಗಿತ್ತೇ ಎಂಬ ಆಯಾಮದಲ್ಲೂ ತನಿಖೆ ಕೈಗೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ಸ್ಥಳಕ್ಕೆ ಕೇಂದ್ರ ವಲಯದ ಐಜಿಪಿ ಎಸ್. ಗಿರೀಶ್ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ ಭೇಟಿ ನೀಡಿ ಪರಿಶೀಲಿಸಿದರು. ಕಗ್ಗಲೀಪುರ ಠಾಣೆಯ ಪೊಲೀಸರು ಸ್ಥಳ ಮಹಜರು ನಡೆಸಿದ್ದಾರೆ.

'ಜಿಲೆಟಿನ್ ಕಡ್ಡಿಗಳನ್ನು ಯಾರು ತಂದಿಟ್ಟಿದ್ದಾರೆ ಎಂಬುದು ಪತ್ತೆಯಾಗಿಲ್ಲ. ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮ ಆರಂಭಕ್ಕೂ ಒಂದೂವರೆ ತಾಸು ಮೊದಲು, ತಪಾಸಣೆ ನಡೆಸುವಾಗ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ. ನೈಸ್ ರಸ್ತೆ ಜಂಕ್ಷನ್‌ನಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ, ರಸ್ತೆಯಿಂದ 20 ಅಡಿಯಿಂದ 25 ಅಡಿ ದೂರದಲ್ಲಿರುವ ಕಾಂಪೌಂಡ್ ಬಳಿ ಅನುಮಾನಾಸ್ಪದ ಬ್ಯಾಗ್‌ವೊಂದನ್ನು ಕರ್ತವ್ಯ ನಿರತ ಕಾನ್‌ಸ್ಟೆಬಲ್ ಗಮನಿಸಿದ್ದರು. ಪರಿಶೀಲಿಸಿದಾಗ ಅದರಲ್ಲಿ ಎರಡು ಜಿಲೆಟಿನ್ ಕಡ್ಡಿಗಳು ಇರುವುದು ಕಂಡುಬಂದಿತ್ತು. ಪೊಲೀಸರು ತಕ್ಷಣವೇ ಜಿಲೆಟಿನ್ ಕಡ್ಡಿಗಳನ್ನು ತೆರವುಗೊಳಿಸಿ ಅನಾಹುತ ಆಗದಂತೆ ಕ್ರಮ ಕೈಗೊಂಡಿ ದ್ದಾರೆ' ಎಂದು ಕೇಂದ್ರ ವಲಯದ ಡಿಐಜಿ ಗಿರೀಶ್ ಮಾಹಿತಿ ನೀಡಿದ್ದಾರೆ.

ತನಿಖೆಗೆ ಆರು ತಂಡ ರಚನೆ

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ತನಿಖೆಗೆ ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ನೇತೃತ್ವದಲ್ಲಿ 6 ವಿಶೇಷ ತಂಡಗಳನ್ನು ರಚಿಸಲಾಗಿದೆ. 50ಕ್ಕೂ ಹೆಚ್ಚು ಸಿಬ್ಬಂದಿ ಈ ತಂಡಗಳಲ್ಲಿದ್ದು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಜಿಲೆಟಿನ್ ಕಡ್ಡಿ ಪತ್ತೆಯಾಗಿರುವ ಸ್ಥಳದ ಸುತ್ತ ಹಾಗೂ ಜಿಲ್ಲೆಯ ವಿವಿಧೆಡೆ ಇರುವ ಕಲ್ಲು ಕ್ವಾರಿಗಳಲ್ಲಿನ ಜಿಲೆಟಿನ್ ದಾಸ್ತಾನು, ಜಿಲೆಟಿನ್ ಕಡ್ಡಿಗಳನ್ನು ಸರಬರಾಜು ಮಾಡಿರುವ ವಿತರಕರ ವಿವರ ಹಾಗೂ ಗೋದಾಮುಗಳಲ್ಲಿನ ದಾಸ್ತಾನಗಳನ್ನು ಒಂದು ತಂಡ ಪರಿಶೀಲಿಸುತ್ತಿದೆ. ಮತ್ತೊಂದು ತಂಡ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿ ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಹಲವೆಡೆ ವಾಹನಗಳ ದಟ್ಟಣೆ

ಎರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಭಾನುವಾರ ನಗರಕ್ಕೆ ಬಂದಿದ್ದರು. ಅವರ ಭೇಟಿ ಹಿನ್ನೆಲೆಯಲ್ಲಿ ಹಲವು ಮಾರ್ಗಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿ, ಪರ್ಯಾಯ ಮಾರ್ಗ ಕಲ್ಪಿಸಲಾಗಿತ್ತು. ಅಲ್ಲಿಯೂ ವಾಹನ ದಟ್ಟಣೆ ಉಂಟಾಗಿ ಸವಾರರು ಹೈರಾಣಾದರು.

ಎಚ್‌ಎಎಲ್ ಬಳಿ ಬಿಜೆಪಿ ರಾಜ್ಯ ಘಟಕ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮೋದಿ ಪಾಲ್ಗೊಂಡಿದ್ದರು. ಎಚ್‌ಎಎಲ್ ವಿಮಾನ ನಿಲ್ದಾಣ ಎಕ್ಸಿಟ್ ರಸ್ತೆಯಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆಯಿಂದ ಡಿಜಿಸಿಎ ಕಚೇರಿ ವರೆಗೆ ವಾಹನಗಳ ಸಂಚಾರವನ್ನು ಬೆಳಿಗ್ಗೆ 5ರಿಂದಲೇ ನಿರ್ಬಂಧಿಸಲಾಗಿತ್ತು. ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿತ್ತು. ಬೆಳಿಗ್ಗೆ 11ರ ವರೆಗೆ ಪರ್ಯಾಯ ಮಾರ್ಗದಲ್ಲೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ನೈಸ್ ರಸ್ತೆಯಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು.

ತುಮಕೂರು ರಸ್ತೆಯಿಂದ ನೈಸ್ ರಸ್ತೆಯ ಮೂಲಕ ಕನಕಪುರ ರಸ್ತೆ ಕಡೆಗೆ ತೆರಳುವ ವಾಹನ ಚಾಲಕರು, ಸವಾರರು ಪರದಾಡಿದರು. ಸಿಎಂಟಿಐ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ರಾಜ್‌ಕುಮಾರ್ ಪುಣ್ಯಭೂಮಿ ರಸ್ತೆಯ ಮೂಲಕ ಅವಕಾಶ ಕಲ್ಪಿಸಲಾಗಿತ್ತು. ಅಲ್ಲಿಯೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸುಮ್ಮನಹಳ್ಳಿ ಜಂಕ್ಷನ್, ನಾಯಂಡ ಹಳ್ಳಿ ಜಂಕ್ಷನ್, ಹೊರ ವರ್ತುಲ ರಸ್ತೆ, ಕೆಂಗೇರಿ ವಿಷ್ಣುವರ್ಧನ್ ರಸ್ತೆಯಲ್ಲೂ ಕೆಲ ಸಮಯ ವಾಹನ ದಟ್ಟಣೆ ಉಂಟಾಗಿತ್ತು.

ಯುವಕನ ಅಪಹರಿಸಿ ಹಲ್ಲೆ ಆರೋಪಿಗಳಿಗೆ ಶೋಧ

ಬೆಂಗಳೂರು: ಯುವಕನನ್ನು ಅಪಹರಿಸಿ, ಹಲ್ಲೆ ನಡೆಸಿರುವ ಆರೋಪಿಗಳ ಪತ್ತೆಗೆ ಬ್ಯಾಡರಹಳ್ಳಿ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರೀತಿಸಿದ ಹುಡುಗಿಯನ್ನು ಕರೆದುಕೊಂಡು ಹೋಗಿರುವ ಯುವಕನ ಸಹೋದರ ಕೊಟ್ರೇಶ್ ಅವರನ್ನು ಯುವತಿಯ ಪೋಷಕರು ಅಪಹರಣ ಮಾಡಿ, ಹಲ್ಲೆ ನಡೆಸಿರುವ ಆರೋಪವಿದೆ.

ಹಲ್ಲೆ ನಡೆಸಿರುವ ಆರೋಪಿಗಳು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಖಾಸಗಿ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಯುವತಿಗೆ ಬಳ್ಳಾರಿಯ ದೇವಸ್ಥಾನವೊಂದರ ಅರ್ಚಕ ಶಿವು ಎಂಬಾತನ ಪರಿಚಯವಾಗಿತ್ತು. ಇಬ್ಬರೂ ಪ್ರೀತಿಸುತ್ತಿದ್ದರು. ಮನೆಯವರು ಒಪ್ಪದ ಕಾರಣಕ್ಕೆ ಶನಿವಾರ ಯುವತಿ ಮನೆ ಬಿಟ್ಟು ಶಿವು ಜೊತೆಗೆ ತೆರಳಿದ್ದರು ಎಂದು ಮೂಲಗಳು ಹೇಳಿವೆ.

ಘಟನೆಯಿಂದ ಸಿಟ್ಟಿಗೆದ್ದ ಯುವತಿಯ ತಂದೆ ಮತ್ತು ಅವರ ಸಂಬಂಧಿಕರು ಬ್ಯಾಡರಹಳ್ಳಿಯ ವಿಶ್ವೇಶ್ವರ ನಗರದಲ್ಲಿ ವಾಸವಿದ್ದ ಶಿವು ಅವರ ಅಣ್ಣ ಕೊಟ್ರೇಶ್ ಅವರನ್ನು ಅಪಹರಿಸಿದ್ದಾರೆ. ಕೊಟ್ರೇಶ್ ಅವರ ಕೈ ಕಾಲು ಕಟ್ಟಿ, ಹಲ್ಲೆ ನಡೆಸಿದ್ದಾರೆ. ನಂತರ ಆತನಿಂದ ವಿಡಿಯೊ ಮಾಡಿಸಿ, ಆ ವಿಡಿಯೊವನ್ನು ಶಿವುಗೆ ಕಳುಹಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಘಟನೆ ಸಂಬಂಧ ಕೊಟ್ರೇಶ್‌ನ ಕುಟುಂಬದವರು ನೀಡಿರುವ ದೂರಿನ ಮೇಲೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಅಪಹರಣ ಹಾಗೂ ಹಲ್ಲೆ ಪ್ರಕರಣ ದಾಖಲಾಗಿದೆ.

₹24 ಲಕ್ಷ ಪಡೆದು ಮೋಸ; ಪ್ರಕರಣ ದಾಖಲು

ಕೆಲಸ ಕೊಡಿಸುವುದಾಗಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ 'ಡಿ' ಗ್ರೂಪ್ ನೌಕರಿ ಕೊಡಿಸುವುದಾಗಿ ನಂಬಿಸಿ ₹24 ಲಕ್ಷ ಪಡೆದು ವಂಚಿಸಿದ್ದ ಪ್ರಕರಣದ ಸಂಬಂಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರಾಜಾಜಿನಗರದ ನಿವಾಸಿ ಪುಷ್ಪಾ ನೀಡಿದ ದೂರಿನ ಮೇಲೆ ಡಾಲರ್ಸ್ ಕಾಲೊನಿ ಆರ್.ಎಂ.ವಿ ಎರಡನೇ ಹಂತದ ಎಚ್.ಜೆ.ಪವಿತ್ರಾಗೌಡ ಹಾಗೂ ಅವರ ಸಹೋದರ ಚರಣ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ಹೇಳಿವೆ.

'15 ವರ್ಷದಿಂದ ದೂರುದಾರೆ ಪುಷ್ಪಾ ಹಾಗೂ ಹಾಸನದ ಎಚ್.ಜಿ. ಪವಿತ್ರಾಗೌಡ ಪರಸ್ಪರ ಪರಿಚಯ ಇದ್ದರು. ಕೆಲಸದ ನಿಮಿತ್ತ ಪವಿತ್ರಾಗೌಡ ಆಗಾಗ್ಗೆ ವಿಧಾನಸೌಧಕ್ಕೆ ಬರುತ್ತಿದ್ದರು. 'ಎಲ್ಲ ಸಚಿವರೂ ನನಗೆ ಪರಿಚಯವಿದ್ದು, ವಿಧಾನಸೌಧದಲ್ಲಿ ಯಾರಿಗಾದರೂ ಕೆಲಸ ಬೇಕಿದ್ದರೆ ಕೊಡಿಸುತ್ತೇನೆ' ಎಂದು ನಂಬಿಸಿದ್ದರು. ಒಂದು ಹುದ್ದೆಗೆ ₹15 ಲಕ್ಷ ಆಗಲಿದೆ ಎಂದೂ ತಿಳಿಸಿದ್ದರು.

ಆರೋಪಿ ಮಾತು ನಂಬಿದ್ದ ಪುಷ್ಪಾ, ತಮಗೆ ಪರಿಚಯವಿದ್ದ ಶಶಾಂಕ್ ಹಾಗೂ ಶಾಲಿನಿಗೂ ಮಾಹಿತಿ ನೀಡಿದ್ದರು. ಶಶಾಂಕ್ ತಮ್ಮ ಅಜ್ಜಿಗೆ ಸೇರಿದ ಚಿನ್ನಾಭರಣವನ್ನು ಅಡಮಾನವಿಟ್ಟು ಆರೋಪಿಗಳಿಗೆ ಹಣ ನೀಡಿದ್ದರು. ಶಾಲಿನಿ ಸಹ ಆಭರಣ ಗಿರವಿಯಿಟ್ಟು ಹಣ ಹೊಂದಿಸಿ, ಆರ್‌ಟಿಜಿಎಸ್ ಮೂಲಕ ಪವಿತ್ರಾಗೌಡಗೆ ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ಹಣ ವಾಪಸ್ ಕೇಳಿದ್ದಕ್ಕೆ ನಿಂದನೆ: ಹಲವು ತಿಂಗಳು ಕಳೆದರೂ ಕೆಲಸವನ್ನು ಕೊಡಿಸದೇ ಇದ್ದಾಗ ಹಣ ವಾಪಸ್ ಕೊಡುವಂತೆ ಪುಷ್ಪಾ ಮನವಿ ಮಾಡಿದ್ದರು. ಹಣ ವಾಪಸ್ ಕೊಡದಿದ್ದರೆ ಪೊಲೀಸರಿಗೆ ದೂರು ನೀಡಲಾಗುವುದು ಎಂಬುದಾಗಿ ಹೇಳಿದ್ದರು. ಆಗ ₹10 ಲಕ್ಷವನ್ನು ಬ್ಯಾಂಕ್ ಖಾತೆಗೆ ವಾಪಸ್ ಹಾಕಿದ್ದರು. ಉಳಿದ ಹಣವನ್ನು ಮನೆಗೆ ಬಂದರೆ ಕೊಡುವುದಾಗಿ ಪವಿತ್ರಾಗೌಡ ಹೇಳಿದ್ದರು. ಅದರಂತೆ, ಡಾಲರ್ಸ್ ಕಾಲೊನಿಯಲ್ಲಿರುವ ಮನೆಯ ಬಳಿಗೆ ಹೋದಾಗ ದೂರುದಾರೆಯ ಮೊಬೈಲ್ ಕಸಿದುಕೊಂಡು ನಿಂದಿಸಿದ್ದರು. ಪುಷ್ಪಾ ಅವರನ್ನು ಕತ್ತರಿಸಿ ಹಾಕುವುದಾಗಿಯೂ ಆರೋಪಿ ಬೆದರಿಕೆ ಹಾಕಿದ್ದರು ಎಂದು ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ದತ್ತಾಂಶ ಅಳಿಸಿರುವ ಆರೋಪ: ದೂರುದಾರರ ಮೊಬೈಲ್‌ನಲ್ಲಿದ್ದ ಚಾಟ್‌ಗಳು, ಫೋಟೊಗಳು, ದಾಖಲೆಗಳನ್ನು ಆರೋಪಿ ಅಳಿಸಿಹಾಕಿದ್ದು, ಸಾಕ್ಷ್ಯ ನಾಶ ಪಡಿಸಲಾಗಿದೆ ಎಂದು ಪೊಲೀಸರು ಹೇಳಿದರು.

74 ಡಿವೈಎಸ್‌ಪಿ, 293 ಇನ್‌ಸ್ಪೆಕ್ಟರ್ ವರ್ಗಾವಣೆ

ಬೆಂಗಳೂರು: 74 ಡಿವೈಎಸ್‌ಪಿ (ಸಿವಿಲ್) ಹಾಗೂ 293 (ಸಿವಿಲ್) ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರವು ಭಾನುವಾರ ಆದೇಶ ಹೊರಡಿಸಿದೆ. ವರ್ಗಾವಣೆಗೊಂಡ ಸಿಬ್ಬಂದಿಯು ತಮಗೆ ಸೂಚಿಸಲಾದ ಸ್ಥಳಗಳಲ್ಲಿ ತಕ್ಷಣವೇ ಕರ್ತವ್ಯಕ್ಕೆ ಹಾಜರಾಗಬೇಕು. ಸ್ಥಳ ನಿಯುಕ್ತಿ ಆಗದಿರುವ ಸಿಬ್ಬಂದಿ, ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ವರದಿ ಮಾಡಿಕೊಳ್ಳಲು ವರ್ಗಾವಣೆ ಆದೇಶದಲ್ಲಿ ತಿಳಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಸಾಧಕ

ಕಿಶೋರ್ ಎನ್. (ಶೇ 96.48), ರಾಜೀವ್ ಗಾಂಧಿ ಪಬ್ಲಿಕ್ ಸ್ಕೂಲ್, ಲಗ್ಗೆರೆ

ನಗರದಲ್ಲಿ ಭಾನುವಾರ ಅಸೆಟ್ಜ್ ಸಂಸ್ಥೆಯ ಸಹಯೋಗದಲ್ಲಿ ನಡೆದ ರೆಡ್ ಎಫ್‌ಎಂ ವಾಕಥಾನ್‌ನಲ್ಲಿ ಓಟಗಾರರು ಪಾಲ್ಗೊಂಡರು

ಆರೋಗ್ಯಕ್ಕಾಗಿ ಓಟದ ಖುಷಿ

ಬೆಂಗಳೂರು: ಅಸೆಟ್ಜ್ ಸಂಸ್ಥೆಯ ಸಹಯೋಗದೊಂದಿಗೆ ನಗರದಲ್ಲಿ ಭಾನು ವಾರ ಆಯೋಜಿಸಿದ್ದ ರೆಡ್ ಎಫ್‌ಎಂ ವಾಕಥಾನ್ ಯಶಸ್ವಿಯಾಗಿ ನಡೆಯಿತು.

ಆರೋಗ್ಯ ಪಾಲನೆ ಮತ್ತು ಸಮಾಜದ ಒಳಿತಿಗಾಗಿ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯಲ್ಲಿ ನಡೆದ ಈ ನಡಿಗೆಯಲ್ಲಿ 5,000ಕ್ಕೂ ಹೆಚ್ಚು ಮಂದಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ವೇಗವಾಗಿ ಬೆಳೆಯುತ್ತಿರುವ ನಗರ ಜೀವನದಲ್ಲಿ ಆರೋಗ್ಯದ ಮಹತ್ವ ಸಾರಲು 3 ಕಿ.ಮೀ., 5 ಕಿ.ಮೀ. ಮತ್ತು 10 ಕಿ.ಮೀ. ವಿಭಾಗಗಳಲ್ಲಿ ವಾಕಥಾನ್ ಆಯೋಜಿಸಲಾಗಿತ್ತು. ಬೆಳಗಿನ 5.30ರ ಹೊತ್ತಿಗೆ ಉತ್ಸಾಹದಿಂದಲೇ ಆರಂಭವಾದ ಕಾರ್ಯಕ್ರಮದಲ್ಲಿ ಲೈವ್ ಮ್ಯೂಸಿಕ್ ಮತ್ತು ಜುಂಬಾ ಸೆಷನ್‌ಗಳು ಗಮನ ಸೆಳೆದವು.

ಒಲಿಂಪಿಕ್ ಪದಕ ವಿಜೇತೆ ಸೈನಾ ನೆಹ್ವಾಲ್ ವಾಕಥಾನ್‌ಗೆ ಚಾಲನೆ ನೀಡಿ, ಪಾಲ್ಗೊಂಡವರಲ್ಲಿ ಫಿಟ್ನೆಸ್ ಬಗ್ಗೆ ಉತ್ಸಾಹ ತುಂಬಿದರು. 'ಹಿಂದುಳಿದ ಮಕ್ಕಳಿಗೆ ಎಐ ಚಾಲಿತ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಸಹಾಯ ಮಾಡಲಿರುವ ಈ ಆಂದೋಲನದ ಭಾಗವಾಗಲು ನನಗೆ ಹೆಮ್ಮೆ ಎನಿಸುತ್ತದೆ' ಎಂದು ಹೇಳಿದರು.

'ದೈಹಿಕ ಸಾಮರ್ಥ್ಯ ಯಾವಾಗಲೂ ನನ್ನ ಜೀವನದ ಪ್ರಮುಖ ಭಾಗವಾಗಿದೆ. ಪ್ರತಿಯೊಂದು ಸಣ್ಣ ಹೆಜ್ಜೆಯೂ ನಮ್ಮನ್ನು ದೊಡ್ಡ ಗುರಿಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ಬ್ಯಾಡ್ಮಿಂಟನ್ ಕೋರ್ಟ್ ನನಗೆ ಕಲಿಸಿದೆ' ಎಂದು ಸೈನಾ ಹೇಳಿದರು.

ಅಸೆಟ್ಜ್ ಕಾರ್ಯನಿರ್ವಾಹಕ ನಿರ್ದೇಶಕ ಸುನಿಲ್ ಪಾರೀಕ್ ಮಾತನಾಡಿ, 'ಉತ್ತಮ ಭವಿಷ್ಯವು ಅತ್ಯಾಧುನಿಕ ಕಟ್ಟಡಗಳಿಂದ ಗುರುತಿಸಲ್ಪಡುವುದಿಲ್ಲ, ಬದಲಿಗೆ ಅಲ್ಲಿನ ಜನರು ಎಷ್ಟು ಸಕ್ರಿಯವಾಗಿರುತ್ತಾರೆ ಎಂಬ ಅಂಶದ ಮೇಲೆ ನಿರ್ಧಾರವಾಗುತ್ತದೆ ಎಂಬುದು ಅಸೆಟ್ಜ್ ನಂಬಿಕೆ' ಎಂದರು.

ಬಡ್ತಿ: ಮೇ 26ರಿಂದ ಅರ್ಹತಾ ಪರೀಕ್ಷೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರಿಗೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ನಿಗದಿಪಡಿಸಿರುವ ಅರ್ಹತಾ ಪರೀಕ್ಷೆ ಇದೇ 26ರಿಂದ ಶುರುವಾಗಲಿದೆ.

ಮೇ 26ರಂದು ಬೆಳಿಗ್ಗೆ ಕನ್ನಡ, ಉರ್ದು, ಗಣಿತ, ಜೀವ ವಿಜ್ಞಾನ ಹಾಗೂ ಮಧ್ಯಾಹ್ನ ಇಂಗ್ಲಿಷ್, ಸಂಸ್ಕೃತ, 27ರಂದು ಬೆಳಿಗ್ಗೆ ಇತಿಹಾಸ, ಮಧ್ಯಾಹ್ನ ಹಿಂದಿ, 29ರಂದು ಬೆಳಿಗ್ಗೆ ಅರ್ಥ ಶಾಸ್ತ್ರ, ಮಧ್ಯಾಹ್ನ ರಾಜ್ಯಶಾಸ್ತ್ರ, 30ರಂದು ಬೆಳಿಗ್ಗೆ ಸಮಾಜ ಶಾಸ್ತ್ರ ಮಧ್ಯಾಹ್ನ ಭೂಗೋಳಶಾಸ್ತ್ರ ವಿಷಯಗಳ ಪರೀಕ್ಷೆ ನಡೆಯಲಿದೆ. ಜನಗಣತಿ ಕಾರಣದಿಂದಾಗಿ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಈಗ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದ್ದು, ಅಭ್ಯರ್ಥಿಗಳು ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಪ್ರವೇಶ ಪತ್ರಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಸೂಚಿಸಲಾಗಿದೆ. ವೆಬ್ ಸೈಟ್ ವಿಳಾಸ: https://sts.karnataka.gov.in/GPSTRNHK

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2026–27ನೇ ಶೈಕ್ಷಣಿಕ ಸಾಲಿನಲ್ಲಿ ವಸತಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ ಮತ್ತು ವೈದ್ಯಕೀಯ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ತಿಗಳ ಸಮುದಾಯದ (ಅಗ್ನಿವಂಶ ಕ್ಷತ್ರಿಯ) ಮತ್ತು ಇತರೆ ಸಮುದಾಯಗಳ ಆಸಕ್ತ ವಿದ್ಯಾರ್ಥಿಗಳು ಮೇ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 080–23200608, 97401 78757.

ಮೆಡಿಕವರ್ ತಾಯಿ, ಮಕ್ಕಳ ಆಸ್ಪತ್ರೆ ಉದ್ಘಾಟನೆ

ವೈಟ್‌ಫೀಲ್ಡ್‌ನ ಹೂಡಿಯಲ್ಲಿ ನಿರ್ಮಿಸಿರುವ ಮೆಡಿಕವರ್ ತಾಯಿ ಮಕ್ಕಳ, ಆಸ್ಪತ್ರೆಯನ್ನು ಚಿತ್ರನಟಿ ರುಕ್ಮಿಣಿ ವಸಂತ ಉದ್ಘಾಟಿಸಿದರು. ಡಾ.ಜಿ.ಅನಿಲ್ ಕೃಷ್ಣ, ಪಿ.ಹರಿಕೃಷ್ಣ, ಡಾ.ಸಿದ್ದರೆಡ್ಡಿ, ಡಾ.ಪ್ರವೀಣ್ ಇದ್ದರು.

ಕೆ.ಆರ್.ಪುರ: ವೈಟ್‌ಫೀಲ್ಡ್‌ನ ಹೂಡಿಯಲ್ಲಿ ನಿರ್ಮಿಸಿರುವ 100 ಹಾಸಿಗೆ ಸಾಮರ್ಥ್ಯದ ಮೆಡಿಕವರ್ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಚಿತ್ರನಟಿ ರುಕ್ಮಿಣಿ ವಸಂತ ಉದ್ಘಾಟಿಸಿದರು.

ಗರ್ಭಧಾರಣೆ, ನವಜಾತ ಶಿಶುವಿನ ತೀವ್ರ ನಿಗಾ ಘಟಕ, ಮಕ್ಕಳ ತುರ್ತು ಚಿಕಿತ್ಸೆ ಸೇವೆ ಒದಗಿಸಲಾಗುತ್ತದೆ. ಲೆವೆಲ್-3 ಎನ್‌ಐಸಿಯು, ಪಿಐಸಿಯು, ಮೆಟರ್ನಲ್ ಐಸಿಯು, ರೊಬೋಟಿಕ್ ಶಸ್ತ್ರಚಿಕಿತ್ಸೆ ಹಾಗೂ 24x7 ಮಕ್ಕಳ ತುರ್ತು ಚಿಕಿತ್ಸಾ ಸೇವೆಗಳು ಒಂದೇ ಸೂರಿನಡಿ ಲಭ್ಯವಿದೆ.

ಉದ್ಘಾಟನೆ ಅಂಗವಾಗಿ ವಿಶೇಷ ಪ್ಯಾಕೇಜ್ ಪರಿಚಯಿಸಿದೆ.

ನಟಿ ರುಕ್ಮಿಣಿ ವಸಂತ ಮಾತನಾಡಿ, 'ತಾಯಿಯ ಪ್ರೀತಿ ಪ್ರತಿಯೊಂದು ಮನೆಯ ಹೃದಯ ಬಡಿತದಂತಿದೆ. ಆ ಹೃದಯವನ್ನು ಕಾಪಾಡುವ ಈ ರೀತಿಯ ಆಸ್ಪತ್ರೆಯನ್ನು ತಾಯಂದಿರ ದಿನದಂದು ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ಸಂತೋಷದ ಸಂಗತಿ' ಎಂದರು.

ಆಸ್ಪತ್ರೆಯ ಅಧ್ಯಕ್ಷ ಡಾ.ಜಿ.ಅನಿಲ್ ಕೃಷ್ಣ ಮಾತನಾಡಿ, 'ತಾಯಿ ಮತ್ತು ಮಕ್ಕಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ರೂಪುಗೊಂಡ ಆಸ್ಪತ್ರೆಯನ್ನು ನಗರಕ್ಕೆ ನೀಡುತ್ತಿದ್ದೇವೆ' ಎಂದರು.

ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಹರಿಕೃಷ್ಣ ಮಾತನಾಡಿ, 'ಈ ಆಸ್ಪತ್ರೆ ಸ್ಥಳೀಯ ಪ್ರದೇಶದ ಜನರಿಗೆ ದೀರ್ಘಕಾಲಿಕ ಆರೋಗ್ಯ ಸೇವೆಗೆ ಬದ್ಧತೆಯಾಗಲಿದೆ' ಎಂದರು. ಆಸ್ಪತ್ರೆಯ ವೈದ್ಯರಾದ ಸಿದ್ದರೆಡ್ಡಿ, ಪ್ರವೀಣ್ ಇದ್ದರು.

ನಗರದಲ್ಲಿ ಇಂದು

ರಾಜಮಂತ್ರ ಪ್ರವೀಣ ಶ್ರೀ ಎಚ್.ಬಿ. ಗುಂಡಪ್ಪ ಗೌಡ ಸ್ಮಾರಕ 'ಸಾಮಾಜಿಕ ನ್ಯಾಯ: ಸಾಂವಿಧಾನಿಕ ದೃಷ್ಟಿಕೋನ' ಕುರಿತು ಉಪನ್ಯಾಸ: ಎಚ್.ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಆರ್. ರವೀಂದ್ರ, ಉಪಸ್ಥಿತಿ: ಅಪ್ಪರೆಡ್ಡಿ ಹರೀಶ್, ಎಚ್.ಜಿ. ಬಾಲಗೋಪಾಲ್, ಸಪ್ನಾ ಎನ್., ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾಲೇಜ್ ಆಫ್ ಲಾ, ಗಾಯತ್ರಿನಗರ, ಬೆಳಿಗ್ಗೆ 10.30

58ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಸಾಂಸ್ಕೃತಿಕ ಶಿಕ್ಷಣ ಹಾಗೂ ಮನರಂಜನಾ ಶಿಬಿರದ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿಗಳು: ಎಂ.ಕೆ. ಸುಂದರ್‌ರಾಜ್, ಭಾವನಾ ಎಸ್. ರೆಡ್ಡಿ, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಸಂಜೆ 4

ಸಾಮಾಜಿಕ ನಾಟಕೋತ್ಸವ: ಅಧ್ಯಕ್ಷತೆ: ಸುಬ್ರಮಣಿ, ಅತಿಥಿಗಳು: ಬಿ. ನೀಲಮ್ಮ, ಬಿ. ರುದ್ರೇಶ್, ಗೀತಾ, ಜಯಲಕ್ಷ್ಮಿ ಪುತ್ರನ್, 'ಏಕಲವ್ಯ' ರಂಗ ಗೌರವ ಸ್ವೀಕರಿಸುವವರು: ರಂಗಸ್ವಾಮಿ, ರೇವಣ್ಣ ಎಚ್.ಎ.ಎಲ್., ಕೆ.ಜಿ. ನಾರಾಯಣ, 'ಒಂದೇ ಸಂಸಾರ', 'ಹೆಣ್ಣಿನ ಮನಸ್ಸು' ನಾಟಕಗಳ ಪ್ರದರ್ಶನ, ಆಯೋಜನೆ: ಏಕಲವ್ಯ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

'ಪದ್ಮ ಪುರಾಣ' ಧಾರ್ಮಿಕ ಪ್ರವಚನ: ಹೊಳವನಹಳ್ಳಿ ಶ್ರೀನಿವಾಸಾಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪೂರ್ವ ನಗರ ಪಾಲಿಕೆಯ ಹಲವು ಕಡೆಗಳಲ್ಲಿ ಕಾರ್ಯಾಚರಣೆ

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ಭಾಗದ ಹಲವು ಪ್ರದೇಶಗಳಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ಭಾನುವಾರ ತೆರವುಗೊಳಿಸಲಾಯಿತು.

'ಪ್ರಮುಖ ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳನ್ನು ಒತ್ತುವರಿ ಮಾಡಿಕೊಂಡಿರುವ ಅಂಗಡಿಗಳು, ತಾತ್ಕಾಲಿಕ ನಿರ್ಮಾಣಗಳು, ವ್ಯಾಪಾರ ಮಳಿಗೆಗಳು, ಕಟ್ಟಡ ಸಾಮಗ್ರಿಗಳು, ಜಾಹೀರಾತು ಫಲಕಗಳು ಹಾಗೂ ಇತರೆ ವಸ್ತುಗಳಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದ್ದಾರೆ.

> **ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ನಿಯಮ ಉಲ್ಲಂಘನೆ ಮಾಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು**
> **ಲೋಖಂಡೆ ಸ್ನೇಹಲ್ ಸುಧಾಕರ್,** ಹೆಚ್ಚುವರಿ ಆಯುಕ್ತ ಪೂರ್ವ ನಗರ ಪಾಲಿಕೆ

ಹೂಡಿ ವಿಭಾಗ ವ್ಯಾಪ್ತಿಯಲ್ಲಿ ಹೂಡಿ ಸರ್ಕಲ್‌ನಿಂದ ಲಯನ್ಸ್ ಪಾರ್ಕ್ ರಸ್ತೆ, ಹೂಡಿ ಸರ್ಕಲ್‌ನಿಂದ ಕುಂದಲಹಳ್ಳಿ ಗೇಟ್, ಹೂಡಿ ಸರ್ಕಲ್‌ನಿಂದ ಅಯ್ಯಪ್ಪನಗರ ಮುಖ್ಯ ರಸ್ತೆ, ಹೂಡಿ ಸರ್ಕಲ್‌ನಿಂದ ಐಟಿಪಿಎಲ್ ಮುಖ್ಯರಸ್ತೆ, ಹೂಡಿ ಸರ್ಕಲ್‌ನಿಂದ ಬೆಳ್ಳಂದೂರುವರೆಗೆ ಕಾರ್ಯಾಚರಣೆ ನಡೆಸಲಾಯಿತು.

ಕಾಡುಗೋಡಿ ವಿಭಾಗ ವ್ಯಾಪ್ತಿಯಲ್ಲಿ ಚನ್ನಸಂದ್ರ ಮುಖ್ಯ ರಸ್ತೆ, ಐಟಿಪಿಎಲ್ ಮುಖ್ಯರಸ್ತೆ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಕಾಡುಗೋಡಿ ಮುಖ್ಯರಸ್ತೆಗಳಲ್ಲಿ ಒತ್ತುವರಿ ತೆರವು ಮಾಡಲಾಗಿದೆ.

ರಾಮಮೂರ್ತಿನಗರ ವಿಭಾಗ ವ್ಯಾಪ್ತಿಯಲ್ಲಿ ರಾಮಮೂರ್ತಿ ನಗರ ಸರ್ಕಲ್‌ನಿಂದ ಐಟಿಐ ಮೇನ್ ಗೇಟ್, ರಾಮಮೂರ್ತಿನಗರ ಚರ್ಚ್‌ನಿಂದ ಅಣ್ಣಪ್ಪ ಸರ್ಕಲ್, ಪೋಸ್ಟ್ ಆಫೀಸ್ ರಸ್ತೆ – ಕಲ್ಕೆರೆ ಸಂತೆ ರಸ್ತೆ, ಶೆಲ್ ಪೆಟ್ರೋಲ್ ಬಂಕ್‌ಯಿಂದ ಎನ್.ಆರ್.ಐ ಬಡಾವಣೆ, ಅಣ್ಣಪ್ಪ ಸರ್ಕಲ್‌ನಿಂದ ಗ್ಯಾಸ್ ಗೋಡೌನ್ ರಸ್ತೆ, ರಾಮಮೂರ್ತಿನಗರ ಚರ್ಚ್‌ನಿಂದ ಭೋವಿ ಕಾಲೊನಿ ಶಾಂತಿನಗರ ಲೇಔಟ್, ಕಲ್ಕೆರೆ ಸರ್ಕಲ್‌ನಿಂದ ಬಿ. ನಾರಾಯಣಪುರ ಮುಖ್ಯರಸ್ತೆವರೆಗೆ ಕಾರ್ಯಾಚರಣೆ ನಡೆಸಲಾಗಿದೆ.

ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಪ್ರತಿಯೊಂದು ವಾರ್ಡ್ ವ್ಯಾಪ್ತಿಯಲ್ಲಿ ತಂಡ ರಚಿಸಲಾಗಿದೆ ಎಂದು ಹೇಳಿದ್ದಾರೆ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ, ಅನಧಿಕೃತ ಫ್ಲೆಕ್ಸ್‌ಗಳನ್ನು ಸಿಬ್ಬಂದಿ ತೆರವುಗೊಳಿಸಿದರು

‘ಚುನಾವಣೆ ನಡೆಸದಿದ್ದರೆ ಜನರಿಂದಲೇ ಪಾಠ’

ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆ ಚುನಾವಣೆ ವಿಳಂಬ: ವೀರಪ್ಪ ಮೊಯಿಲಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳಷ್ಟೇ ಮಹತ್ವ ಹೊಂದಿರುವ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸಬೇಕು. ಹಿತಾಸಕ್ತಿಗಳಿಗೆ ಸಿಲುಕಿ ವಿಳಂಬ ಮಾಡುವ ಅಧಿಕಾರರೂಢ ಪಕ್ಷಗಳಿಗೆ ಜನರೇ ತಕ್ಕಪಾಠ ಕಲಿಸುತ್ತಾರೆ’ ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಎಚ್ಚರಿಸಿದರು.

ಕರ್ನಾಟಕ ಪಂಚಾಯತ್‌ರಾಜ್ ಪರಿಷತ್ ಭಾನುವಾರ ಆಯೋಜಿಸಿದ್ದ 16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗದ ವರದಿಗಳ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಯಾವುದೇ ಪಕ್ಷದ ಸರ್ಕಾರವಿದ್ದರೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಅಡ್ಡಿ ಇದ್ದೇ ಇರುತ್ತದೆ. ನಾನು ಮುಖ್ಯಮಂತ್ರಿ ಆಗಿದ್ದಾಗಲೂ ಪಂಚಾಯಿತಿಗಳ ಚುನಾವಣೆಗೆ ಅಡ್ಡಿಯಾಗಿತ್ತು.

ತಜ್ಞರು ಅಭಿಪ್ರಾಯ ಮಂಡಿಸಿದ್ದಾರೆ. ಮುಂದಿನ ವಾರದ ಒಳಗೆ ಇನ್ನೊಮ್ಮೆ ಪ್ರಮುಖರೊಂದಿಗೆ ದುಂಡು ಮೇಜಿನ ಸಭೆ ನಡೆಸಿ ಕೇಂದ್ರ ಸರ್ಕಾರಕ್ಕೆ ಅಭಿಪ್ರಾಯಗಳನ್ನು ಸಲ್ಲಿಸಲಾಗುವುದು
ಎಂ.ಕೆ.ಕೆಂಪೇಗೌಡ, ಸಲಹೆಗಾರ, ಕರ್ನಾಟಕ ಪಂಚಾಯತ್‌ರಾಜ್ ಪರಿಷತ್.

ಆಗ ಪಂಚಾಯತ್‌ರಾಜ್ ಸಚಿವರಾಗಿದ್ದ ಎಂ.ವೈ. ಘೋರ್ಪಡೆ ರಾಜೀನಾಮೆ ನೀಡಿದ್ದರು. ಮರು ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ನಾವು ಕಡಿಮೆ ಸ್ಥಾನ ಪಡೆಯಬೇಕಾಯಿತು. ತಮಿಳುನಾಡಿನಲ್ಲೂ ಈಗ ಹೇಗೆ ಸರ್ಕಾರ ಬದಲಿಸಿದರು ಎನ್ನುವ ಅರಿವು ಆಡಳಿತ ನಡೆಸುವವರಿಗೆ ಇರಬೇಕಾಗುತ್ತದೆ’ ಎಂದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಪ್ರಾಧ್ಯಾಪಕ ವಿ.ಎನ್.ಅಲೋಕ್ ಮಾತನಾಡಿ, ‘16ನೇ ಹಣಕಾಸು ಆಯೋಗವು ₹8 ಲಕ್ಷ ಕೋಟಿ ಅನುದಾನವನ್ನು ನೀಡಲಿದ್ದು, ಇದರಲ್ಲಿ ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿಗೆ ಶೇ 50ರಷ್ಟು ಮೀಸಲಿಡಲಾಗಿದೆ. ಸಚಿವಾಲಯಗಳಿಂದ ಸೂಚನೆಗಳು ಬರುವವರೆಗೂ ರಾಜ್ಯಗಳು ಕಾಯಬಾರದು’ ಎಂದು ಸಲಹೆ ನೀಡಿದರು.

ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್, ಕರ್ನಾಟಕದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಯೋಜನೆ ಇಲಾಖೆ ಕಾರ್ಯದರ್ಶಿ ಎಂ.ವಿ.ವೆಂಕಟೇಶ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಮೀನಾಕ್ಷಿ ಸುಂದರಂ, ಎಂ.ಆರ್. ಶ್ರೀನಿವಾಸಮೂರ್ತಿ, ಮೊಹಮ್ಮದ್ ಸನಾವುಲ್ಲಾ, ತಜ್ಞರಾದ ಛಾಯಾ ದೇವಗಾಂವಕರ್, ಡಿ.ರಾಜಶೇಖರ್, ಕಲಾಸೀತಾರಾಮ್, ಗೋಪಿನಾಥ ರೆಡ್ಡಿ, ಎನ್.ಶಿವಣ್ಣ, ಪರಿಷತ್ ಕಾರ್ಯಾಧ್ಯಕ್ಷ ವಿ.ವೈ.ಘೋರ್ಪಡೆ, ಉಪಾಧ್ಯಕ್ಷೆ ಸೌಭಾಗ್ಯ ಬಸವರಾಜನ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಸತೀಶ್, ಕೋಶಾಧಿಕಾರಿ ಚಿಕ್ಕಕೊಮಾರಿಗೌಡ ಉಪಸ್ಥಿತರಿದ್ದರು.

16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗಗಳ ವರದಿಗಳ ಕುರಿತ ವಿಚಾರಸಂಕಿರಣವನ್ನು ಎಂ. ವೀರಪ್ಪ ಮೊಯಿಲಿ ಉದ್ಘಾಟಿಸಿದರು. ಎಂ.ವಿ. ವೆಂಕಟೇಶ್, ವಿ.ವೈ. ಘೋರ್ಪಡೆ, ಡಿ. ಆರ್. ಪಾಟೀಲ್, ಸಿ.ನಾರಾಯಣಸ್ವಾಮಿ, ವಿ.ಎನ್. ಆಲೋಕ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಕರ್ನಾಟಕದಲ್ಲಿ ಪರಿಣಾಮಕಾರಿ ಜಾರಿ’

‘ಹಣಕಾಸು ಆಯೋಗಗಳ ಮೂಲಕ ಕೇಂದ್ರ ಸರ್ಕಾರ ಪಂಚಾಯಿತಿಗಳು, ನಗರ ಪ್ರದೇಶಗಳ ಅಭಿವೃದ್ಧಿಗೆ ಆರ್ಥಿಕ ನೆರವು ನೀಡುತ್ತದೆ. ಕೇರಳದಲ್ಲಿ ಪಂಚಾಯಿತಿಗಳಿಗೆ ಶೇ 80ರಷ್ಟು ಒತ್ತು ನೀಡಿದರೆ, ಕರ್ನಾಟಕದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶದ ಅಭಿವೃದ್ಧಿಗೆ ತಲಾ ಶೇ 50ರಲ್ಲಿ ಅನುದಾನ ಬಳಕೆಯಾಗುತ್ತಿದೆ’ ಎಂದು ಕೇರಳ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ಎಂ. ವಿಜಯಾನಂದ್ ಹೇಳಿದರು.

16ನೇ ಹಣಕಾಸು ಆಯೋಗದ ವರದಿ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ನಗರೀಕರಣದ ಹೆಸರಿನಲ್ಲಿ ಪಟ್ಟಣ ಪಂಚಾಯಿತಿ, ಪುರಸಭೆ ರಚಿಸುವ ಬದಲು ಪಂಚಾಯಿತಿ ರೂಪದ ಆಡಳಿತವೇ ಒಳ್ಳೆಯದು. ಕೇರಳ ಇದಕ್ಕೆ ಒತ್ತು ನೀಡಿದೆ. ಕರ್ನಾಟಕವೂ ಪಂಚಾಯಿತಿಗಳ ಸಬಲೀಕರಣ, ಅನುದಾನ ಬಳಕೆ, ಹೊಸ ಕಾರ್ಯಕ್ರಮಗಳ ಮೂಲಕ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಒತ್ತು ನೀಡಬೇಕು’ ಎಂದರು.

AMITY UNIVERSITY BENGALURU

LAW

PROGRAMMES OFFERED
• B.A, LL.B (Hons)*
• LL.B (Hons)*
(*Approved by BCI)
• LL.M

To apply visit:
amity.edu/bengaluru
by: 16th May 2026
7303-399-000

The Amity Bengaluru Advantage
• Placements in leading entities such as SBI Mutual Fund, ICICI Lombard, Sheenlac Paints, Policy Bazaar, DCB Bank, Fractal Analytics, HiveMinds...
• Distinguished faculty comprising eminent visiting jurists & policy makers
• Regular visits to Courts, Lok Adalats, Tribunals, Jails, Forensics Labs and Police Stations
• Practical exposure through legal aid camps, pro-bono services, case presentations, moot court competitions, legal quiz...
• Centre for Research in Corporate Law & Entrepreneurial Practices
• Value-added courses such as foreign languages, specialized courses to enhance communication skills
• Eminent law experts visiting the campus include SC Judges, HC Judges, Lokayukta officials, Business Law Chamber Associates...

Amity University Bengaluru, NH 648, Devanahalli–Doddaballapur Rd, Bengaluru | E: admissions.blr@amity.edu

ಮಹದೇಶ್ವರಬೆಟ್ಟ: ಚಿರತೆ ದಾಳಿಗೆ ಬಾಲಕ ಬಲಿ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟ ಸಮೀಪದ ನಾಗಮಲೆಯಲ್ಲಿ ಭಾನುವಾರ ಬೆಳಗಿನ ಜಾವ ಚಿರತೆ ದಾಳಿಯಿಂದ 10 ವರ್ಷದ ಬಾಲಕ ಹರ್ಷಿತ್ ಮೃತಪಟ್ಟಿದ್ದಾನೆ. ಈತ ಬೆಂಗಳೂರಿನ ಕಾಮಾಕ್ಷಿಪಾಳ್ಯದ ನಿವಾಸಿ ಸುರೇಶ್–ಪವಿತ್ರಾ ದಂಪತಿಯ ಪುತ್ರ.

ಬಾಲಕನ ಕುಟುಂಬ ಭಾನುವಾರ ಬೆಳಗಿನ ಜಾವ ದೇವರ ದರ್ಶನ ಪಡೆದು ನಾಗಮಲೆ ಕ್ಷೇತ್ರಕ್ಕೆ ಹೊರಟಿತ್ತು. ಇಂಡಿಗನತ್ತ ಗ್ರಾಮದವರೆಗೆ ಖಾಸಗಿ ವಾಹನದಲ್ಲಿ ತೆರಳಿ ಅಲ್ಲಿಂದ ನಾಗಮಲೆಗೆ ನಡೆದುಕೊಂಡು ಹೋಗುವಾಗ ಚಿರತೆ ದಾಳಿ ನಡೆಸಿ, ಬಾಲಕನ ಹೊತ್ತೊಯ್ದಿದೆ. ಕುತ್ತಿಗೆ ಕಚ್ಚಿದ್ದರಿಂದ ಬಾಲಕ ರಕ್ತಸ್ರಾವದಿಂದ ಮೃತಪಟ್ಟಿದ್ದಾನೆ.

ಅರಣ್ಯ ಇಲಾಖೆಯ ಸಿಬ್ಬಂದಿ ಶೋಧ ನಡೆಸಿದಾಗ ಬಾಲಕನ ಶವ ಬಂಡೆಯೊಂದರ ಬಳಿ ಪತ್ತೆಯಾಗಿದೆ. ಮಹದೇಶ್ವರ ಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜ.21ರಂದು ಮಂಡ್ಯದ ಪ್ರವೀಣ್ ಚಿರತೆ ದಾಳಿಯಿಂದ ಮೃತಪಟ್ಟಿದ್ದರು. ಫೆ.10ರಂದು ಚನ್ನಪಟ್ಟಣ ತಾಲ್ಲೂಕಿನ ಬಾಲಕ ಶ್ರೇಯಸ್ (8) ಚಿರತೆ ದಾಳಿಯಿಂದ ಗಾಯಗೊಂಡಿದ್ದ. ಅರಣ್ಯ ಇಲಾಖೆ ಭಕ್ತರ ಸುರಕ್ಷತೆಗೆ ಕ್ರಮವಹಿಸಿಲ್ಲ ಎಂಬ ಅಸಮಾಧಾನ ಸಾರ್ವಜನಿಕರಿಂದ ವ್ಯಕ್ತವಾಗಿದೆ.

ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಶಾಲೆಗೆ ಕೆ.ಎಫ್. ಪಾಟೀಲ ಎಂದು ನಾಮಕರಣ

‘ಮಕ್ಕಳಿಗೆ ವಿದ್ಯೆಯ ಜತೆಗೆ ವಿವೇಕ ಕಲಿಸಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ಅಂಕ ಗಳಿಕೆಯೇ ಜೀವನವಲ್ಲ’
- ಮಕ್ಕಳ ಮೇಲೆ ಒತ್ತಡ ಹೇರದಂತೆ ಪೋಷಕರಿಗೆ ಸಚಿವ ಜೋಶಿ ಸಲಹೆ

ಬೆಂಗಳೂರು: ಶಾಲೆ ಮತ್ತು ಮನೆಯಲ್ಲಿ ಮಕ್ಕಳಿಗೆ ವಿದ್ಯೆಯ ಜತೆಗೆ ವಿವೇಕ ಕಲಿಸಬೇಕು. ಮತ್ತೊಬ್ಬರ ಸಂಕಷ್ಟಕ್ಕೆ ಮಿಡಿಯುವ ಗುಣ ಕಲಿಸಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ರಾಜಾಜಿನಗರದಲ್ಲಿರುವ ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಆಂಗ್ಲ ಮಾಧ್ಯಮ ಶಾಲೆಗೆ ಕೆ.ಎಫ್. ಪಾಟೀಲ ಎಂದು ನಾಮಕರಣ ಮಾಡುವ ಸಮಾರಂಭದಲ್ಲಿ ಅವರು ಮಾತನಾಡಿದರು.

ಹೆಚ್ಚು ಅಂಕ ಗಳಿಸುವಂತೆ ಮಕ್ಕಳ ಮೇಲೆ ಪೋಷಕರು ಒತ್ತಡ ಹೇರಬಾರದು. ಅಂಕ ಗಳಿಕೆಯೇ ಜೀವನವಲ್ಲ. ಅದರ ಆಚೆಗೂ ಬದುಕು ಇದೆ ಎಂಬುದನ್ನು ಹೇಳಬೇಕು. ಕೆಲವೊಮ್ಮೆ ಪೋಷಕರು ಮೃತಪಟ್ಟಾಗ ಅಂತ್ಯಕ್ರಿಯೆಗೂ ಬಾರದ ಮಕ್ಕಳನ್ನು ನೋಡಿದ್ದೇವೆ. ಮಕ್ಕಳಲ್ಲಿ ಉತ್ತಮ ಮೌಲ್ಯಗಳು ಮತ್ತು ಸಂಸ್ಕಾರಗಳನ್ನು ಬೆಳೆಸುವ ಅಗತ್ಯತೆ ಇದೆ ಎಂದರು.

ಇತಿಹಾಸದಲ್ಲಿ ಕೆಲವರು ತಮ್ಮ ಸಮಾಜಮುಖಿಯಾದ ಸೇವೆಯಿಂದ ಅಜರಾಮರವಾಗಿ ಉಳಿಯುತ್ತಾರೆ. ಶಿಕ್ಷಣ, ಸಂಸ್ಕೃತಿ, ಸಮಾಜಸೇವೆ ರಾಜಕೀಯ ಈ ಎಲ್ಲ ನೆಲೆಗಳಲ್ಲಿ ಬಹು ಮೌಲಿಕವಾದ ಸೇವೆ ನೀಡಿ ಅಮರರಾದವರು ಕೆ.ಎಫ್. ಪಾಟೀಲರು. 1905ರಲ್ಲಿ ಜನಿಸಿದ ಕೆ. ಎಫ್. ಪಾಟೀಲರು ಶಾಸಕರಾಗಿ, ಸಚಿವರಾಗಿ ರಾಜಕೀಯವಾಗಿ ಸಾಕಷ್ಟು ಬೆಳೆದಿದ್ದರು. ರಾಜಕೀಯ ತ್ಯಜಿಸಿ ಬಡ ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳನ್ನು ಸ್ಥಾಪಿಸಿದರು. ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟರು ಎಂದು ತಿಳಿಸಿದರು.

ವಿಧಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಎಂ. ಲಮಾಣಿ, ಸಮರ್ಪಿತ ಸೇವೆ ಮತ್ತು ಉದಾರತೆಯ ಮೂಲಕ ಅನೇಕರಿಗೆ ಪ್ರೇರಣೆಯಾಗಿದ್ದ ಮಹಾನ್ ನಾಯಕ ಕೆ. ಎಫ್. ಪಾಟೀಲರು ಎಂದು ಬಣ್ಣಿಸಿದರು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರಭಾಕರ ಕೋರೆ ಮಾತನಾಡಿ, ಮುಂಬೈ–ಕರ್ನಾಟಕ ಭಾಗದಲ್ಲಿ ಶಿಕ್ಷಣದ ಬೆಳವಣಿಗೆಗೆ ದಾನಿಗಳ ಕೊಡುಗೆ ಅಪಾರವಾಗಿದೆ. ಅಂತಹ ಮಹಾನ್ ವ್ಯಕ್ತಿಗಳಲ್ಲಿ ಸರ್ ಸಿದ್ದಪ್ಪ ಕಂಬಳಿ ಹಾಗೂ ದಾನಿ ಕೆ. ಎಫ್. ಪಾಟೀಲರು ಪ್ರಮುಖರಾಗಿದ್ದಾರೆ. ಅವರ ಹೆಸರು ಬೆಂಗಳೂರಿನ ಭಾಗದಲ್ಲಿಯೂ ಅಜರಾಮರವಾಗಿ ಉಳಿಯಬೇಕೆಂಬ ಸದುದ್ದೇಶದಿಂದಲೇ ಕೆಎಲ್‌ಇ ಸಂಸ್ಥೆಯು ಅವರ ಹೆಸರನ್ನು ಈ ಶಾಲೆಗೆ ನಾಮಕರಣ ಮಾಡಿದೆ ಎಂದು ಹೇಳಿದರು.

ಇದೇ ವೇಳೆ, ಕೆ.ಎಫ್.ಪಾಟೀಲರ ಪುತ್ರಿ, ಚಲನಚಿತ್ರ ನಿರ್ಮಾಪಕಿ ಅರುಣರಾಜೇ ಪಾಟೀಲ ಅವರು ಬರೆದಿರುವ ‘ಕರ್ಮಯೋಗಿ ಕೆ.ಎಫ್.ಪಾಟೀಲ’ ಪುಸ್ತಕವನ್ನು ಜನಾರ್ಪಣೆ ಮಾಡಲಾಯಿತು ಹಾಗೂ ಅವರ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು.

ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಎಸ್. ಕೌಜಲಗಿ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಅಮಿತ್ ಪಿ. ಕೋರೆ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಯಶವಂತ್ ಗುರ್ಕಾರ್, ಶಾಲೆಯ ಪ್ರಾಂಶುಪಾಲೆ ಶರ್ಮಿಸ್ಟಾ ರಾಯ್, ಕೆಎಲ್‌ಇ ಉಪಾಧ್ಯಕ್ಷ ಬಸವರಾಜ ತಟವಟಿ ಹಾಜರಿದ್ದರು.

ರಾಜಾಜಿನಗರದಲ್ಲಿರುವ ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಆಂಗ್ಲ ಮಾಧ್ಯಮ ಶಾಲೆಗೆ ಕೆ.ಎಫ್. ಪಾಟೀಲ ಶಾಲೆ ಎಂದು ನಾಮಕರಣ ಮಾಡಲಾಯಿತು. ಪ್ರಲ್ಹಾದ್ ಜೋಶಿ, ಅರುಣರಾಜೇ ಪಾಟೀಲ್, ಅಮಿತ್ ಪಿ. ಕೋರೆ, ಮಹಾಂತೇಶ್ ಎಸ್. ಕೌಜಲಗಿ, ಪ್ರಭಾಕರ್ ಬಿ. ಕೋರೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪಾಲಿಕೆಗಳಿಗೆ ಚುನಾವಣೆ: ಸುರ್ಜೇವಾಲಾ ಜತೆ ಚರ್ಚೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳಿಗೆ ಸದ್ಯದಲ್ಲೇ ಚುನಾವಣೆ ಘೋಷಣೆಯಾಗುವುದು ಖಚಿತವಾದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಹತ್ವದ ಸಭೆ ನಡೆಸಿದರು.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಭಾನುವಾರ ನಡೆದ ಸಭೆ ಸಂದರ್ಭದಲ್ಲಿ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಕೂಡಾ ಇದ್ದರು.

ಇತ್ತೀಚೆಗೆ ರಾಜ್ಯ ಚುನಾವಣಾ ಆಯುಕ್ತರು ಜಿ.ಎಸ್. ಸಂಗ್ರೇಶಿ ಅವರು ಜೂನ್ ಮಧ್ಯದಲ್ಲಿ ಜಿಬಿಎ ನಗರ ಪಾಲಿಕೆಗಳ ಚುನಾವಣೆ ನಡೆಸುವುದಾಗಿ ಸ್ಪಷ್ಟಪಡಿಸಿದ್ದಾರೆ. ಸುರ್ಜೇವಾಲಾ ಜೊತೆ ನಡೆದ ಸಭೆಯಲ್ಲಿ ಚುನಾವಣೆ ಮುಂದೂಡಲು ಸರ್ಕಾರದ ಮುಂದಿರುವ ಆಯ್ಕೆಗಳ ಬಗ್ಗೆ ಪರಿಶೀಲನೆ ನಡೆಸಿದರು ಎಂದು ಗೊತ್ತಾಗಿದೆ.

ಯಾವುದಾದರೂ ಕಾರಣ ನೀಡಿ ಸುಪ್ರೀಂ ಕೋರ್ಟ್ ಎದುರು ಹೆಚ್ಚುವರಿ ಕಾಲಾವಕಾಶ ನೀಡಲು ಅವಕಾಶಗಳಿವೆಯೇ ಎಂಬ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ಅಲ್ಲದೆ, ಯಾವಾಗ ಚುನಾವಣೆ ಘೋಷಣೆಯಾದರೂ ಪಕ್ಷ ಸಂಪೂರ್ಣವಾಗಿ ಚುನಾವಣೆ ಸಜ್ಜಾಗಿರಬೇಕು ಎಂದು ನಿರ್ಧರಿಸಲಾಗಿದೆ.

ಎಸ್‌ಐಆರ್ ಬಗ್ಗೆಯೂ ಚರ್ಚೆ: ಸಭೆಯಲ್ಲಿ ಎಸ್‌ಐಆರ್ ಹಾಗೂ ಅದರ ಪರಿಣಾಮಗಳ ಕುರಿತು ಬಗ್ಗೆಯೂ ಚರ್ಚಿಸಲಾಗಿದೆ. ಎರಡು ದಿನಗಳ ಹಿಂದಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಎಸ್‌ಐಆರ್ ಬಗ್ಗೆ ವಿವಿಧ ಸಂಘಟನೆಗಳ ಜೊತೆ ಸಭೆ ನಡೆದಿತ್ತು. ಆ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ ಎಸ್‌ಐಆರ್ ಬಗ್ಗೆ ರಾಜ್ಯ ಸರ್ಕಾರ ಯಾವೆಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂಬ ಕುರಿತು ಪ್ರಾಥಮಿಕವಾಗಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

365ನೇ ಉಚಿತ ನೇತ್ರ ತಪಾಸಣೆ ಶಿಬಿರ

ಬೆಂಗಳೂರು: ಉದಯಭಾನು ಕಲಾಸಂಘ ಹಾಗೂ ನಾರಾಯಣ ನೇತ್ರಾಲಯದ ಸಹಯೋಗದಲ್ಲಿ ಭಾನುವಾರ ಉಚಿತ ನಾಗರಿಕ ಆರೋಗ್ಯ ಪಾಲನಾ ಕಾರ್ಯಕ್ರಮದ ಅಡಿಯಲ್ಲಿ 365ನೇ ನೇತ್ರ ತಪಾಸಣೆ ಶಿಬಿರ ನಡೆಯಿತು.

ವಿನಾಯಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಗಾಯತ್ರಿ ಚಂದ್ರಮೂರ್ತಿ ಮಾತನಾಡಿ, ‘ಉದಯಭಾನು ಕಲಾಸಂಘವು ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ, ಶಿಕ್ಷಣವನ್ನು ಒದಗಿಸುತ್ತಿರುವುದು ಶ್ಲಾಘನೀಯ’ ಎಂದರು.

ಡಾ. ಆಯಶ್ ಅವರು ಶಿಬಿರದಲ್ಲಿ ಪಾಲ್ಗೊಂಡಿದ್ದ ಫಲಾನುಭವಿಗಳನ್ನು ಪರೀಕ್ಷಿಸಿ, ಸಲಹೆ ಸೂಚನೆಗಳನ್ನು ನೀಡಿ ಪೊರೆ ಶಸ್ತ್ರಚಿಕಿತ್ಸೆಗೆ ಮಾರ್ಗದರ್ಶನ ನೀಡಿದರು. ಈ ಶಿಬಿರದಲ್ಲಿ 120ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ನಾರಾಯಣ ನೇತ್ರಾಲಯದ ಶಿಬಿರ ಸಂಯೋಜಕ ಸುಭಾಷ್, ಸಂಘದ ಉಪಾಧ್ಯಕ್ಷ ಬಿ.ಎಸ್. ಸತ್ಯನಾರಾಯಣ, ಸಹಾಯಕ ಕಾರ್ಯದರ್ಶಿ ಕೆ.ಎನ್. ಸೋಮಶೇಖರ್ ಮತ್ತು ಎಚ್.ಎಸ್. ಕಪಿನಯ್ಯ, ಕೋಶಾಧ್ಯಕ್ಷ ಎಸ್. ಅನಿಲ್ ಕುಮಾರ್, ಸದಸ್ಯ ಕೆ.ಎಲ್. ರಾಮಚಂದ್ರ, ಭಾನುಮತಿ ಉಪಸ್ಥಿತರಿದ್ದರು.

ಮೇ 24ರಂದು 366ನೇ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಲಿದೆ. ಇದರ ಜೊತೆಗೆ 285ನೇ ಉಚಿತ ದಂತ ತಪಾಸಣಾ ಶಿಬಿರ ನಡೆಯಲಿದ್ದು, ಆಸಕ್ತರು ಸಂಘದ ಕಾರ್ಯಾಲಯದಲ್ಲಿ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. **ಮಾಹಿತಿಗೆ:** 080-26609343/ 26601831, 9980204965.

ಮನೆಯಿಂದಲೇ ಕೆಲಸ ಮಾಡಲು ಪ್ರಧಾನಿ ಸಲಹೆ

ಹೈದರಾಬಾದ್ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಅಡ್ಡ ಪರಿಣಾಮಗಳಿಂದ ಜನರನ್ನು ರಕ್ಷಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ಅವರು, ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸಲು ಜನರು ಮನೆಯಿಂದಲೇ ಕೆಲಸ ಮಾಡಬೇಕು ಎಂಬ ಸಲಹೆ ನೀಡಿದ್ದಾರೆ.

ಇಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ವಿದೇಶಿ ವಿನಿಮಯವನ್ನು ಉಳಿಸಲು ನಗರಗಳಲ್ಲಿ ಜನ ಮೆಟ್ರೊ ರೈಲು ಬಳಸಬೇಕು, ಕಾರ್ ಪೂಲಿಂಗ್ ಮೊರೆ ಹೋಗಬೇಕು, ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಇ.ವಿ. ಬಳಸಬೇಕು, ಪಾರ್ಸೆಲ್ ರವಾನಿಸಲು ರೈಲ್ವೆಯ ಸೇವೆ ಬಳಸಬೇಕು’ ಎಂಬ ಸಲಹೆಗಳನ್ನು ಕೂಡ ನೀಡಿದ್ದಾರೆ.

ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆ ಇದ್ದಾಗ, ಬಿಕ್ಕಟ್ಟಿನಿಂದ ಹೊರಬರಲು ಸರ್ಕಾರ ಬೇರೆ ಬೇರೆ ಕ್ರಮಗಳನ್ನು ಕೈಗೊಂಡರೂ ಕಷ್ಟಗಳು ಹೆಚ್ಚಾಗುತ್ತಿರುತ್ತವೆ ಎಂದು ಅವರು ಹೇಳಿದ್ದಾರೆ. ‘ಹೀಗಾಗಿ, ಜಾಗತಿಕ ಬಿಕ್ಕಟ್ಟಿನ ಸಂದರ್ಭಗಳಲ್ಲಿ ದೇಶದ ಹಿತವು ಎಲ್ಲಕ್ಕಿಂತ ಮಿಗಿಲಾಗಿ ಇರಬೇಕು, ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ನಾವು ಕೊರೊನಾ ಅವಧಿಯಲ್ಲಿ ಮನೆಯಿಂದಲೇ ಕೆಲಸ ಮಾಡುವ ಬಗೆಯನ್ನು, ವರ್ಚುವಲ್ ವೇದಿಕೆಗಳ ಮೂಲಕ ಸಭೆ ನಡೆಸುವುದನ್ನು ಕಲಿತಿದ್ದೇವೆ. ಅವುಗಳಿಗೆ ನಾವು ಒಗ್ಗಿಕೊಂಡಿದ್ದೇವೆ. ಆ ವಿಧಾನಗಳನ್ನು ಮತ್ತೆ ಶುರು ಮಾಡುವ ಅಗತ್ಯ ಈಗ ಇದೆ’ ಎಂದು ಅವರು ತಿಳಿಸಿದ್ದಾರೆ.

ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಜಾರಿ: ಸಚಿವ ಮಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಮಹತ್ವದ ಕ್ರಮ ಕೈಗೊಂಡಿದ್ದು, ಮುಂದಿನ ವರ್ಷದೊಳಗೆ ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಜಾರಿಗೆ ತರಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಯಲಕ್ಷ್ಮಿ ಬಿ. ಅವರು ಕನ್ನಡಕ್ಕೆ ಅನುವಾದಿಸಿರುವ ಕಂಚ ಐಲಯ್ಯ ಅವರ ‘ಶೂದ್ರ ಬಂಡಾಯ’ ಪುಸ್ತಕ ಜನಾರ್ಪಣೆಗೊಳಿಸಿ ಮಾತನಾಡಿದರು.

‘ಈಗಾಗಲೇ ಹಲವು ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಅನುಷ್ಠಾನಗೊಳಿಸಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸುವುದಾಗಿ ಘೋಷಿಸಿದಾಗ ಕನ್ನಡ ವಿರೋಧಿ ಎಂದು ಟೀಕಿಸಿದರು. ಅದಕ್ಕೆ ತಲೆಕೆಡಿಸಿಕೊಳ್ಳಲಿಲ್ಲ. ನಾನು ಕನ್ನಡ ವಿರೋಧಿ ಅಲ್ಲ. ಕನ್ನಡಕ್ಕೆ ಪ್ರಥಮ ಆದ್ಯತೆ ನೀಡಲಾಗುವುದು’ ಎಂದು ಹೇಳಿದರು.

‘ಈ ಬಾರಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ನಕಲು ಮಾಡಲು ಅವಕಾಶ ನೀಡಿಲ್ಲ. ನಕಲು ಮಾಡಿ ಉತ್ತೀರ್ಣರಾದವರು ಜೀವನದಲ್ಲಿ ಮುಂದೆ ಬರಲು ಆಗುವುದಿಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತೇವೆ. ಅದನ್ನು ಶಿಕ್ಷಣ ಮೂಲಕ ಕಾರ್ಯರೂಪಕ್ಕೆ ತರುತ್ತೇವೆ’ ಎಂದರು.

‘ನಾನು ಶಿಕ್ಷಣ ಸಚಿವನಾದಾಗ ನನ್ನ ಕನ್ನಡ ಭಾಷೆಯ ಬಗ್ಗೆ ಟೀಕೆ ಮಾಡಿದರು. ಇದರಲ್ಲಿ ನನ್ನ ತಪ್ಪಿಲ್ಲ. ನನಗೆ ಕನ್ನಡ ಹೇಳಿ ಕೊಟ್ಟವರ ತಪ್ಪು. ಅವರನ್ನು ಹುಡುಕುತ್ತಿದ್ದೇನೆ. ಅವರಿಗೆ ಏನೂ ಮಾಡುವುದಿಲ್ಲ. ಸರಿಯಾಗಿ ಹೇಳಿ ಕೊಟ್ಟಿದ್ದರೆ ಕಲಿಯುತ್ತಿದ್ದೆ. ಪ್ರಾಥಮಿಕ ಶಿಕ್ಷಣವನ್ನು ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ಪಡೆದೆ. ಅಲ್ಲಿ ಇಂಗ್ಲಿಷ್ ಅನ್ನು ಕನ್ನಡದಲ್ಲಿ, ಕನ್ನಡವನ್ನು ಇಂಗ್ಲಿಷ್‌ನಲ್ಲಿ ಕಲಿಸುತ್ತಿದ್ದರು’ ಎಂದು ತಿಳಿಸಿದರು.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎ.ನಾರಾಯಣ ಹೇಳಿಕೆ

‘ಚರಿತ್ರೆಯಲ್ಲಿ ಶೂದ್ರವರ್ಗ ಕಡೆಗಣನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಾಸ್ತವ ತಿಳಿದುಕೊಳ್ಳಲು ಲೇಖಕ ಕಂಚ ಐಲಯ್ಯ ಅವರ ಎಲ್ಲ ಪುಸ್ತಕಗಳು ಕನ್ನಡ ಭಾಷೆಗೆ ಅನುವಾದವಾಗಬೇಕು ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎ.ನಾರಾಯಣ ಹೇಳಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಯಲಕ್ಷ್ಮಿ ಬಿ. ಅವರು ಕನ್ನಡಕ್ಕೆ ಅನುವಾದಿಸಿರುವ ಕಂಚ ಐಲಯ್ಯ ಶೆಫರ್ಡ್ ಅವರ ‘ಶೂದ್ರ ಬಂಡಾಯ’ ಪುಸ್ತಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಅವರ ಪುಸ್ತಕಗಳಲ್ಲಿ ಧರ್ಮ, ಜಾತಿ, ಸಮಾಜ ಮತ್ತು ರಾಜಕೀಯದ ಬಗ್ಗೆ ವಿಸ್ತಾರವಾಗಿ ತಿಳಿಸಲಾಗಿದೆ. ಈ ವಿಚಾರವನ್ನು ಕರ್ನಾಟಕದ ಜನರು ಓದುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಶೂದ್ರ ವರ್ಗಕ್ಕೆ ಈ ದೇಶದಲ್ಲಿ ಚಾರಿತ್ರಿಕವಾಗಿ ಮತ್ತು ಚರಿತ್ರೆಯಲ್ಲಿ ಅನ್ಯಾಯವಾಗಿದೆ. ದೇಶದ ಜನರ ಮೂಲಭೂತ ಅಗತ್ಯತೆಗಳನ್ನು ಸಮಗ್ರವಾಗಿ ಪೂರೈಸಿದವರು ಈ ವರ್ಗ. ಚರಿತ್ರೆ ಬರೆಯುವವರು ಶೂದ್ರವರ್ಗವನ್ನು ಹೊರಗಿಟ್ಟು ಬರೆದಿದ್ದಾರೆ. ವ್ಯವಹಾರಿಕ ಮತ್ತು ಸಾಂಸ್ಕೃತಿಕ ಚರಿತ್ರೆಗಳಲ್ಲಿ ಈ ವರ್ಗವನ್ನು ಕಡೆಗಣಿಸಲಾಗಿದೆ. ಪುರಾಣಗಳಲ್ಲಿ ಪ್ರಸ್ತಾಪವೇ ಇಲ್ಲ. ಚಾರಿತ್ರಿಕವಾಗಿ ಆಗಿರುವ ಅಪಚಾರವನ್ನು ಸರಿಪಡಿಸುವ ಕೆಲಸವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ ಎಂದು ತಿಳಿಸಿದರು.

ಶೂದ್ರವರ್ಗವನ್ನು ತುಳಿಯುವ ಕೆಲಸ 1925ರಿಂದಲೋ, 2014ರಿಂದಲೋ ಪ್ರಾರಂಭವಾಗಲಿಲ್ಲ, ನಾಗರಿಕತೆ ಯುಗದಿಂದಲೂ ಈ ವರ್ಗವನ್ನು ಕೆಳಗಿಟ್ಟು ನೋಡಲಾಗಿದೆ. ಈ ವರ್ಗಕ್ಕೆ ವ್ಯವಸ್ಥಿತವಾಗಿ ಅಕ್ಷರ ಜ್ಞಾನವನ್ನು ನಿರಾಕರಿಸಿ ಜ್ಞಾನಪರಂಪರೆ ದಾಖಲಾಗದಂತೆ ನೋಡಿಕೊಳ್ಳಲಾಗಿದೆ. ಒಂದು ವೇಳೆ, ಈ ವರ್ಗಕ್ಕೆ ಅಕ್ಷರಾಭ್ಯಾಸ ಇದ್ದಿದ್ದರೆ ಇವತ್ತಿನ ಭಾರತದ ಜ್ಞಾನಪರಂಪರೆ ಭಿನ್ನವಾಗಿ, ವೈಜ್ಞಾನಿಕವಾಗಿ ಇರುತ್ತಿತ್ತು ಎಂದು ವಿವರಿಸಿದರು.

ಲೇಖಕ ಕಂಚ ಐಲಯ್ಯ ಮಾತನಾಡಿ, ‘1946ರಲ್ಲಿ ಅಂಬೇಡ್ಕರ್ ಅವರು ಶೂದ್ರರ ಬಗ್ಗೆ ಪುಸ್ತಕ ಬರೆದರು. ಅದಾದ ಬಳಿಕ ಯಾವ ವಿಶ್ವವಿದ್ಯಾಲಯಗಳಾಗಲಿ, ಸಂಶೋಧಕರಾಗಲಿ ಪುಸ್ತಕ ಬರೆಯಲಿಲ್ಲ. ಶಾಲೆಯಲ್ಲಿ ಓದಬೇಕಾದರೆ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಬ್ರಾಹ್ಮಣರು, ಸನ್ಯಾಸಿಗಳು ಮತ್ತು ಕ್ಷತ್ರಿಯ ರಾಜರ ಬಗ್ಗೆ ಪ್ರಸ್ತಾಪವಿತ್ತು. ಎಲ್ಲಿಯೂ ಶೂದ್ರರ ಬಗ್ಗೆ ಮಾಹಿತಿ ಇರಲಿಲ್ಲ. ಆಗಲೇ ನನಗೆ ಅನುಮಾನ ಶುರುವಾಯಿತು’ ಎಂದರು.

ಶ್ರೀಮಂತರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸಲು ಬಯಸುತ್ತಾರೆ. ಸರ್ಕಾರಿ ಶಾಲೆ ಮಕ್ಕಳು ಮಾತೃ ಭಾಷೆಯಲ್ಲಿ ಶಿಕ್ಷಣ ಕಲಿಯುತ್ತಾರೆ. ನಾನು ಇಂಗ್ಲಿಷ್ ಕಲಿತು ಅಮೆರಿಕ ಅಥವಾ ಬ್ರಿಟನ್‌ನ ಇಂಗ್ಲಿಷ್‌ನಲ್ಲಿ ಪುಸ್ತಕ ಬರೆಯಲಿಲ್ಲ. ಶೆಫರ್ಡ್ ಇಂಗ್ಲಿಷ್‌ನಲ್ಲಿ ಬರೆದಿದ್ದೇನೆ. ಈ ಪುಸ್ತಕಗಳು ಅತಿ ಹೆಚ್ಚು ಮಾರಾಟವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪೋಷಕರು ಮಕ್ಕಳ ಮುಂದೆ ಪ್ರತಿ ವಾರ ಒಂದು ತಾಸು ಪುಸ್ತಕ ಓದಬೇಕು. ಆಗ ಮಕ್ಕಳು ಪುಸ್ತಕ ಓದಲು ಪ್ರಾರಂಭಿಸುತ್ತಾರೆ ಎಂದು ಕಿವಿಮಾತು ಹೇಳಿದರು.

ಭಾರತಿ ದೇವಿ ಮಾತನಾಡಿದರು. ಸಚಿವ ಮಧು ಬಂಗಾರಪ್ಪ, ಕಾಂಗ್ರೆಸ್ ಮುಖಂಡ ಶಿವಣ್ಣ, ಪ್ರಕಾಶಕ ಧನಂಜಯ್ ಅವರು ಉಪಸ್ಥಿತರಿದ್ದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ, ಜಯಲಕ್ಷ್ಮಿ ಬಿ. ಅವರು ಕನ್ನಡಕ್ಕೆ ಅನುವಾದಿಸಿರುವ ಕಂಚ ಐಲಯ್ಯ ಅವರ ‘ಶೂದ್ರ ಬಂಡಾಯ’ ಪುಸ್ತಕ ಜನಾರ್ಪಣೆ ಸಮಾರಂಭದಲ್ಲಿ ಮಧು ಬಂಗಾರಪ್ಪ, ಕಂಚ ಐಲಯ್ಯ ಶೆಫರ್ಡ್, ಎ. ನಾರಾಯಣ, ಭಾರತಿ ದೇವಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸಾಕಷ್ಟು ಅಧ್ಯಯನ ಮಾಡಿ ಕಂಚ ಐಲಯ್ಯ ಅವರು ಪುಸ್ತಕವನ್ನು ಬರೆದಿದ್ದಾರೆ. ಇದರ ಅನುವಾದ ಸವಾಲಾಗಿತ್ತು
ಬಿ.ಜಯಲಕ್ಷ್ಮಿ, ಅನುವಾದಕಿ

ಆಂಗ್ಲ ಭಾಷೆಯಲ್ಲಿ ಎಂಟು ಪುಸ್ತಕ

ಕಂಚ ಐಲಯ್ಯ ಅವರು ತೆಲುಗು ಭಾಷೆಯಲ್ಲಿ ಓದಿ ಆಂಗ್ಲ ಭಾಷೆಯಲ್ಲಿ ಎಂಟು ಪುಸ್ತಕಗಳನ್ನು ಬರೆದಿದ್ದಾರೆ. ಮಾತೃ ಭಾಷೆಯ ಜತೆಗೆ ಇಂಗ್ಲಿಷ್ ಜ್ಞಾನ ಸಹ ಇರಬೇಕು. ಸರ್ಕಾರಿ ಶಾಲೆಯ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಹೊರಟಿರುವುದು ಒಳ್ಳೆಯ ಬೆಳವಣಿಗೆ ಎಂದು ನಾರಾಯಣ ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ಕಸದ ರಾಶಿ ತೆರವುಗೊಳಿಸಿ’

ರಾಜರಾಜೇಶ್ವರಿನಗರದ ಚನ್ನಸಂದ್ರದ ಕೃಷ್ಣ ರೆಸಿಡೆನ್ಸಿ ಬ್ಲಾಕ್–1 ಬಡಾವಣೆಯ ಮುಂಭಾಗದ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಬೀದಿ ನಾಯಿಗಳು ಹಾಗೂ ಬೀಡಾಡಿ ದನಗಳು ಕಸದ ರಾಶಿಯನ್ನು ರಸ್ತೆಗೆ ಎಳೆದು ತರುತ್ತಿದ್ದು, ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಈ ಬಗ್ಗೆ ಪಾಲಿಕೆಯ ಸಿಬ್ಬಂದಿಗೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ.

ಬಸವರಾಜು ಎಂ. ಎನ್., ರಾಜರಾಜೇಶ್ವರಿನಗರ

‘ರಸ್ತೆ ಗುಂಡಿ ಮುಚ್ಚಿ’

ರಾಮಮೂರ್ತಿನಗರದ ವ್ಯಾಪ್ತಿಯ ಮುನೇಶ್ವರ ಬಸ್ ತಂಗುದಾಣ ಮುಂಭಾಗದ ಟಿ.ಸಿ. ಪಾಳ್ಯ ಮುಖ್ಯ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಬೆಂಗಳೂರು ಜಲಮಂಡಳಿಯ ಅಧಿಕಾರಿಗಳು ಈ ರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಆಗುತ್ತಿವೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಈ ರಸ್ತೆಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ರಾಮಮೂರ್ತಿನಗರ ನಿವಾಸಿಗಳು

‘ರಸ್ತೆ ದುರಸ್ತಿಗೊಳಿಸಿ’

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಗೆ ಬರುವ ಬಸವನಪುರ ವಾರ್ಡ್‌ನ ಮೇಡಹಳ್ಳಿಯಿಂದ ಕುರುಡು ಸೋನೆನಹಳ್ಳಿಗೆ ಸಂಪರ್ಕಿಸುವ ರಸ್ತೆ ಗುಂಡಿಮಯವಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ರಸ್ತೆ ಹಾಳಾದ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ಈ ಬಗ್ಗೆ ಪಾಲಿಕೆಯ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಥಳೀಯ ಜನಪ್ರತಿನಿಧಿಗಳು ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ಕಾವೇರಿಪುರದ ನಾಲ್ಕನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಮುರಿದು ಬಿದ್ದಿದೆ. ಇದರಿಂದ ವೃದ್ಧರು, ಮಹಿಳೆಯರು ಹಾಗೂ ಮಕ್ಕಳ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗದ ಕಾಂಕ್ರೀಟ್ ಸ್ಲ್ಯಾಬ್ ಹಾಳಾಗಿರುವ ಪರಿಣಾಮ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಇತ್ತೀಚೆಗೆ ವೃದ್ಧರೊಬ್ಬರು ಈ ಮಾರ್ಗದ ಮೂಲಕ ಹೋಗುವ ಸಂದರ್ಭದಲ್ಲಿ ಬಿದ್ದು ತಲೆಗೆ ಗಾಯವಾಗಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಕೂಡಲೇ ಈ ಪಾದಚಾರಿ ಮಾರ್ಗ ದುರಸ್ತಿಗೊಳಿಸಬೇಕು.

ಕಾವೇರಿಪುರದ ನಿವಾಸಿಗಳು

‘ಜೂನ್ 14ರಂದು ಮಾದರ ಶಕ್ತಿ ಪ್ರದರ್ಶನ’

30ರ ಒಳಗಾಗಿ ಎಲ್ಲ ಜಿಲ್ಲಾ, ತಾಲ್ಲೂಕು ಸಮಿತಿ ರಚನೆ ಕಡ್ಡಾಯ: ಸಚಿವ ಮುನಿಯಪ್ಪ ನೇತೃತ್ವದಲ್ಲಿ ಮಾದರ ಮಹಾಸಭಾ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂನ್ 14ರಂದು ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸುವ ಮೂಲಕ ಶಕ್ತಿ ಪ್ರದರ್ಶಿಸಲು ಕರ್ನಾಟಕ ಮಾದರ ಮಹಾಸಭಾ ನಿರ್ಣಯ ತೆಗೆದುಕೊಂಡಿದೆ.

ಮಹಾಸಭಾದ ಅಧ್ಯಕ್ಷರೂ ಆಗಿರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ನೇತೃತ್ವದಲ್ಲಿ ಮಹಾಸಭಾದ ರಾಜ್ಯ ಕಾರ್ಯಕಾರಿಣಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಭೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಭಾನುವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಮುನಿಯಪ್ಪ, ‘ಈ ತಿಂಗಳ 30ರ ಒಳಗಾಗಿ ಮಹಾಸಭಾದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳು ಕಡ್ಡಾಯವಾಗಿ ರಚನೆಯಾಗಬೇಕು. ಪ್ರತಿಯೊಬ್ಬ ಕಾರ್ಯಕಾರಿಣಿ ಸದಸ್ಯರು ಕನಿಷ್ಠ 50 ಹೊಸ ಸದಸ್ಯರನ್ನು ಸಂಘಟನೆಗೆ ಸೇರಿಸಬೇಕು. ಆ ಮೂಲಕ, ರಾಜ್ಯದಾದ್ಯಂತ ಲಕ್ಷಾಂತರ ಸದಸ್ಯರನ್ನು ಸಂಘಟನೆ ಹೊಂದುವಂತೆ ಆಗಬೇಕು’ ಎಂದರು.

‘ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳನ್ನು ಶೀಘ್ರವಾಗಿ ರಚಿಸಿದರೆ 3,652 ಸದಸ್ಯರಾಗಲಿದ್ದಾರೆ. ಶೋಷಿತ ಸಮುದಾಯದ ಅಭಿವೃದ್ಧಿ ಮಹಾಸಭಾದ ಉದ್ದೇಶ. ಸಮುದಾಯದ ಎಲ್ಲರನ್ನು ಮಹಾಸಭಾದ ಸದಸ್ಯರನ್ನಾಗಿ ಮಾಡಬೇಕು. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಪಕ್ಷದಲ್ಲಿರುವ ಸಮುದಾಯದ ಎಲ್ಲ ನಾಯಕರು ಹಾಗೂ ಸ್ವಾಮೀಜಿಗಳನ್ನು ಒಂದೇ ಸೂರಿನಡಿ ಸೇರಿಸಿ ಜೂನ್ 14ರಂದು ಬೃಹತ್ ಮಟ್ಟದ ಸಭೆ ನಡೆಸಲು ಉದ್ದೇಶಿಸಲಾಗಿದೆ’ ಎಂದರು.

‘ಇದುವರೆಗೂ ನಮಗೆ ಶೇ 15ರಲ್ಲಿ ಶೇ 1ರಷ್ಟು ಮೀಸಲಾತಿ ಪಡೆಯಲು ಕೂಡಾ ಅವಕಾಶ ಇರಲಿಲ್ಲ. ಎಲ್ಲ ದಲಿತ ಸಂಘಟನೆಗಳ, ಹೋರಾಟಗಾರರ ಶ್ರಮದಿಂದ ಒಳಮೀಸಲಾತಿ ಜಾರಿಗೊಳಿಸಲು ಸಾಧ್ಯವಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಸಂಪುಟದ ಎಲ್ಲ ಸದಸ್ಯರ ಸರ್ವಾನುಮತದ ಒಪ್ಪಿಗೆಯಿಂದ ಮೀಸಲಾತಿಯು ಪ್ರವರ್ಗ ‘ಎ’ ಗುಂಪಿಗೆ 5.25, ‘ಬಿ’ ಗುಂಪಿಗೆ 5.25, ‘ಸಿ’ ಗುಂಪಿಗೆ 4.5 ಸಿಕ್ಕಿದೆ. ಒಳಮೀಸಲಾತಿಯ ಲಾಭ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು’ ಎಂದು ಹೇಳಿದರು.

‘ಒಂದನೇ ಹಂತ ಪೂರ್ತಿ ಮಾಡಿದ್ದೇವೆ. ಹಲವು ಕೆಲಸಗಳು ಬಾಕಿ ಇವೆ. ನಮಗೆ ಸ್ವಾಭಿಮಾನದಿಂದ ಬದುಕುವುದಕ್ಕೆ ದೊಡ್ಡ ಅವಕಾಶ ಸಿಕ್ಕಿದೆ. ಹೀಗಾಗಿ, ಭಿನ್ನಾಭಿಪ್ರಾಯಗಳನ್ನು ಮರೆತು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲ 101 ಜಾತಿಗಳು ಒಟ್ಟಾಗಿ ಇರೋಣ. ಎಲ್ಲರ ಅಭಿವೃದ್ಧಿಗೆ ಒಟ್ಟಾಗಿ ದುಡಿಯೋಣ. ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಶೋಷಿತ ವರ್ಗದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಲಿದೆ’ ಎಂದು ಆಶಿಸಿದರು.

ಮಾದರ ಚನ್ನಯ್ಯ ಸ್ವಾಮೀಜಿ, ಸಿದ್ದರಾಜು ಸ್ವಾಮೀಜಿ, ಆನಂದ ಮುನಿ ಸ್ವಾಮೀಜಿ, ಷಡಕ್ಷರಿ ಮುನಿ ಸ್ವಾಮೀಜಿ, ರಾಜ್ಯ ಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಮಾಜಿ ಸಂಸದ ಚಂದ್ರಪ್ಪ, ನಿಗಮದ ಅಧ್ಯಕ್ಷರಾದ ಮಂಜುನಾಥ್, ಮಾಜಿ ಸಚಿವರಾದ ಕೋಟೆ ಶಿವಣ್ಣ, ನಿವೃತ್ತ ಐಎಎಸ್ ಅಧಿಕಾರಿ ಗೋನಾಳು ಭೀಮಪ್ಪ, ತೇಗನೂರು, ಮುಖಂಡರಾದ ಸುಬ್ಬಣ್ಣ, ಶಿವಪ್ಪ, ವಿಶ್ವನಾಥ್, ಶ್ರೀನಿವಾಸ್, ಮಹಾಸಭಾದ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಸಮುದಾಯದ ಎಲ್ಲರನ್ನೂ ಸದಸ್ಯರಾಗಿಸಲು ಸಲಹೆ
- ‘ಎಲ್ಲ ಪಕ್ಷದಲ್ಲಿರುವವರನ್ನೂ ಸದಸ್ಯರಾಗಿಸಿ’
- ‘ಕನಿಷ್ಠ 50 ಹೊಸ ಸದಸ್ಯರನ್ನು ಸಂಘಟನೆಗೆ ಸೇರಿಸಿ’

ಮಹಾಸಭಾದ ಉದ್ದೇಶ ಕೇವಲ ರಾಜಕಾರಣವಲ್ಲ. ಸಮುದಾಯದ ಬಡವರು, ಪೌರ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಹಕ್ಕು ಮತ್ತು ಉದ್ಯೋಗ ಅವಕಾಶ ಒದಗಿಸಿಕೊಡುವುದು ಆದ್ಯತೆ

ಕೆ.ಎಚ್. ಮುನಿಯಪ್ಪ, ಅಧ್ಯಕ್ಷ, ಕರ್ನಾಟಕ ಮಾದರ ಮಹಾಸಭಾ

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ಮಾದರ ಸಮುದಾಯದ 25 ಮಕ್ಕಳಿಗೆ ನಗದು ನೀಡಿ ಗೌರವಿಸಲಾಯಿತು. ಸಚಿವ ಕೆ.ಎಚ್. ಮುನಿಯಪ್ಪ, ಸಮುದಾಯದ ಸ್ವಾಮೀಜಿಗಳು, ಮುಖಂಡರು ಇದ್ದರು

ಸುದ್ದಿ 2 ನಿಮಿಷ

ಇಂದು 12 ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಕನ್ನಡ, ಬೆಳಗಾವಿ, ಮೈಸೂರು ಸೇರಿದಂತೆ ರಾಜ್ಯದ 12 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಮೇ 11ರಂದು ಗುಡುಗು ಸಹಿತ ಹಗುರದಿಂದ ಸಾಧಾರಣ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ ಹಾಗೂ ಹಾವೇರಿ, ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು, ಮತ್ತು ಚಾಮರಾಜನಗರ ಜಿಲ್ಲೆಗಳ ಒಂದು ಅಥವಾ ಎರಡು ಕಡೆ ಬಿರುಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಮುಂದಿನ 48 ಗಂಟೆಗಳ ಕಾಲ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಗರಿಷ್ಠ ಉಷ್ಣಾಂಶವು 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ.

15 ಅಡಿ ಉದ್ದದ ಹೆಬ್ಬಾವು ಪ್ರತ್ಯಕ್ಷ

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): ಅಂಬೇವಾಡಿಯಲ್ಲಿರುವ ವಿಟಿಯು ಕಾಲೇಜಿನ ಕಾಂಪೌಂಡ್ ಸಮೀಪದ ಗಟಾರದಲ್ಲಿ ಶನಿವಾರ ರಾತ್ರಿ 15 ಅಡಿ ಉದ್ದದ ಹೆಬ್ಬಾವು ಕಂಡುಬಂದಿದೆ.

ಗಟಾರದ ಬಳಿ ಹೆಬ್ಬಾವಿನ ಸಂಚಾರ ಗಮನಿಸಿದ ವಿದ್ಯಾರ್ಥಿಗಳು, ಶಿಕ್ಷಕರಿಗೆ ಮಾಹಿತಿ ನೀಡಿದ್ದಾರೆ. ಶಿಕ್ಷಕರು ಅರಣ್ಯ ಇಲಾಖೆಗೆ ಹಾಗೂ ಉರಗತಜ್ಞ ರಜಾಕ್ ಶಾ ಅವರಿಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಧಾವಿಸಿದ ಉರಗ ತಜ್ಞ ರಜಾಕ್ ಶಾ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಹೆಬ್ಬಾವು ಹಿಡಿದು ಅದನ್ನು ಸಮೀಪದ ಅರಣ್ಯ ಪ್ರದೇಶದಲ್ಲಿ ಬಿಟ್ಟರು.



ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನಿರ್ಮಿಸಲಾಗಿರುವ ನೂತನ ಧ್ಯಾನ ಮಂದಿರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಪ್ರಾರ್ಥನೆ ಸಲ್ಲಿಸಿದರು — ಪಿಟಿಐ ಚಿತ್ರ

‘ಆಧ್ಯಾತ್ಮಿಕ ಪರಂಪರೆ ಪೊರೆಯುತ್ತಿರುವ ಬೆಂಗಳೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಡೀ ಜಗತ್ತಿಗೆ ಮಾಹಿತಿ ತಂತ್ರಜ್ಞಾನ ಸೇವೆ ಒದಗಿಸುವುದಕ್ಕೆ ಮಾತ್ರವೇ ಬೆಂಗಳೂರು ಹೆಸರುವಾಸಿಯಲ್ಲ. ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನೂ ಈ ನಗರ ಪೊರೆಯುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಭಾನುವಾರ ಆಯೋಜಿಸಿದ್ದ 45ನೇ ವಾರ್ಷಿಕೋತ್ಸವದಲ್ಲಿ ನೂತನ ಧ್ಯಾನ ಮಂದಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಅಧ್ಯಾತ್ಮ ಅಂದರೆ ಕೇವಲ ಧ್ಯಾನವಲ್ಲ. ಸಮಾಜ ಸೇವೆಯನ್ನು ಒಳಗೊಂಡಾಗಷ್ಟೇ ಅದು ಪರಿಪೂರ್ಣವಾಗುತ್ತದೆ. ಭಾರತೀಯ ಪರಂಪರೆಯಲ್ಲಿ ಸೇವೆ ಎನ್ನುವುದು ಪರಮ ಧರ್ಮ. ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ’ ಎಂದರು.

‘ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಇಲ್ಲಿ ಸ್ಥಾಪಿಸಿದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು 180ಕ್ಕೂ ಹೆಚ್ಚು ದೇಶಗಳಲ್ಲಿ ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಪಸರಿಸುತ್ತಿದೆ. 45 ವರ್ಷಗಳ ಹಿಂದೆ ಬಿತ್ತಿದ ಬೀಜವು, ಇಂದು ವಿಶಾಲವಾದ ಹೆಮ್ಮರವಾಗಿ ಬೆಳೆದಿದೆ. ಈ ವೃಕ್ಷದ ಸಾವಿರಾರು ಶಾಖೆಗಳು ಜಗತ್ತಿನಾದ್ಯಂತ ಲಕ್ಷಾಂತರ ಜನರ ಬದುಕನ್ನು ಸುಂದರಗೊಳಿಸುತ್ತಿವೆ’ ಎಂದು ಹೇಳಿದರು.

ಶ್ರೀ ಶ್ರೀ ರವಿಶಂಕರ್ ಗುರೂಜಿ, ‘ದೇಶ–ವಿದೇಶಗಳಲ್ಲಿ ಶಾಂತಿ ನೆಲಸುವ ಸಲುವಾಗಿ ಪ್ರಧಾನಿ ಮೋದಿ ಅವರು ಮಹತ್ವದ ಹೆಜ್ಜೆಗಳನ್ನು ಇರಿಸಿದ್ದಾರೆ. ಅವರು ಭಾರತವನ್ನು ಹೊಸ ಎತ್ತರಕ್ಕೆ ಒಯ್ದಿದ್ದು, ಈ ಬಗ್ಗೆ ಭಾರತಾಂಬೆಗೆ ಮತ್ತು ಭಾರತೀಯರಿಗೆ ಹೆಮ್ಮೆಯಿದೆ’ ಎಂದರು.

‘ದೇಶ ಸ್ವಚ್ಛವಾಗಿದೆ’

‘ಮೋದಿ ಅವರು ಪ್ರಧಾನಿಯಾಗಿ ಅಧಿಕಾರಕ್ಕೆ ಬಂದ ತಕ್ಷಣ ‘ಸ್ವಚ್ಛ ಭಾರತ’ ಅಭಿಯಾನ ಆರಂಭಿಸಿದರು. ಪರಿಣಾಮವಾಗಿ ಭಾರತವು ಇಂದು ಸ್ವಚ್ಛವಾಗಿ, ಸುಂದರವಾಗಿ ಮತ್ತು ಸುರಕ್ಷಿತವಾಗಿ ಕಾಣುತ್ತಿದೆ. ದೇಶದೆಲ್ಲೆಡೆ ಆತ್ಮವಿಶ್ವಾಸ ತುಂಬಿದೆ. ಹಿಂದೆ ಇನ್ನೊಬ್ಬರನ್ನು ಕೇಳುವ ಸ್ಥಿತಿಯಲ್ಲಿ ಇದ್ದ ಭಾರತವನ್ನು ಮೋದಿ ಅವರು ಹತ್ತೇ ವರ್ಷಗಳಲ್ಲಿ, ನೀಡುವ ದೇಶವನ್ನಾಗಿ ಪರಿವರ್ತಿಸಿದ್ದಾರೆ’ ಎಂದು ಶ್ರೀ ಶ್ರೀ ರವಿಶಂಕರ್ ಗುರೂಜಿ ಹೇಳಿದರು.

ಪಂಚಮಸಾಲಿ ಪೀಠದ ಟ್ರಸ್ಟಿಗಳಿಗೆ ‘ಲೆಕ್ಕ ಕೊಡಿ ಚಳವಳಿ’ ಮುಖಂಡರ ಆಗ್ರಹ

ಕ್ಷಮೆ ಕೋರಿ, ಉಚ್ಚಾಟನೆ ಕೈಬಿಡಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರು ಪೀಠದ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಅವರು ಯಾವುದಾದರೂ ದೇವಸ್ಥಾನದಲ್ಲಿ ‘ತಪ್ಪಾಗಿದೆ’ ಎಂದು ಸಮುದಾಯದವರ ಕ್ಷಮೆ ಕೋರಿ, ವಚನಾನಂದ ಶ್ರೀಗಳ ಉಚ್ಚಾಟನೆ ನಿರ್ಧಾರ ವಾಪಸ್ ಪಡೆದರೆ ಲೆಕ್ಕ ಕೊಡಿ ಚಳವಳಿಯನ್ನು ನಿಲ್ಲಿಸುತ್ತೇವೆ’ ಎಂದು ಲೆಕ್ಕ ಕೊಡಿ ಚಳವಳಿಯ ಅಧ್ಯಕ್ಷ ಪರಮೇಶ್ವರಗೌಡ ತಿಳಿಸಿದರು.

‘ಟ್ರಸ್ಟ್‌ನವರು ಒಪ್ಪಿಸಿದ ಲೆಕ್ಕಕ್ಕೂ ವಾಸ್ತವದ ಲೆಕ್ಕಕ್ಕೂ ತುಂಬಾ ವ್ಯತ್ಯಾಸ ವಿದೆ. ಹಲವು ಭಕ್ತರು ನೀಡಿದ ದೇಣಿಗೆ ಬಗ್ಗೆ ಲೆಕ್ಕಪತ್ರದಲ್ಲಿ ಉಲ್ಲೇಖಿಸಿಲ್ಲ. ಬಿ.ಸಿ. ಉಮಾಪತಿ ಅವರನ್ನು ಹೊರತುಪಡಿಸಿ ಬೇರೆಲ್ಲಾ ಟ್ರಸ್ಟಿಗಳನ್ನು ವಜಾಗೊಳಿಸಿದರೆ ಲೆಕ್ಕ ಕೊಡಿ ಚಳವಳಿಗೆ ಅಂತ್ಯ ಹಾಡುತ್ತೇವೆ. ಇಲ್ಲವಾದರೆ ತಾಲ್ಲೂಕು ಮಟ್ಟದಲ್ಲಿ ಜಾಗೃತಿಯ ಹೋರಾಟ ರೂಪಿಸುತ್ತೇವೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

‘ಟ್ರಸ್ಟ್ ಹಾಗೂ ಪೀಠಕ್ಕೆ ಸಂಬಂಧಿಸಿದಂತೆ ಹಲವರ ಮೇಲೆ ಬಿ.ಸಿ.ಉಮಾಪತಿ ಅವರು ದೌರ್ಜನ್ಯ ಎಸಗಿದ್ದಾರೆ. ಅವಹೇಳನಕಾರಿಯಾಗಿ ನಡೆಸಿಕೊಂಡಿದ್ದಾರೆ. ಲೆಕ್ಕ ಕೊಡುವ ಮುನ್ನ ನಮ್ಮನ್ನು ಆಹ್ವಾನಿಸದೇ ಏಕಾಏಕಿ ಸುಳ್ಳು ಲೆಕ್ಕ ಒಪ್ಪಿಸಿದ್ದಾರೆ. ದಾನಿಗಳು ಹಾಗೂ ಸಮುದಾಯದವರು ಅವರ ಲೆಕ್ಕವನ್ನು ಒಪ್ಪಿಲ್ಲ’ ಎಂದರು.

‘ಕಾರ್ಮಿಕರು, ರೈತರು ನೀಡಿದ ದೇಣಿಗೆ ಉಲ್ಲೇಖವೇ ಇಲ್ಲ. ಗುರುಪೀಠಕ್ಕೆ ಬಿ.ಸಿ.ಉಮಾಪತಿ, ಬಸವರಾಜ ದಿಂಡೂರು, ಬಾವಿ ಬೆಟ್ಟಪ್ಪ ಕೊಡುಗೆ ಏನು? ಯಾವ ಪುರುಷಾರ್ಥಕ್ಕೆ ಲೆಕ್ಕ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಅರುಣಕುಮಾರ್ ಪೂಜಾರ್ ಮಾತನಾಡಿ, ‘ಬಿ.ಸಿ.ಉಮಾಪತಿ ಅವರು ಸಮುದಾಯದವರನ್ನು ಕುಡುಕರು ಎಂಬ ರೀತಿಯಲ್ಲಿ ಬಿಂಬಿಸಿದ್ದಾರೆ. ಕುಡುಕರು ಪದ ಬಳಸಿದ್ದಕ್ಕೆ ಸಮುದಾಯದವರ ಕ್ಷಮೆ ಕೇಳಲಿ. ಇಲ್ಲವಾದರೆ ಮದ್ಯದ ಬಾಟಲಿಗಳ ತಂದು ಟ್ರಸ್ಟಿಗಳ ತಲೆ ಮೇಲೆ ಸುರಿಯುತ್ತೇವೆ’ ಎಂದು ಎಚ್ಚರಿಸಿದರು.

ಭದ್ರತೆ; ಮುಖ್ಯಮಂತ್ರಿಗೆ ಸ್ವಾಮೀಜಿ ಪತ್ರ

‘ಟ್ರಸ್ಟಿಗಳು ಹಾಗೂ ನನ್ನ ನಡುವೆ ಗೊಂದಲ ಉಂಟಾಗಿದೆ. ಟ್ರಸ್ಟಿಗಳು ನನ್ನ ಬಗ್ಗೆ ಹಗುರವಾಗಿ ಮಾತನಾಡಿ ಪೀಠದಿಂದ ಹೊರದಬ್ಬುವುದಾಗಿ ಹೇಳಿದ್ದಾರೆ. ಪೀಠ ತ್ಯಜಿಸದಿದ್ದರೆ ನನ್ನ ಕೊಲೆಗೆ ಸಂಚು ರೂಪಿಸಿರುವುದು ಗಮನಕ್ಕೆ ಬಂದಿದೆ. ಈ ಕಾರಣಕ್ಕೆ ಪೊಲೀಸ್ ಭದ್ರತೆ ಕಲ್ಪಿಸಬೇಕು’ ಎಂದು ವಚನಾನಂದ ಸ್ವಾಮೀಜಿ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ.

‘ರಾಜ್ಯದಾದ್ಯಂತ ಆಹ್ವಾನಿತ ಕಾರ್ಯಕ್ರಮಗಳಿಗೆ ಹೋಗುತ್ತಿದ್ದೇನೆ. ನನ್ನ ಪ್ರಾಣಕ್ಕೆ ಹಾನಿ ಉಂಟು ಮಾಡುವ ಲಕ್ಷಣಗಳು ಕಾಣುತ್ತಿವೆ. ನನಗೆ ರಕ್ಷಣೆ ನೀಡುವಂತೆ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

ಕುಕ್ಕೆ: ವಾರ್ಷಿಕ ಆದಾಯ ₹167 ಕೋಟಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಮುಜರಾಯಿ ಇಲಾಖೆ ಆಧೀನದ ಕುಕ್ಕೆ ಸುಬ್ರಹ್ಮಣ್ಯ ದೇವಾಲಯವು 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ₹167.89 ಲಕ್ಷ ಆದಾಯ ಗಳಿಸಿದೆ. 2025 ಏ.1ರಿಂದ 2026 ಮಾರ್ಚ್ 31ರವರೆಗಿನ ಆದಾಯ ಇದಾಗಿದ್ದು, ಈ ಪೈಕಿ ₹ 85.20 ಕೋಟಿ ಖರ್ಚಾಗಿದೆ.

2024-2025ನೇ ಸಾಲಿನಲ್ಲಿ ₹155.95 ಕೋಟಿ ಆದಾಯ ಗಳಿಸಿದ್ದ ದೇವಸ್ಥಾನ, ಈ ಬಾರಿ ಸುಮಾರು ₹12 ಕೋಟಿ ಅಧಿಕ ಆದಾಯ ಗಳಿಸಿದೆ. ಈ ಮೂಲಕ ಸತತ 15ನೇ ವರ್ಷ ಆದಾಯ ಗಳಿಕೆಯಲ್ಲಿ ಮುಜರಾಯಿ ದೇವಸ್ಥಾನಗಳ ಪೈಕಿ ಮೊದಲ ಸ್ಥಾನದಲ್ಲಿದೆ. ದೇವಸ್ಥಾನಕ್ಕೆ ಮುಖ್ಯವಾಗಿ ಹರಕೆ ಸೇವೆ, ಕಾಣಿಕೆ ಡಬ್ಬಿ, ಬಡ್ಡಿ, ಛತ್ರಗಳ ಬಾಡಿಗೆ, ಕಟ್ಟಡಗಳ ಬಾಡಿಗೆ ಮತ್ತು ಕೃಷಿ ತೋಟದಿಂದ ಆದಾಯ ಬರುತ್ತದೆ.

ಸಿ.ಎಂ ಕುರ್ಚಿ ಅಲುಗಾಡುತ್ತಿದೆ: ಪ್ರಧಾನಿ

ಒಂದನೇ ಪುಟದಿಂದ...

ಅಲ್ಲದೇ ‘ಇನ್ನು ತಮಿಳುನಾಡಿನಲ್ಲಿ ಕಾಂಗ್ರೆಸ್ ಬೆಂಬಲದ ಮುಖ್ಯಮಂತ್ರಿಯ ಅಧಿಕಾರಕ್ಕೆ ಗ್ಯಾರಂಟಿ ಇಲ್ಲ. ಕಾಂಗ್ರೆಸ್ ಮುಖ್ಯಮಂತ್ರಿಗಳ ಕುರ್ಚಿ ಎಲ್ಲಿಯೂ ಭದ್ರವಾಗಿಲ್ಲ’ ಎಂದರು.

‘40 ವರ್ಷಗಳ ಹಿಂದೆ ಕಾಂಗ್ರೆಸ್‌ನ 400 ಸಂಸದರು ಇದ್ದರು. ಈಚೆಗಿನ ಮೂರು ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸದರ ಸಂಖ್ಯೆ 100ರ ಗಡಿಯನ್ನೂ ಮುಟ್ಟಿಲ್ಲ. 10 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ನಮ್ಮ ಮೂವರು ಶಾಸಕರಿದ್ದರು. ಈಗ 203 ಶಾಸಕರೊಂದಿಗೆ ಸರ್ಕಾರ ರಚಿಸಿದ್ದೇವೆ’ ಎಂದರು.

‘ಕೇರಳಂನಲ್ಲಿ ನಮ್ಮ ಸಂಖ್ಯೆಯನ್ನು ಒಬ್ಬ ಶಾಸಕನಿಂದ ಮೂವರು ಶಾಸಕರಿಗೆ ಬಲಪಡಿಸಿಕೊಂಡಿದ್ದೇವೆ. ಅಲ್ಲಿ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುವ ದಿನ ದೂರವಿಲ್ಲ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ನಮ್ಮ ಸರ್ಕಾರ ಇರದಿದ್ದರೂ ಲೋಕಸಭಾ ಸದಸ್ಯರ ಸಂಖ್ಯಾಬಲದಲ್ಲಿ ಬಿಜೆಪಿಯೇ ದೊಡ್ಡ ಪಕ್ಷ ಎಂಬುದನ್ನು ಮರೆಯಬಾರದು. 1857ರ ಮೇ 10ರಂದು ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗಿತ್ತು. ಅದೇ ದಿನ ನಾನು ಇಲ್ಲಿ ನಿಂತು ಮಾತನಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ಇಂದು ಕೇಸರಿ ಸೂರ್ಯ ಉದಯಿಸಿದ್ದಾನೆ’ ಎಂದು ಹೇಳಿದರು.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಬಿಜೆಪಿಯನ್ನು ಅಧಿಕಾರಕ್ಕೆ ತಂದಂತೆ, ಕರ್ನಾಟಕದಲ್ಲೂ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ ಎಂದು ಮೋದಿ ಅವರಿಗೆ ಭರವಸೆ ನೀಡುತ್ತೇವೆ. ಇಲ್ಲಿನ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುವುದು ಬಿಟ್ಟು ಒಳಜಗಳದಲ್ಲಿ ತೊಡಗಿಕೊಂಡಿದೆ. ಎಲ್ಲ ಸರಕು–ಸೇವೆಗಳ ಬೆಲೆ ಹೆಚ್ಚಿಸಿದೆ. ಚುನಾವಣೆಯಲ್ಲಿ ಜನರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂದು ಹಿಂದಿಯಲ್ಲಿ ಭಾಷಣ ಮಾಡಿದರು.

‘ನುಸುಳುಕೋರರ ಓಡಿಸುತ್ತೇವೆ’: ಕಾರ್ಯಕ್ರಮದ ನಂತರ ಸುದ್ದಿಗಾರರ ಜತೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಪಶ್ಚಿಮ ಬಂಗಾಳವು ಬಾಂಗ್ಲಾ ದೇಶದ ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿತ್ತು. ಆ ಹೆಬ್ಬಾಗಿಲನ್ನು ಒಡೆದು ದೇಶವನ್ನು ರಕ್ಷಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ. ಬೆಂಗಳೂರಿನಲ್ಲಿಯೂ ಬಾಂಗ್ಲಾದ ಅಕ್ರಮ ನುಸುಳುಕೋರರ ಶಿಬಿರಗಳಿವೆ. ಸಿದ್ದರಾಮಯ್ಯರೂ ಅವರನ್ನು ಓಡಿಸುವುದಿಲ್ಲ, ಪರಮೇಶ್ವರರೂ ಅವರನ್ನು ಹೊರಗಟ್ಟುವುದಿಲ್ಲ. ನಾವೇ ಅವರನ್ನು ಓಡಿಸಬೇಕಾಗಿದೆ’ ಎಂದು ಹೇಳಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಮೋದಿ ಅವರ ಆಡಳಿತದಲ್ಲಿ ಹಿಂದುತ್ವಕ್ಕೆ ಹೆಚ್ಚಿನ ಬೆಲೆ ಬಂದಿದೆ. ಅವರ ಪರಿಶ್ರಮಕ್ಕೆ ನಾವೆಲ್ಲ ಋಣಿಯಾಗಿರಬೇಕು. ದೇಶವನ್ನು ಕೇಸರಿಮಯವಾಗಿಸಲು ಅವರು ಶ್ರಮಿಸುತ್ತಿದ್ದಾರೆ’ ಎಂದರು.

ಆತಂಕ ಸೃಷ್ಟಿಸಿದ್ದ ಜಿಲೆಟಿನ್ ಕಡ್ಡಿ

ಒಂದನೇ ಪುಟದಿಂದ...

ಇದಕ್ಕೂ ಮೊದಲು ಎಚ್‌ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್‌ನಲ್ಲಿ ಸ್ಫೋಟ ನಡೆಸುವುದಾಗಿ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದ ಕೋರಮಂಗಲದ ಲೋಹಿತ್ ಬೆದರಿಕೆ ಹಾಕಿದ್ದರು. ಆತನನ್ನು ವಶಕ್ಕೆ ಪಡೆದಿರುವ ಸಿಸಿಬಿ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ. ಕಗ್ಗಲೀಪುರದ ಬಳಿ ಸಿಕ್ಕಿರುವ ಜಿಲೆಟಿನ್‌ಗೂ ಲೋಹಿತ್‌ಗೂ ಸಂಬಂಧವಿದೆಯೇ ಎಂಬುದರ ಕುರಿತೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಧಾನಿ ಹೊರಡುವುದು ವಿಳಂಬ: ಘಟನೆಯಿಂದ ಆತಂಕ ಎದುರಾಗಿದ್ದರಿಂದ ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮ ಮುಕ್ತಾಯವಾಗಿದ್ದರೂ ಎಚ್‌ಎಎಲ್ ವಿಮಾನ ನಿಲ್ದಾಣದತ್ತ ನರೇಂದ್ರ ಮೋದಿ ಹೊರಡುವುದು ವಿಳಂಬವಾಯಿತು. ಪೊಲೀಸರಿಂದ ಪ್ರಧಾನಿ ಭದ್ರತಾ ಪಡೆ ಅಧಿಕಾರಿಗಳು ಮಾಹಿತಿ ಪಡೆದ ಮೇಲೆ ಹೊರಡಲು ಅವಕಾಶ ಕಲ್ಪಿಸಲಾಯಿತು.

ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ: ಶಿವಕುಮಾರ್

ಒಂದನೇ ಪುಟದಿಂದ...

ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ವಿಷಯ ಮತ್ತೆ ಮುನ್ನೆಲೆಗೆ ಬಂದಿದ್ದು, ದಿನಕ್ಕೊಂದು ಹೇಳಿಕೆಯನ್ನು ಆ ಪಕ್ಷದ ನಾಯಕರೇ ಹೊರ ಹಾಕುತ್ತಿದ್ದಾರೆ.

ಈಚೆಗೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಶಿವಕುಮಾರ್, ‘ಕೂತವನದ್ದೇ ಕುರ್ಚಿ, ಒದ್ದವನದ್ದೇ ಚೆಂಡು. ಕೂತವನ್ಯಾರೂ ಕುರ್ಚಿ ಬಿಡುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಉದ್ದೇಶಿಸಿ ಹೇಳಿದ್ದರು. ಭಾನುವಾರ ಅವರು ನೀಡಿದ ಹೇಳಿಕೆ ಹೊಸ ವ್ಯಾಖ್ಯಾನಕ್ಕೆ ಕಾರಣವಾಗಿದೆ.

‘ಬೆನ್ನಿಗೆ ಚೂರಿ ಹಾಕುವ ಕಾಂಗ್ರೆಸ್’

ಒಂದನೇ ಪುಟದಿಂದ...

‘ಕಾಂಗ್ರೆಸ್ ಕೇವಲ ಅದರ ಮಿತ್ರಪಕ್ಷಗಳಿಗೆ ಚೂರಿಹಾಕಿಲ್ಲ. ದೇಶದ ಮಹಿಳೆಯರಿಗೂ ದ್ರೋಹ ಬಗೆದಿದೆ. ಮಹಿಳಾ ಮೀಸಲಾತಿ ಮಸೂದೆ ತರುವುದು, ಅದರ ವಿರುದ್ಧ ತನ್ನ ಮಿತ್ರಪಕ್ಷಗಳಿಂದಲೇ ಮತ ಹಾಕಿಸುವುದು ಮಾಡುತ್ತಿತ್ತು. ನಾವು ಕಷ್ಟಪಟ್ಟು ಕಾನೂನು ತಂದೆವು. ಕಾಂಗ್ರೆಸ್ ಅದನ್ನು ಸೋಲಿಸಿತು. ಇಂತಹ ವಿಶ್ವಾಸದ್ರೋಹಿ ಕಾಂಗ್ರೆಸ್ ಅನ್ನು ಸೋಲಿಸಬೇಕು. ದೇಶದ ಮಹಿಳೆಯರು ಕಾಂಗ್ರೆಸ್ ಅನ್ನು ಕ್ಷಮಿಸುವುದಿಲ್ಲ’ ಎಂದು ಪ್ರಧಾನಿ ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ವ್ಯಾಪಾರ

Business to Business

Business

ಗೋಲ್ಡ್ ಲೋನ್ 10 ರಿಂದ 20 ಗ್ರಾಂ ಬಂಗಾರವನ್ನು ಖರೀದಿಸಲು ಸಾಲ ಕೊಡಲಾಗುವುದು. Ph : 9036316959 , ಬೆಂಗಳೂರು

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Part-Time Jobs

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದವರಿಗೂ. 20,000 / 25,000 ಕೊರಿಯರ್, 7090177446

ಪ್ರವಾಸ

Travel

24.5.2026 ನೈಮಿಷರಾಣ್ಯಾ, ಅಯೋಧ್ಯೆ, ಪ್ರಯಾಗ್‌ರಾಜ್, ಚಿತ್ರಕೂಟ, ಕಾಶಿ, ಗಯಾ 9.6.2026 ಯಮನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ 30.6.2026 ಅಮರನಾಥ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿ ವತಿಯಿಂದ 01.06.2026 ಚಾರ್‌ಧಾಮ್ ಪ್ರವಾಸ. 19.06.2026. ನೇಪಾಳ, ಮುಕ್ತಿನಾಥ್, ಪೋಕ್ರಾ, ಮನೋಕಾಮನ. 05.07.2026 ಅಮರನಾಥ್ ಹಿಮಲಿಂಗ ದರ್ಶನ. ಸಂಪರ್ಕಿಸಿ: 84310888138, 8317446683, 9686708171.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಲಕ್ಕುಂಡಿ: ಪ್ರಾಚ್ಯ ಅವಶೇಷ ಪತ್ತೆ

ಲಕ್ಕುಂಡಿಯ ಜಮೀನಿನಲ್ಲಿ ಪತ್ತೆಯಾದ ಪ್ರಾಚ್ಯ ಅವಶೇಷ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ನಡೆದಿರುವ ಪ್ರಾಚ್ಯ ಅವಶೇಷ ಅನ್ವೇಷಣೆ ಸಪ್ತಾಹದಲ್ಲಿ ಭಾನುವಾರ 200ಕ್ಕೂ ಹೆಚ್ಚು ಪ್ರಾಚ್ಯ ಅವಶೇಷಗಳು ಸಿಕ್ಕಿವೆ.

‘ಲಕ್ಕುಂಡಿ ಗ್ರಾಮದ ಬಸವರಾಜ ಮುಸುಕಿನಬಾವಿ ಅವರ ಹೊಲದ ಬದುವಿನಲ್ಲಿ ವಿವಿಧ ಬಗೆಯ 200ಕ್ಕೂ ಅಧಿಕ ಪ್ರಾಚ್ಯ ಅವಶೇಷಗಳು ದೊರೆತಿದ್ದು, ಬಯಲು ವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಅಧ್ಯಕ್ಷ ಸಿದ್ದು ಪಾಟೀಲ ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆ: ಕೆಲವೆಡೆ ಮಳೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಕುಮಟಾ, ಅಂಕೋಲಾ, ಜೊಯಿಡಾ ಸೇರಿದಂತೆ ಕರಾವಳಿ ಭಾಗದ ಕೆಲವೆಡೆ ಭಾನುವಾರ ಕೆಲ ಸಮಯ ಗುಡುಗು ಸಹಿತ ಮಳೆ ಸುರಿಯಿತು.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ನಿರ್ದೇಶಕರ ಕಾರ್ಯಾಲಯ, ಕಲ್ಯಾಣ–ಸುರಕ್ಷಾ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029, ದೂರವಾಣಿ:080–26531200
ಇ–ಮೇಲ್:directorfbish@gmail.com

ಸಂಖ್ಯೆ:ಇಎಸ್‌ಟಿ–3/ಸಿಡಿಎಸ್/ಸಿಆರ್–127/2025–26 ದಿನಾಂಕ:07.05.2026

ಅಂತಿಮ ಎಚ್ಚರಿಕೆ ನೋಟೀಸ್

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಬೆಂಗಳೂರಿನ ಪ್ರಧಾನ ಕಛೇರಿಯಲ್ಲಿ ಗ್ರೂಪ್ ‘ಡಿ’ ನೌಕರರಾಗಿ ನೇಮಕಗೊಂಡಿರುವ ಶ್ರೀ ಗಣೇಶ್ ಎಸ್ ಲಕ್ಕಣ್ಣವರ್ ಆದ ನೀವು ದಿನಾಂಕ:12.05.2025 ರಿಂದ ಯಾವುದೇ ಮಾಹಿತಿ ನೀಡದೇ ಕಛೇರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಮತ್ತು ಗೈರುಹಾಜರಿಗೆ ವಿವರಣೆ ಸಲ್ಲಿಸಲು ನೋಂದಾಯಿತ ಅಂಚೆ ಮೂಲಕ ನೀಡಿದ ನೋಟೀಸ್ ವಿಳಾಸದಲ್ಲಿ ಇರುವುದಿಲ್ಲವೆಂದು ಹಿಂದಿರುಗಿಸಲ್ಪಟ್ಟಿರುತ್ತದೆ ಹಾಗೂ ದೂರವಾಣಿ ಮುಖಾಂತರ ನೀಡಿದ ಸೂಚನೆಗಳಿಗೂ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದ್ದರಿಂದ ಈ ಪತ್ರಿಕಾ ಪ್ರಕಟಣೆಯು ಅಂತಿಮ ನೋಟೀಸ್ ಆಗಿದ್ದು, ತದನಂತರವೂ ಕರ್ತವ್ಯಕ್ಕೆ ಹಾಜರಾಗಲು ನೀವು ವಿಫಲರಾದಲ್ಲಿ ಅನಧಿಕೃತ ಗೈರು ಹಾಜರಿಗೆ ಸಂಬಂಧಿಸಿದಂತೆ ನಿಯಮಾನುಸಾರ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–
ನಿರ್ದೇಶಕರು.

ವಾಸಾಸಂಇ/ವಾಪ್ರ/ಜಿಎ/578/2026–27

‘ಕೊಡುಗೈ ದಾನಿ’ಯಾಗಿ ಗುರುತಿಸಿಕೊಂಡಿದ್ದ ಸಚಿವ ಡಿ.ಸುಧಾಕರ್

ಜಾತಿ, ಮತ ಮೀರಿ 4 ಗೆಲುವು ಕಂಡಿದ್ದರು

• ಎಂ.ಎನ್.ಯೋಗೇಶ್

ನುಡಿ ನಮನ

ಚಿತ್ರದುರ್ಗ: ಜಿಲ್ಲೆಯ ಹಿರಿಯೂರು ಹಾಗೂ ಚಳ್ಳಕೆರೆ ಕ್ಷೇತ್ರಗಳಲ್ಲಿ ಜೈನ ಸಮುದಾಯದ ಮತಗಳು 500 ದಾಟುವುದಿಲ್ಲ. ಆದರೂ ಜಾತಿ, ಮತ ಮೀರಿ ಜನರ ಪ್ರೀತಿ ಸಂಪಾದಿಸಿದ್ದ ಡಿ.ಸುಧಾಕರ್, ಎರಡೂ ಕ್ಷೇತ್ರಗಳಿಂದ 4 ಬಾರಿ ಶಾಸಕರಾಗಿದ್ದರು. ಕೊಡುಗೈ ದಾನಿ, ಬಡವರ ಬಂಧು ಎಂದೇ ಹೆಸರಾಗಿದ್ದರು.

ಶ್ರೀಮಂತ ಜೈನ ವ್ಯಾಪಾರಿ ಮನೆತನದಲ್ಲಿ ಜನಿಸಿದ್ದರೂ ಎಲ್ಲರೊಟ್ಟಿಗೆ ಸಾಮಾನ್ಯರಂತಿದ್ದರು. ಚಳ್ಳಕೆರೆಯಿಂದ 1 ಬಾರಿ, ಹಿರಿಯೂರು ಕ್ಷೇತ್ರದಿಂದ 3 ಬಾರಿ ಗೆದ್ದು, 2 ಬಾರಿ ಸಚಿವರಾಗಿದ್ದರು. ಅಲ್ಲದೆ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ (ಡಿಸಿಸಿ) ಚುನಾವಣೆಯಲ್ಲಿ 5 ಬಾರಿ (18 ವರ್ಷ) ಗೆಲುವು ದಾಖಲಿಸಿದ್ದರು.

ಚಳ್ಳಕೆರೆ ಕ್ಷೇತ್ರದಿಂದ 2 ಬಾರಿ (1978, 1989) ಶಾಸಕರಾಗಿದ್ದ ಎನ್. ಜಯಣ್ಣ ಅವರ ಉತ್ತರಾಧಿಕಾರಿಯಾಗಿ ರಾಜಕೀಯಕ್ಕೆ ಧುಮುಕಿದ್ದರು. ಜಯಣ್ಣ ಅವರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅಣ್ಣನ ಮಗ ಸುಧಾಕರ್‌ಗೆ ಹಾದಿ ಮಾಡಿಕೊಟ್ಟಿದ್ದರು. 2004ರಲ್ಲಿ ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೊದಲ ಯತ್ನದಲ್ಲೇ ಗೆದ್ದಿದ್ದರು.

ಚಳ್ಳಕೆರೆ ಕ್ಷೇತ್ರವು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಕಾರಣ, ಸಾಮಾನ್ಯ ಕ್ಷೇತ್ರವಾಗಿ ಬದಲಾದ ಹಿರಿಯೂರಿಗೆ ವಲಸೆ ಬಂದರು. 2008ರಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದರು.

ಬಿ.ಎಸ್.ಯಡಿಯೂರಪ್ಪ ಸರ್ಕಾರಕ್ಕೆ ಬಹುಮತ ಸಿಗದಿದ್ದಾಗ ಆಸರೆಯಾದ ಪಕ್ಷೇತರರಲ್ಲಿ ಡಿ.ಸುಧಾಕರ್ ಒಬ್ಬರು. ಬಿಜೆಪಿ ಸರ್ಕಾರದಲ್ಲಿ ಸಮಾಜ ಕಲ್ಯಾಣ ಹಾಗೂ ಕ್ರೀಡಾ ಸಚಿವರಾಗಿದ್ದರು. ನಂತರ ಶಾಸಕ ಸ್ಥಾನದಿಂದ ಅನರ್ಹಗೊಂಡು ಸುಪ್ರೀಂ ಕೋರ್ಟ್‌ನಿಂದ ಸ್ಥಾನ ಮರಳಿ ಪಡೆದುಕೊಂಡಿದ್ದು ಇತಿಹಾಸ.

2013ರ ಚುನಾವಣೆಯಲ್ಲಿ ಸುಧಾಕರ್ ಅವರು ಕಾಂಗ್ರೆಸ್ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಯಾದವ ಸಮುದಾಯದ ಎ.ಕೃಷ್ಣಪ್ಪ ಅವರಿಗೆ ಜೆಡಿಎಸ್ ಟಿಕೆಟ್ ನೀಡಿತ್ತು. ಹಿರಿಯೂರಿನಲ್ಲಿ ಒಕ್ಕಲಿಗ (ಕುಂಚಿಟಿಗ ಒಕ್ಕಲಿಗ) ಮತಗಳು ನಿರ್ಣಾಯಕವಾಗಿದ್ದು, ಸುಧಾಕರ್ ಹಾಗೂ ಕೃಷ್ಣಪ್ಪ ನಡುವೆ ತೀವ್ರ ಹೋರಾಟ ನಡೆದಿತ್ತು. ಅಂತಿಮವಾಗಿ ಸುಧಾಕರ್‌ಗೆ ವಿಜಯಮಾಲೆ ಒಲಿದಿತ್ತು.

2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಸುಧಾಕರ್ ಸೋತಿದ್ದರು. 2023ರ ಚುನಾವಣೆಯಲ್ಲಿ ಪೂರ್ಣಿಮಾ ವಿರುದ್ಧ ಗೆದ್ದು ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದರು.

ಭಾರತ್ ಜೋಡೊ ಯಾತ್ರೆ ವೇಳೆ ರಾಹುಲ್ ಗಾಂಧಿ ಅವರೊಂದಿಗೆ ಡಿ.ಸುಧಾಕರ್

ಮಾದರಿ ಡಿಸಿಸಿ ಬ್ಯಾಂಕ್...

ಸುಧಾಕರ್ ಅವರು 2004, 2007, 2014, 2019, 2024ರಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರ ಅವಧಿಯಲ್ಲಿ ರಾಷ್ಟ್ರದ 2ನೇ ಅತ್ಯುತ್ತಮ ಸಹಕಾರ ಬ್ಯಾಂಕ್ ಎಂಬ ಗೌರವಕ್ಕೆ ಪಾತ್ರವಾಗಿ ರಾಷ್ಟ್ರಪ್ರಶಸ್ತಿ (2022) ಮುಡಿಗೇರಿಸಿಕೊಂಡಿತ್ತು. ಬ್ಯಾಂಕ್ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ₹3 ಲಕ್ಷದವರೆಗೆ ಸಾಲ ವಿತರಣೆ, ಮಹಿಳಾ ಸ್ವ–ಸಹಾಯ ಸಂಘ, ಗುಂಪುಗಳಿಗೆ ಸೌಲಭ್ಯಗಳನ್ನು ವಿತರಿಸಲು ಕ್ರಮವಹಿಸಿದ್ದರು.

‘ಜಾನುವಾರುಗಳ ಜೀವ ಉಳಿಸಿದ್ದರು’

‘2017ರಲ್ಲಿ ಬರದಿಂದಾಗಿ ಜಾನುವಾರುಗಳಿಗೆ ಮೇವಿನ ಕೊರತೆ ಇತ್ತು. ಆಗ ಕೊಳವೆಬಾವಿ, ಟ್ಯಾಂಕರ್ ನೀರು ಬಳಸಿ 500 ಎಕರೆಯಲ್ಲಿ ಮೇವು ಬೆಳೆಸಲು ಕ್ರಮವಹಿಸಿ ನೆರವಾಗಿದ್ದರು. ಬತ್ತಿದ ಕೆರೆಗಳಲ್ಲೂ ಮೇವು ಬೆಳೆಸಿ ಹಂಚಿಸಿದ್ದರು’ ಎಂದು ರೈತ ಮುಖಂಡ ಎಸ್.ಮಲ್ಲಿಕಾರ್ಜುನ್ ಸ್ಮರಿಸಿದರು.

ನೀರಾವರಿ ಯೋಜನೆಗೆ ಸುಧಾಕರ್ ಹೆಸರು: ಡಿಕೆಶಿ

ಸಚಿವ ಡಿ. ಸುಧಾಕರ್ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ ಉಂಟಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಂಗಳೂರು: ‘ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಸುಧಾಕರ್ ಹೋರಾಟ ಮಾಡಿದ್ದರು. ಹೀಗಾಗಿ, ಈ ನೀರಾವರಿ ಯೋಜನೆಗೆ ಅವರ ಹೆಸರಿಡುವ ಬಗ್ಗೆ ಯೋಚಿಸಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಭದ್ರಾ ಯೋಜನೆ ಪೂರ್ಣಗೊಳಿಸಿ ಅದಕ್ಕೆ ಚಾಲನೆ ನೀಡಬೇಕು ಎಂದು ಸುಧಾಕರ್ ಬಹಳ ಆಸೆ ಇಟ್ಟುಕೊಂಡಿದ್ದರು. ಈ ಯೋಜನೆಗಾಗಿ ಸಾಕಷ್ಟು ಹೋರಾಟ ಮಾಡಿದ್ದರು. ಅವರ ಅಧ್ಯಕ್ಷತೆಯಲ್ಲಿ ಈ ಯೋಜನೆ ಉದ್ಘಾಟಿಸಲು ಚಿಂತನೆ ನಡೆಸಿದ್ದೆವು’ ಎಂದರು.

‘ಸುಧಾಕರ್ ಅವರ ಪಕ್ಷ ನಿಷ್ಠೆ, ತ್ಯಾಗ ಸ್ಮರಿಸುತ್ತೇವೆ. ಪಕ್ಷ ಹಮ್ಮಿಕೊಂಡಿದ್ದ ಭಾರತ ಜೋಡೊ ಯಾತ್ರೆಯ ಐದು ದಿನದ ಜವಾಬ್ದಾರಿಯನ್ನು ಸುಧಾಕರ್ ವಹಿಸಿದ್ದರು. ಅವರ ಅಗಲಿಕೆ ವಿಚಾರವನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತರಲಾಗಿದೆ. ಸುಧಾಕರ್ ಅವರ ಕುಟುಂಬದ ಸದಸ್ಯರ ಜೊತೆ ರಾಹುಲ್ ಮಾತನಾಡಲಿದ್ದಾರೆ’ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು, ಗಣ್ಯರು ಸುಧಾಕರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ಅಂತಿಮ ನಮನ ಸಲ್ಲಿಸಿ, ಮೃತರ ಕುಟುಂಬ ಸದಸ್ಯರನ್ನು ಸಂತೈಸಿದರು.

ವಿಪ್ರೊ ಕನ್ಯಾಜ್ಞಾನ

ವಿದ್ಯಾರ್ಥಿ ವೇತನ ಕೈಪಿಡಿ

ವಿಪ್ರೊ ಇಂಡಿಯಾ ಸಂಸ್ಥೆಯ ಸಿಎಸ್‌ಆರ್ ಉಪಕ್ರಮ ಇದಾಗಿದೆ. **ಅರ್ಹತೆ:** ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳ ಯುವತಿಯರಿಗೆ ಅವಕಾಶ. ಸ್ಟೆಮ್ ವಿಭಾಗಗಳಲ್ಲಿ (ಬಿಟೆಕ್/ಬಿಇ, ಬಿಎಸ್ಸಿ, ಬಿಸಿಎ ಇತ್ಯಾದಿ) ಪ್ರಥಮ ಅಥವಾ ದ್ವಿತೀಯ ವರ್ಷದ ಪದವಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಅವರು ಓದುತ್ತಿರುವ ಕಾಲೇಜು ಎನ್‌ಐಆರ್‌ಎಫ್ ಶ್ರೇಣಿಯನ್ನು ಪಡೆದಿರಬೇಕು. ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಆದ್ಯತೆ. ಪೋಷಕರ ಆದಾಯದ ವಾರ್ಷಿಕ ಮಿತಿ ₹ 5 ಲಕ್ಷ. 10 ಮತ್ತು 12ನೇ ತರಗತಿ ಹಾಗೂ ತಮ್ಮ ಇತ್ತೀಚಿನ ಶೈಕ್ಷಣಿಕ ವರ್ಷ ಅಥವಾ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 70ರಷ್ಟು ಅಂಕಗಳನ್ನು ಪಡೆದಿರಬೇಕು.
ಆರ್ಥಿಕ ನೆರವು: ಗರಿಷ್ಠ ಮೂರು ವರ್ಷಗಳ ಅವಧಿಗೆ ವರ್ಷಕ್ಕೆ ₹ 60,000 ನಿಶ್ಚಿತ ವಿದ್ಯಾರ್ಥಿವೇತನ.
ಅರ್ಜಿ ಸಲ್ಲಿಸಲು ಕೊನೇ ದಿನ: 11-05-2026
ಅರ್ಜಿ ಸಲ್ಲಿಕೆ: ಆನ್‌ಲೈನ್. **ಮಾಹಿತಿಗೆ:** Short Url: www.b4s.in/praja/VKGSP1

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷಾ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

4) ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು?
ಉತ್ತರ:– ಭಾರತದ ಸಾಂಬಾರು ಪದಾರ್ಥಗಳನ್ನು ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡುವ ಮೂಲಕ ಯುರೋಪಿಯನ್ನರೊಂದಿಗೆ (ಪ್ರಾರಂಭದಲ್ಲಿ) ವ್ಯಾಪಾರ ನಡೆಯುತ್ತಿತ್ತು. ವಿಶೇಷವಾಗಿ ಮೆಣಸು, ಶುಂಠಿ ಮೊದಲಾದ ವಸ್ತುಗಳಿಗೆ ಯುರೋಪಿನಲ್ಲಿ ಬಹಳ ಬೇಡಿಕೆಯಿತ್ತು.
5) ಮಧ್ಯಕಾಲೀನ ಇತಿಹಾಸದ ಸಮಯದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಹೇಗೆ ನಡೆಯುತ್ತಿದ್ದವು?
ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು
6) ಯೂರೋಪಿಯನ್ ರಾಷ್ಟ್ರಗಳಲ್ಲಿ ಭಾರತದ ಯಾವೆಲ್ಲಾ ವಸ್ತುಗಳಿಗೆ ಬಹಳ ಬೇಡಿಕೆಯಿತ್ತು?
ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನಿ, ಏಲಕ್ಕಿ, ಶುಂಠಿ ಮೊದಲಾದ ವಸ್ತುಗಳಿಗೆ ಯೂರೋಪಿನಲ್ಲಿ ಬಹಳ ಬೇಡಿಕೆಯಿತ್ತು.
7) ಮಧ್ಯಕಾಲೀನ ಇತಿಹಾಸದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರೆ, ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಯಾವ ದೇಶದ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು?
ಉತ್ತರ:– ಇಟಲಿ
8) ಭಾರತದೊಡನೆ ವ್ಯಾಪಾರವಹಿವಾಟು ನಡೆಸಲು ಯೂರೋಪಿಯನ್ನರಿಗೆ ಹೊಸ ಜಲಮಾರ್ಗವನ್ನು ಯಾವ ಕಾರಣಕ್ಕಾಗಿ ಕಂಡುಹಿಡಿಯಬೇಕಾಯಿತು? ಹಾಗೂ ಯಾವುದು ಇವರ ನೆರವಿಗೆ ಬಂದವು?
ಉತ್ತರ:– ಭಾರತ (ಏಷ್ಯಾ) ಮತ್ತು ಯುರೋಪ್ ನಡುವಿನ ವ್ಯಾಪಾರ ಮತ್ತು ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಇದರಿಂದಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿರಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು.
ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು
9) ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ. ಪೋರ್ಚುಗೀಸ್ ನಾವಿಕ ಬಂದುದರಿಂದ ಆದ ಪರಿವರ್ತನೆ ಏನು?
ಉತ್ತರ:– ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ ಪೋರ್ಚುಗೀಸ್ ನಾವಿಕ ಬಂದುದರಿಂದ ಅವರಿಂದ ಪ್ರೇರಣೆಗೊಂಡ ಯುರೋಪಿನ ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು. ಈ ಬೆಳವಣಿಗೆಯು ಕಾಲಾನುಕ್ರಮದಲ್ಲಿ ಭಾರತವು ವಸಾಹತು ರಾಷ್ಟ್ರವಾಗಿ ಪರಿವರ್ತನೆಗೊಳ್ಳಬೇಕಾಯಿತು.
ಭಾರತವನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯಲ್ಲಿಯೂ ಸಹಾ ನಿರ್ಣಾಯಕ ಬದಲಾವಣೆಗಳಾದವು. ಈ ಮೊದಲಾದ ಪರಿವರ್ತನೆಯನ್ನು ಇತಿಹಾಸದಲ್ಲಿ ನೋಡುವಂತಾಯಿತು.
10) ಕೋಲ್ಕತ್ತಾ ನಗರವಾಗಿ ಬೆಳೆಯಲು ಕಾರಣವಾದುದ್ದು ಯಾವುದು?
ಉತ್ತರ:– ಬ್ರಿಟಿಷರು 1690ರ ದಶಕದಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ಗೋವಿಂದಪುರ ಎಂಬ ಮೂರು ಹಳ್ಳಿಗಳನ್ನು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು.
11) ಇತರೇ ಯುರೋಪಿಯನ್ ಈಸ್ಟ್ ಇಂಡಿಯಾ ಕಂಪನಿಗೂ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಗೂ ಇರುವ ವ್ಯತ್ಯಾಸವೇನು?
ಉತ್ತರ:– ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಸರ್ಕಾರಿ ಒಡೆತನದ ಕಂಪನಿಯಾಗಿ ಆರಂಭವಾಯಿತು. ಆದರೆ ಉಳಿದವು ಖಾಸಗಿ ಕಂಪನಿಗಳಾಗಿದ್ದವು.
12) ಪಾಂಡಿಚೇರಿ ಬಗ್ಗೆ ಬರೆಯಿರಿ.
ಉತ್ತರ:– ಫ್ರೆಂಚರು 1674ರಲ್ಲಿ ವಾಲಿಕೊಂಡಪುರಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಪಡೆದರು. ಕ್ರಮೇಣ ಇದನ್ನೆ ದೊಡ್ಡ ವ್ಯಾಪಾರ ಕೇಂದ್ರವಾಗಿ ಮಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.
ಅದೇ ಪುದುಚೇರಿ ಅಥವಾ ಪಾಂಡಿಚೇರಿ. ಇದು ಫ್ರೆಂಚರು ಭಾರತ ತೊರೆದು ಹೋಗುವವರೆಗೆ ಅವರ ರಾಜಧಾನಿಯಾಗಿತ್ತು.
13) ಯಾವ ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು?
ಉತ್ತರ:– 1746
14) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?
ಉತ್ತರ:– 'ಅಸಫ್ ಜಾ'
15) ಯಾವ ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?
ಉತ್ತರ:–ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು
16) ಮೊದಲ ಕಾರ್ನಾಟಿಕ್ ಯುದ್ಧದ ಬಗ್ಗೆ ಬರೆಯಿರಿ
ಉತ್ತರ:– ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು. ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು. ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು. ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣ ಪಡೆದು ಮದ್ರಾಸನ್ನು ಬಿಟ್ಟು ಕೊಟ್ಟು ಮಾರಿಷಸ್‌ಗೆ ಹೊರಟು ಹೋದನು. ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು. ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು

ಪಿಯುಸಿ ದಿಕ್ಸೂಚಿ

PHYSICS

Chapter – 1

ELECTRIC CHARGES AND FIELDS

Multiple Choice Quetion

10. Which of the following graphs represent the variation of electric field intensity E(*r*) due to a charged solid sphere of radius R with distance *r* from its centre.



Ans;-d

11. The quantisation of charge indicates that
a) Charge, which is a fraction of charge on an electron, is not possible
b) A charge cannot be destroyed
C) Charge exists on particles
d) There exists a minimum permissible charge on a particle

Ans: (a) Charge, which is a fraction of charge on an electron, is not possible
Expln: The quantisation of charge means that when we say something has some charge, we mean by that that how many times the charge of electrons it has. Because the whole charge is associated with an electron.

FILL IN THE BLANKS
(vacuum, outward, weak, zero, strong, charge)
1. Gold leaf electroscope is used to detect ________ present on a body.
Ans:- charge
2. The electrostatic force between two charges is maximum in________.
Ans:- vacuum.
3. In case of a positive source charge, the electric field will be directed radially ____________ from the charge
Ans:- outward
4. The electric field lines crowd where the electric field is ____________. .
Ans:- strong
5. The total electric flux through a closed surface enclosing electric dipole is____________
Ans:- Zero

Answer the following
20) Write a note on Charging by friction.
Ans:- Charging by friction is a method of charging a body. When two suitable bodies are rubbed against each other, at many points of contact, electrons are transferred from one body to another. The body which gains electrons become negatively charged and the body which loses electrons become positively charged.
21) Write a note on Charging by conduction.
Ans:- Charging by conduction - is a method of charging a body. Whenever an uncharged conductor is placed in contact with a charged body, charges flow from the charged body to the uncharged conductor and both the bodies in contact will have the same type of charge.
22) Define Coulomb.
Ans: The SI unit of charge is called coulomb denoted by (C).
Coulomb can be defined as that charge which is repelled by a force of 9×10^9 Newtons when placed in free space at a distance of one metre from an identical charge.
23) Define the dielectric constant or relative permittivity of a medium.
Ans: - The dielectric constant of a medium is the ratio of the force between two point charges, separated by a distance in air to the force between the same two point charges separated by the same distance in the given medium. It is denoted by the letter K and is given by

$$K = \varepsilon_r = \frac{\varepsilon}{\varepsilon_o} .$$

Where ε_r is called the relative permittivity or the dielectric constant of the medium
24) How many electrons are there in one coulomb of charge?
Ans:- Let there be n electrons in one coulomb of charge.
We know that from quantisation of charge,

$$q = ne$$
$$\therefore n = \frac{q}{e} = \frac{1}{1.6 \times 10^{-19}}$$
$$= 6.25 \times 10^{18}$$

25) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?
Ans:- The electric fields bind the atoms to neutral entity. Fields are caused by excess charges. There can be no excess charge on the inner surface of an isolated conductor.
26) Two identical metallic spheres of exactly equal masses are taken. One is given a positive charge of Q coulomb and the other is given equal negative charge by friction. Are their masses after charging equal?
Ans:- When two bodies are rubbed together, the electrons get removed from one body and transferred to the other body. The body from which the electrons get removed becomes positively charged and the body to which the electrons get transferred becomes negatively charged. Since an electron is a material particle, the mass of the positively charged body decreases and that of the negatively charged body increases.
Hence, when one of the two identical metallic spheres is charged positive and the other negative, their masses after charging will not be equal.

ಸಪ್ಲೈ ಚೇನ್ & ಲಾಜಿಸ್ಟಿಕ್ಸ್ ನಿರ್ವಹಣೆ

ಯಶಸ್ವಿ ಕಂಪನಿಗಳ ಹಿಂದೆ ಇರುವವರು ಯಾರು ಗೊತ್ತೇ? ಉತ್ಪನ್ನಗಳನ್ನು ಖರೀದಿಸಿ ಗ್ರಾಹಕರಿಗೆ ತಲುಪಿಸುವವರೆಗೆ ಎಲ್ಲ ಹಂತದ ಕೆಲಸಗಳನ್ನೂ 'ಸ್ಮಾರ್ಟ್' ಆಗಿ ನಿರ್ವಹಿಸುವವರು. ಅಂತಹ ಕೌಶಲ ಕರಗತಗೊಳಿಸುವ ಕೋರ್ಸ್‌ಗಳ ಮಾಹಿತಿ ಇಲ್ಲಿದೆ.

• ಪ್ರದೀಪ್ ಎಸ್. ವೆಂಕಟರಾಮ್

ಪ್ರತಿಷ್ಠಿತ ಕಂಪನಿಗಳಾದ ಅಮೆಜಾನ್, ಮೈಕ್ರೊಸಾಫ್ಟ್, ಒರ್ಯಾಕಲ್, ಸ್ಯಾಪ್, ಡಿಎಚ್‌ಎಲ್‌ನಂತಹವುಗಳ ಲಾಭದಾಯಕತೆಯ ಹಿಂದಿರುವ ನಿಜವಾದ ಗುಟ್ಟು ಏನು? ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ, ಹೆಚ್ಚಿನ ಉತ್ಪಾದಕತೆ ಮತ್ತು ಗ್ರಾಹಕಕೇಂದ್ರಿತ ಕಾರ್ಯವೈಖರಿ– ಇವೆಲ್ಲವೂ ಯಶಸ್ಸಿನ ಮೂಲಾಧಾರಗಳು.

ಇವೇ ತತ್ವಗಳು ಮಿಲಿಟರಿ ಕಾರ್ಯಾಚರಣೆಯಲ್ಲಿಯೂ ಕಾಣಿಸಿಕೊಳ್ಳುತ್ತವೆ. ಮಿಲಿಟರಿ ಸಾಮಗ್ರಿ ಮತ್ತು ಸೇವೆಗಳನ್ನು ಸರಿಯಾದ ಸಮಯದಲ್ಲಿ ಖರೀದಿಸಿ, ಉತ್ಪಾದಿಸಿ, ತಲುಪಿಸುವ ಸಮನ್ವಯ ವ್ಯವಸ್ಥೆಯೇ ಯಶಸ್ಸಿಗೆ ಪ್ರಮುಖ ಕಾರಣ. ಈ ಕಾರ್ಯಾಚರಣೆಗಳ ಸಂಕೀರ್ಣತೆ ಹೆಚ್ಚಾದಂತೆ 'ಸಪ್ಲೈ ಚೇನ್ ಮ್ಯಾನೇಜ್‌ಮೆಂಟ್' ಮತ್ತು 'ಲಾಜಿಸ್ಟಿಕ್ಸ್' ಎಂಬ ಪರಿಕಲ್ಪನೆಗಳು ಮೊದಲಿಗೆ ಮಿಲಿಟರಿ ಕ್ಷೇತ್ರದಲ್ಲೇ ರೂಪುಗೊಂಡವು.

20ನೇ ಶತಮಾನದವರೆಗೆ ವ್ಯಾಪಾರ ಸಂಸ್ಥೆಗಳಲ್ಲಿ ಕಮರ್ಷಿಯಲ್ ಮ್ಯಾನೇಜರ್, ಪರ್ಚೇಸ್ ಮ್ಯಾನೇಜರ್ ಮತ್ತು ವೇರ್‌ಹೌಸ್ ಮ್ಯಾನೇಜರ್ ಈ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದರು. ಆದರೆ ಕೈಗಾರಿಕಾ ವಿಸ್ತರಣೆ, ಜಾಗತೀಕರಣ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಪರಿಣಾಮವಾಗಿ ಈ ಕಾರ್ಯಗಳ ವ್ಯಾಪ್ತಿ ಮತ್ತು ಸಂಕೀರ್ಣತೆ ಹೆಚ್ಚಿತು. ಜೊತೆಗೆ, ಸ್ಪರ್ಧಾತ್ಮಕ ವ್ಯಾಪಾರ ಪರಿಸರದಲ್ಲಿ, ವೆಚ್ಚ ನಿಯಂತ್ರಣ ಮತ್ತು ಲಾಭದಾಯಕತೆಯ ನಡುವೆ ಇರುವ ನೇರ ಸಂಬಂಧ ಸ್ಪಷ್ಟವಾಯಿತು.

ಈ ಕಾರಣದಿಂದ, ಇಂದಿನ ಜಾಗತಿಕ ವ್ಯಾಪಾರ ಜಗತ್ತಿನಲ್ಲಿ ಸರಕುಗಳ ಉತ್ಪಾದನೆ, ಸಂಗ್ರಹ ಮತ್ತು ವಿತರಣೆಯನ್ನು ಸಮಗ್ರವಾಗಿ ಸಮನ್ವಯ ಗೊಳಿಸುವ ಪ್ರಮುಖ ಕ್ಷೇತ್ರವಾಗಿ ಸಪ್ಲೈ ಚೇನ್ ಮತ್ತು ಲಾಜಿಸ್ಟಿಕ್ಸ್ ನಿರ್ವಹಣೆ ಹೊರಹೊಮ್ಮಿದೆ.

ಮಹತ್ವದ ಉದ್ದೇಶ: ಈ ಕ್ಷೇತ್ರದ ಮುಖ್ಯ ಗುರಿಯೆಂದರೆ, ಉತ್ಕೃಷ್ಟ ಗುಣಮಟ್ಟದ ಉತ್ಪಾದನಾ ಸಾಮಗ್ರಿಗಳನ್ನು ಸರಿಯಾದ ಸಮಯಕ್ಕೆ ತಲುಪಿಸುವುದು ಹಾಗೂ ಅಂತಿಮವಾಗಿ ಉತ್ಪನ್ನಗಳನ್ನು ಸುರಕ್ಷಿತವಾಗಿ ಮತ್ತು ಸಮಯೋಚಿತವಾಗಿ ಗ್ರಾಹಕರಿಗೆ ವಿತರಿಸುವುದು. ಉತ್ಪಾದನೆಯಿಂದ ಗ್ರಾಹಕರಿಗೆ ತಲುಪುವವರೆಗಿನ ಪ್ರತಿ ಹಂತವನ್ನೂ ಸಮರ್ಪಕವಾಗಿ ನಿರ್ವಹಿಸುವ ಮೂಲಕ, ಈ ಕ್ಷೇತ್ರವು ಸಂಸ್ಥೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಲ್ಲದೆ, ಗ್ರಾಹಕರ ಸಂತೃಪ್ತಿಯನ್ನೂ ವೃದ್ಧಿಸುತ್ತದೆ. ಭಾರತದ ಆರ್ಥಿಕತೆಯಲ್ಲಿಯೂ ಈ ಕ್ಷೇತ್ರದ ಪಾತ್ರ ಮಹತ್ತರವಾಗಿದೆ.

ಜಿಡಿಪಿಗೆ ಶೇಕಡ 14ರಷ್ಟು ಕೊಡುಗೆ ನೀಡುವುದರೊಂದಿಗೆ, ಸುಮಾರು 2.2 ಕೋಟಿಯಷ್ಟು ಉದ್ಯೋಗಗಳನ್ನು ಸೃಷ್ಟಿಸಿರುವ ಪ್ರಮುಖ ವಲಯವಾಗಿದೆ.

ಸಪ್ಲೈ ಚೇನ್ ಮತ್ತು ಲಾಜಿಸ್ಟಿಕ್ಸ್ ನಿರ್ವಹಣೆಯು ಇಂದಿನ ಜಾಗತಿಕ ವ್ಯಾಪಾರ ವ್ಯವಸ್ಥೆಯ ಹೃದಯಭಾಗವಾಗಿದೆ. ಎಐ, ಡಿಜಿಟಲ್ ತಂತ್ರಜ್ಞಾನ, ರೋಬೊಟಿಕ್ಸ್ ಮತ್ತು ಡೇಟಾ ವಿಶ್ಲೇಷಣೆಗಳ ಬಳಕೆಯಿಂದ ಈ ಕ್ಷೇತ್ರದ ಪ್ರಾಮುಖ್ಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಉದ್ಯೋಗಾವಕಾಶಗಳ ವ್ಯಾಪ್ತಿ ಮತ್ತು ವೃತ್ತಿ ಬೆಳವಣಿಗೆಯ ಸಾಧ್ಯತೆಗಳನ್ನು ಗಮನಿಸಿದರೆ, ಇದು ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಭವಿಷ್ಯವನ್ನು ರೂಪಿಸಿಕೊಳ್ಳಲು ಅತ್ಯುತ್ತಮ ಆಯ್ಕೆಯಾಗಿದೆ.

ಲೇಖಕ: ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ಈ ಕೋರ್ಸ್ ಆಯ್ದುಕೊಳ್ಳಿ

ಈ ಕ್ಷೇತ್ರದಲ್ಲಿ ವೃತ್ತಿಪರರಾಗಲು ವಿದ್ಯಾರ್ಥಿಗಳು ಕೆಳಗಿನ ಕೋರ್ಸ್‌ಗಳನ್ನು ಆಯ್ದುಕೊಳ್ಳಬಹುದು:
- ಬಿಬಿಎ/ಬಿಕಾಂ (ಲಾಜಿಸ್ಟಿಕ್ಸ್/ ಸಪ್ಲೈ ಚೇನ್ ಮ್ಯಾನೇಜ್‌ಮೆಂಟ್)
- ಎಂಬಿಎ (ಲಾಜಿಸ್ಟಿಕ್ಸ್/ಸಪ್ಲೈ ಚೇನ್ ಮ್ಯಾನೇಜ್‌ಮೆಂಟ್)
- ಪಿ.ಜಿ ಡಿಪ್ಲೊಮಾ (ಲಾಜಿಸ್ಟಿಕ್ಸ್/ ಸಪ್ಲೈ ಚೇನ್ ಮ್ಯಾನೇಜ್‌ಮೆಂಟ್)
- ಅಲ್ಪಾವಧಿ ಮತ್ತು ದೀರ್ಘಾವಧಿ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್‌ಗಳು

ಅಧ್ಯಯನ ವಿಷಯಗಳಲ್ಲಿ ಪ್ರಿನ್ಸಿಪಲ್ಸ್ ಆಫ್ ಮ್ಯಾನೇಜ್‌ಮೆಂಟ್, ಆಪರೇಷನ್ಸ್ ಮ್ಯಾನೇಜ್‌ಮೆಂಟ್, ಇನ್ವೆಂಟರಿ ಮ್ಯಾನೇಜ್‌ಮೆಂಟ್, ಟ್ರಾನ್ಸ್‌ಪೋರ್ಟೇಷನ್, ಡೇಟಾ ಅನಲಿಟಿಕ್ಸ್, ಇಂಟರ್‌ನ್ಯಾಷನಲ್ ಟ್ರೇಡ್, ಕಾಸ್ಟ್ ಮ್ಯಾನೇಜ್‌ಮೆಂಟ್ ಮುಂತಾದವು ಸೇರಿವೆ.

ಈ ಕ್ಷೇತ್ರದ ಪ್ರಮುಖ ಶಿಕ್ಷಣ ಸಂಸ್ಥೆಗಳಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕ್ರೈಸ್ಟ್, ಜೈನ್, ಮಣಿಪಾಲ್, ಎಸ್.ಪಿ. ಜೈನ್ ಮತ್ತು ಸಿಂಬಯಾಸಿಸ್ ಹೆಸರಾಗಿವೆ.

ಕ್ಷೇತ್ರದ ಪ್ರಮುಖ ಕಾರ್ಯ

- ಯೋಜನೆ (ಪ್ಲ್ಯಾನಿಂಗ್)
- ಕಚ್ಚಾ ಹಾಗೂ ಸಂಸ್ಕರಿಸಿದ ಪದಾರ್ಥಗಳ ಖರೀದಿ (ಸೋರ್ಸಿಂಗ್)
- ಉತ್ಪಾದನೆ (ಮ್ಯಾನ್ಯುಫ್ಯಾಕ್ಚರಿಂಗ್)
- ಸಂಗ್ರಹ ಮತ್ತು ದಾಸ್ತಾನು ನಿಯಂತ್ರಣ (ಸ್ಟೋರೇಜ್ ಆ್ಯಂಡ್ ಇನ್ವೆಂಟರಿ ಕಂಟ್ರೋಲ್)
- ಸಾಗಣೆ ಮತ್ತು ವಿತರಣೆ (ಟ್ರಾನ್ಸ್‌ಪೋರ್ಟೇಷನ್ ಆ್ಯಂಡ್ ಡಿಸ್ಟ್ರಿಬ್ಯೂಷನ್)
- ಗ್ರಾಹಕ ಸೇವೆ (ಕಸ್ಟಮರ್ ಸರ್ವಿಸ್)

ಈ ಎಲ್ಲಾ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿದ್ದು, ಒಟ್ಟಾರೆ ಸಮನ್ವಿತ ಪರಿಣಾಮವನ್ನು ಉಂಟುಮಾಡುತ್ತವೆ. ಇದರ ಫಲವಾಗಿ ಸಂಸ್ಥೆಯ ಕಾರ್ಯಾಚರಣೆಗಳು ಹೆಚ್ಚು ಸುಗಮ ಮತ್ತು ಪರಿಣಾಮಕಾರಿಯಾಗುತ್ತವೆ.

ಉದ್ಯೋಗಾವಕಾಶ

ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ವ್ಯಾಪಕವಾಗಿವೆ :
- ಸಪ್ಲೈ ಚೇನ್ ಮ್ಯಾನೇಜರ್
- ಲಾಜಿಸ್ಟಿಕ್ಸ್ ಹೆಡ್
- ಆಪರೇಷನ್ಸ್ ಮ್ಯಾನೇಜರ್
- ಪ್ರೊಕ್ಯೂರ್‌ಮೆಂಟ್ ಮ್ಯಾನೇಜರ್
- ವೆಂಡರ್ ಮ್ಯಾನೇಜರ್
- ಎಸ್‌ಸಿಎಂ ಮ್ಯಾನೇಜರ್
- ಇ-ಕಾಮರ್ಸ್ ಲಾಜಿಸ್ಟಿಕ್ಸ್ ಸ್ಪೆಷಲಿಸ್ಟ್...

ಇ-ಕಾಮರ್ಸ್, ಉತ್ಪಾದನೆ, ಎಫ್‌ಎಂಸಿಜಿ, ರೀಟೇಲ್ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಕ್ಷೇತ್ರಗಳಲ್ಲಿ ಈ ವೃತ್ತಿಗಳಿಗೆ ನಿರಂತರ ಬೇಡಿಕೆ ಇದೆ.

ರೀಲ್ಸ್ ಹುಚ್ಚು ಬಿಡಿಸುವುದು ಹೇಗೆ?

• 16 ವರ್ಷದ ನಮ್ಮ ಒಬ್ಬಳೇ ಮಗಳು ಮೊಬೈಲ್ ವ್ಯಸನಿಯಾಗಿದ್ದಾಳೆ. ಎಷ್ಟೇ ಬುದ್ಧಿಮಾತು ಹೇಳಿದರೂ ಕೇಳುತ್ತಿಲ್ಲ. ಕಾಲೇಜು, ಅಭ್ಯಾಸದತ್ತ ಗಮನವಿಲ್ಲ. ಫ್ಯಾಷನ್, ರೀಲ್ಸ್ ಮಾಡುವುದರ ಕಡೆಗೆ ಗಮನ. ಲೈಕ್ಸ್ ಬಂದಿಲ್ಲವೆಂದು ಕೊರಗುತ್ತಾಳೆ. ಇದಕ್ಕಾಗಿ ಹರಕೆಯನ್ನೂ ಹೊತ್ತಿದ್ದಾಳೆ. ಇದರಿಂದಲೇ ಆದಾಯ ಬರುತ್ತದೆ, ಕಾಯಬೇಕಷ್ಟೆ ಎಂದು ಹೇಳುತ್ತಾಳೆ. ನಿದ್ರೆ, ಊಟ ಸರಿಯಾಗಿ ಮಾಡದೆ ಸೊರಗಿದ್ದಾಳೆ. ಸಣ್ಣಗೆ ಇರುವುದು ಮಹಾನ್ ಅದೃಷ್ಟ ಎಂದು ವಾದಿಸುತ್ತಾಳೆ. ಓದಿ ಉದ್ಧಾರ ಆದವರಿಗಿಂತ ಓದದೇ ಉದ್ಧಾರ ಆದವರು ಹೆಚ್ಚು ಎನ್ನುತ್ತಾ ಮಾತು ಮಾತಿಗೂ ರೇಗುತ್ತಾಳೆ. ಭವಿಷ್ಯದ ಬಗ್ಗೆ ಹೇಳಿದರೆ 'ನೀವು ಮಾಡಿಟ್ಟ ಆಸ್ತಿ ಯಾರಿಗೆ? ನನಗೆ ತಾನೆ' ಎಂದೆಲ್ಲ ವಾದಿಸುತ್ತಾಳೆ. ಅವಳ ಬದುಕು–ಭವಿಷ್ಯದ್ದೇ ಚಿಂತೆಯಾಗಿದೆ. ಹೇಗೆ ಸರಿ ಮಾಡಬೇಕು ತಿಳಿಯುತ್ತಿಲ್ಲ.

ಗೌರಿ ಸತೀಶ, ಬುಗರಿಗದ್ದೆ

ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

ನಿಮಗಿರುವ ಚಿಂತೆ ಮತ್ತು ಅಸಹಾಯಕತೆ ನನಗೆ ಅರ್ಥವಾಗುತ್ತದೆ. 15–16ರ ವಯಸ್ಸೆಂದರೆ, ಹುಡುಗಿಯ ಜೀವನದಲ್ಲಿ ಅನಿರೀಕ್ಷಿತ ತಿರುವು ಬರುವ ಹಂತ. ಜೀವರಸಾಯನಿಕ ವೈಪರೀತ್ಯದಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ಅವಳಲ್ಲಿ ಬದಲಾವಣೆಯಾಗುತ್ತದೆ. ಬದುಕಿನ ಗಾಂಭೀರ್ಯ ಅರ್ಥವಾಗದ ವಯಸ್ಸದು. ವಸಂತ ಕಾಲದ ಕೋಗಿಲೆಯಂತೆ ಹಾಡುತ್ತಾ, ನಲಿಯುತ್ತಾ ಇರುವುದಷ್ಟೇ ಚೆನ್ನಾಗಿ ಅನ್ನಿಸುವ ಕಾಲವದು. ಅವಳಿಗೆ ಅವಳಿಷ್ಟದ ಸ್ವಾತಂತ್ರ್ಯ ಬೇಕಾಗಿರುತ್ತದೆ.

ಆದರೆ ಮೊಬೈಲ್, ಸಾಮಾಜಿಕ ಮಾಧ್ಯಮ ಹಾಗೂ ಹೊರಗಿನ ಪ್ರಭಾವಗಳು ಆ 'ಸ್ವಾತಂತ್ರ್ಯ'ವನ್ನು ತಪ್ಪಾಗಿ ಮಾರ್ಗದರ್ಶಿಸುತ್ತಿವೆ. ಅದನ್ನು ಸತ್ಯ ಎಂದು ಆಕೆ ನಂಬುತ್ತಾಳೆ. ಇಂದಿನ ಕಾಲದಲ್ಲಿ ಸೋಷಿಯಲ್ ಮೀಡಿಯಾ ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಇದರ ಪ್ರಭಾವದಲ್ಲಿ ಇಂದಿನ 'ಝೆನ್– ಜಿ'ಗಳು ಮುಳುಗೇಳುತ್ತಿದ್ದಾರೆ. ಇದರ ಅತಿಯಾದ ಬಳಕೆ ಅವರ ಜೀವನದಲ್ಲಿ ಹಲವು ಗಂಭೀರ ಸಮಸ್ಯೆಗಳನ್ನು ಉಂಟುಮಾಡುತ್ತಿದೆ ಎನ್ನುವುದು ನಿರ್ವಿವಾದ. ಇದರ ಪರಿಣಾಮದಿಂದ ಮುಂದೆ ಎಂತಹ ಜಗತ್ತು ನಿರ್ಮಾಣವಾಗುತ್ತದೆ ಎನ್ನುವುದನ್ನು ನಾವು ಕಾದು ನೋಡಬೇಕಷ್ಟೆ.

ನಿಮ್ಮ ಮಗಳಿಗೆ ನೀವು ಉಪದೇಶ ಕೊಡಲು ಹೋಗುವುದಕ್ಕಿಂತ, ಅವಳ ಮನಃಸ್ಥಿತಿಯನ್ನು ತಿಳಿಯಲು ಪ್ರಯತ್ನಿಸಿ. 'ನೀನು ಇಷ್ಟೊಂದು ಸಮಯ ರೀಲ್ಸ್ ಮಾಡ್ತೀಯಲ್ಲ, ಅದರಿಂದ ನಿನಗೆ ಎಷ್ಟು ಸಂತೋಷ ಸಿಗುತ್ತದೆ? ನಿನ್ನ ಭವಿಷ್ಯದ ನಿರ್ಮಾಣಕ್ಕೆ ಅದರಿಂದ ಹೇಗೆ ಸಹಾಯವಾಗುತ್ತದೆ?' ಎಂದು ಕೇಳಿ. ಅವಳ ಉತ್ತರವನ್ನು ಗಮನಿಸಿ. ನೀವು ಚಿಂತೆಯಿಂದ, ಕೋಪದಿಂದ ಮಾತನಾಡಿದಷ್ಟು ಅವಳ ಪ್ರತಿರೋಧವೂ ಹೆಚ್ಚಾಗಬಹುದು.

ಮನೆಯಲ್ಲಿ ಎಲ್ಲರೂ ರಾತ್ರಿ ಹತ್ತು ಗಂಟೆಯ ನಂತರ ಮೊಬೈಲ್ ಫೋನ್ ಬಳಸುವುದನ್ನು ನಿಲ್ಲಿಸುವ ಕ್ರಮವನ್ನು ಪ್ರಾರಂಭಿಸಿ. ಹಾಗೆ ಮಾಡುವುದರಿಂದ ನೀವು ಅವಳೊಬ್ಬಳನ್ನೇ ನಿಯಂತ್ರಿಸಲು ಪ್ರಯತ್ನಿಸಿ-ದಂತೆ ಅವಳಿಗೆ ಭಾಸವಾಗುವುದಿಲ್ಲ. ಎಲ್ಲರೂ ರಾತ್ರಿ ಒಟ್ಟಿಗೇ ಊಟ ಮಾಡುವುದರಿಂದ, ಬೆಳಿಗ್ಗೆ ಎಲ್ಲರೂ ಒಟ್ಟಿಗೇ ವಾಕಿಂಗ್ ಹೋಗುವುದರಿಂದ, ವಾರಕ್ಕೊಮ್ಮೆ ಎಲ್ಲರೂ ಕೆಲವು ಗಂಟೆಗಳಷ್ಟಾದರೂ ಒಟ್ಟಿಗೇ ಹೊರಗೆ ಎಲ್ಲಾದರೂ ಹೋಗಿ ಬರುವುದರಿಂದ ಪರಸ್ಪರ ಹತ್ತಿರವಾಗುವುದಕ್ಕೆ ಸಹಾಯವಾಗುತ್ತದೆ. ಇದರಿಂದ ಅನೇಕ ಸಮಸ್ಯೆಗಳು ಹುಟ್ಟಿನಲ್ಲಿಯೇ ಸಾಯುತ್ತವೆ. ಸಂಸಾರದಲ್ಲಿ ಸಾಮರಸ್ಯ ಹೆಚ್ಚಬೇಕಾದರೆ, ಪರಸ್ಪರರು ಸಾಧ್ಯವಾದಷ್ಟೂ ಮಾನಸಿಕವಾಗಿ ಹತ್ತಿರವಾಗಬೇಕು. ಇದಕ್ಕಾಗಿ ಎಲ್ಲರೂ ಒಂದಿಷ್ಟು ತ್ಯಾಗವನ್ನು ಮಾಡಬೇಕಾಗುತ್ತದೆ.

ಹದಿಹರೆಯದ ಅವಳ ಅಟಾಟೋಪಗಳನ್ನು ಒಂದೆರಡು ದಿನಗಳಲ್ಲಾಗಲೀ ನಾಲ್ಕಾರು ಮಾತುಗಳಲ್ಲಾಗಲೀ ಆರೆಂಟು ಮಾತ್ರೆಗಳಿಂದಾಗಲೀ ಸರಿಪಡಿಸಲು ಸಾಧ್ಯವಿಲ್ಲ. ಅದಕ್ಕಾಗಿ ಕುಟುಂಬದ ನೀವೆಲ್ಲರೂ ಪರಸ್ಪರ ಸಹನೆಯಿಂದ ಸತತವಾಗಿ ಪ್ರಯತ್ನಿಸಬೇಕು. ಸೋಷಿಯಲ್ ಮೀಡಿಯಾದ 'ಲೈಕ್ಸ್' ಗಳಿಂದಾಗಲೀ 'ಫಾಲೋವರ್ಸ್' ಗಳಿಂದಾಗಲೀ ನಿಜಜೀವನದಲ್ಲಿ ಪ್ರಯೋಜವಾಗುವುದು ತೀರಾ ಕಡಿಮೆ ಎನ್ನುವುದನ್ನು ಕೆಲವು ಉದಾಹರಣೆಗಳ ಮೂಲಕ ಅವಳಿಗೆ ತಿಳಿಸಿ ಹೇಳಿ.

ನಿಮ್ಮ ಮಗಳು ಭಾವನಾತ್ಮಕ ವ್ಯಕ್ತಿತ್ವದವಳಾದರೂ ವ್ಯಾವಹಾರಿಕವಾಗಿ ಚತುರೆಯಂತೆ ಕಾಣುತ್ತಾಳೆ. ಈ ವಯಸ್ಸಿನಲ್ಲಿಯೇ ನಿಮ್ಮ ಆದಾಯದ ಬಗ್ಗೆ, ಆಸ್ತಿಯ ಬಗ್ಗೆ ಅವಳಿಗೆ ತಿಳಿದಿದೆ ಎನ್ನುವುದು ಸಮಾಧಾನದ ವಿಷಯವೇನಲ್ಲ. ಅವಳಿಗೆ ದೇವರ ಮೇಲೆ ಭಯ, ಭಕ್ತಿ ಹಾಗೂ ವಿಶ್ವಾಸ ಇದ್ದಂತಿದೆ. ಅದರ ಮೂಲಕ ಅವಳನ್ನು ಸರಿದಾರಿಗೆ ತರಲು ಪ್ರಯತ್ನಿಸಬಹುದು. ಇಷ್ಟೆಲ್ಲ ಪ್ರಯತ್ನದ ನಂತರವೂ ನಿಮ್ಮ ನಿರೀಕ್ಷೆಯ ಪರಿಣಾಮ ಕಾಣದಿದ್ದರೆ, ಅವಳ ಜೊತೆಗೆ ನೀವು ಮಾನಸಿಕ ತಜ್ಞರನ್ನು ಸಂಪರ್ಕಿಸುವುದು ಒಳ್ಳೆಯದು.

IIBS BENGALURU
Redefining Leading Talents
NAAC A
UGC
AUTONOMOUS ACCREDITED B-SCHOOL
NBA NATIONAL BOARD OF ACCREDITATION
18 YEARS OF ACADEMIC EXCELLENCE
RECOMMENDED BY 20+ MDS.
APPRECIATED BY 10+ BUREAUCRATS
VALIDATED BY 30+ CEOS.
Approved by AICTE Ministry of Education, Government of India
Admissions Open for 2026-29
BA + IAS & IPS
BCA + AI & ML
BBA + Business Analytics
B.Com + ACCA
MBA
Marketing, Finance, HR-Management, Business Analytics, Production & Operations Management, Enterprenuership & Start-ups.
PGDM
Marketing, Finance, HR-Management, Business Analytics, Production & Operations Management, Entrepreneurship & Start-ups, Agri-Business Management, Logistics & Supply Chain Management, Data Sc., IT, IB, Healthcare & Hospital Management, AI & ML
+91 99864 15333
+91 96202 48214
admission@iibsonline.com
www.iibs.org.in | www.iibs.edu.in
INTERNATIONAL INSTITUTE OF BUSINESS STUDIES
Near International Airport, Bengaluru - 562110

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**



ಸುಭಾಷಿತ

ಯಾವುದಕ್ಕೂ ಬಾಗದ, ಯಾರಿಗೂ ಮಣಿಯದ ಅಚಲವಾದ ಮನೋಸ್ಥೈರ್ಯವೇ ದೇಶದ ಅಥವಾ ವ್ಯಕ್ತಿಯ ನಿಜವಾದ ಶಕ್ತಿ.
–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಾಷ್ಟ್ರ ರಾಜಕಾರಣದಲ್ಲೂ ಪರಿಣಾಮ

ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಅವರು ಪ್ರಮಾಣವಚನ ಸ್ವೀಕರಿಸಿರುವುದು ಆ ರಾಜ್ಯದ ರಾಜಕೀಯದಲ್ಲಿನ ಒಂದು ನಿರ್ಣಾಯಕ ಪರಿವರ್ತನೆಯಂತೆ ಕಾಣಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿನ ಬದಲಾವಣೆಯು ಆ ರಾಜ್ಯದ ಮೇಲಷ್ಟೇ ಅಲ್ಲದೆ, ರಾಷ್ಟ್ರ ರಾಜಕಾರಣದ ಮೇಲೆಯೂ ಪರಿಣಾಮ ಬೀರಲಿದೆ. ಬಿಜೆಪಿಯ ಸಿದ್ಧಾಂತ, ಅದರ ರಾಜಕಾರಣ ಹಾಗೂ ಆಡಳಿತ ವಿಧಾನಕ್ಕೆ ಹಲವು ವರ್ಷಗಳಿಂದ ಪ್ರತಿರೋಧ ಒಡ್ಡುತ್ತಾ ಬಂದಿದ್ದ ದೊಡ್ಡ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳವೂ ಒಂದು. ಈಗ ಅದು ಬಿಜೆಪಿಗೆ ತನ್ನ ಒಲವನ್ನು ಬಹುದೊಡ್ಡ ಮಟ್ಟದಲ್ಲಿ ತೋರಿಸಿದೆ. 2016ರ ವಿಧಾನಸಭಾ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಯು ಈಗ ಅಲ್ಲಿ 200ಕ್ಕೂ ಹೆಚ್ಚು ಸಂಖ್ಯಾಬಲ ಪಡೆದುಕೊಂಡಿದೆ. ಈ ಸ್ಥಿರ ಬೆಳವಣಿಗೆಯ ಹಿಂದೆ ಸೈದ್ಧಾಂತಿಕ, ಸಂಘಟನಾತ್ಮಕ ಹಾಗೂ ನಾಯಕತ್ವದ ಮಟ್ಟದಲ್ಲಿನ ಪರಿಶ್ರಮ ಕೆಲಸ ಮಾಡಿದೆ. ಬದಲಾವಣೆಯ ಸೂಚನೆಗಳು ಕೆಲವು ವರ್ಷಗಳಿಂದ ಕಾಣಿಸಿಕೊಳ್ಳುತ್ತಿದ್ದುದು ಹೌದಾದರೂ, ಈ ಬಾರಿ ಅಲ್ಲಿ ಆಗಿರುವುದು ದಿಢೀರ್ ಬದಲಾವಣೆಯೇ. ಚುನಾವಣಾ ಆಯೋಗವು ಜಾರಿಗೆ ತಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ, ಲಕ್ಷಾಂತರ ಮಂದಿಗೆ ಮತದಾನದ ಹಕ್ಕನ್ನು ನಿರಾಕರಿಸಿತು ಹಾಗೂ ಆಯೋಗವು ಚುನಾವಣಾ ಪ್ರಚಾರದ ಅವಧಿಯಲ್ಲಿ ಕೈಗೊಂಡ ಭದ್ರತಾ ಮತ್ತು ಆಡಳಿತಾತ್ಮಕ ತೀರ್ಮಾನಗಳು ಫಲಿತಾಂಶದ ಮೇಲೆ ಪರಿಣಾಮ ಬೀರಿದವು. ಆದರೂ, ಮತದಾರರು ಬದಲಾವಣೆಯನ್ನು ಬಯಸುತ್ತಿದ್ದರು ಎನ್ನುವುದನ್ನು ನಿರಾಕರಿಸಲು ಆಗುವುದಿಲ್ಲ.

ಪಶ್ಚಿಮ ಬಂಗಾಳದ ಹೊಸ ಸರ್ಕಾರದ ಮುಂದೆ ಶಾಂತಿ ಸ್ಥಾಪನೆ, ಉದ್ಯೋಗ ಸೃಷ್ಟಿ, ಮೂಲ ಸೌಕರ್ಯಗಳ ಅಭಿವೃದ್ಧಿ ಹಾಗೂ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಪ್ರಮುಖ ಸವಾಲುಗಳಿವೆ.

ಪ್ರಾದೇಶಿಕ ಅಸ್ಮಿತೆಯ ರಾಜಕಾರಣವನ್ನು ಮುಂದಿಟ್ಟುಕೊಂಡು ಮಮತಾ ಬ್ಯಾನರ್ಜಿ ಅವರು ಬಲ ಹೆಚ್ಚಿಸಿಕೊಂಡಿದ್ದರು. ದಬ್ಬಾಳಿಕೆಯ ಧೋರಣೆ ಹೊಂದಿರುವ ಕೇಂದ್ರ ಸರ್ಕಾರ ಹಾಗೂ ಬಹುಸಂಖ್ಯಾತವಾದಿ ಸಿದ್ಧಾಂತದ ವಿರುದ್ಧವಾಗಿ ನಿಂತು, ರಾಜ್ಯವನ್ನು ಕಾಪಾಡುವ ವ್ಯಕ್ತಿ ತಾವು ಎಂದು ಮಮತಾ ಅವರು ತಮ್ಮನ್ನು ಬಿಂಬಿಸಿಕೊಂಡಿದ್ದರು. ಇತ್ತ ಬಿಜೆಪಿಯು ರಾಷ್ಟ್ರದ ಸಮಗ್ರತೆ, ಗಡಿಯ ಭದ್ರತೆ, ಪೌರತ್ವ ಹಾಗೂ ಜನಸಂಖ್ಯೆಯಲ್ಲಿ ಆಗುತ್ತಿರುವ ಬದಲಾವಣೆಗಳ ಸುತ್ತಲಿನ ಆತಂಕಗಳನ್ನು ಆಧರಿಸಿ ಹೊಸ ಅಸ್ಮಿತೆಯ ಚೌಕಟ್ಟೊಂದನ್ನು ಜನರ ಮುಂದೆ ಇರಿಸಿತು. ಅಕ್ರಮ ವಲಸೆ, ಅಲ್ಪಸಂಖ್ಯಾತರ ಓಲೈಕೆಯಂತಹ ವಿಷಯಗಳನ್ನು ಜನರ ಮುಂದಿರಿಸಿ, ತನ್ನ ಪರವಾಗಿ ಜನಾಭಿಪ್ರಾಯ ರೂಪುಗೊಳ್ಳುವಂತೆ ಮಾಡುವ ಧಾರ್ಮಿಕ ಧ್ರುವೀಕರಣ ಸಾಧ್ಯವಾಗಿಸುವಲ್ಲಿ ಬಿಜೆಪಿ ಯಶಸ್ಸು ಪಡೆಯಿತು. ನಿರುದ್ಯೋಗ, ಭ್ರಷ್ಟಾಚಾರ, ಆಡಳಿತದಲ್ಲಿನ ಲೋಪಗಳು, ಕಾನೂನು ಮತ್ತು ಸುವ್ಯವಸ್ಥೆಯ ವಿಚಾರವಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ವಿರುದ್ಧ ಅಲೆಯೊಂದು ಇತ್ತು. ಜನಕಲ್ಯಾಣ ಯೋಜನೆಗಳನ್ನು ಆಧರಿಸಿದ ರಾಜಕೀಯದ ಮೂಲಕ ಮಮತಾ ಅವರು ಸಂಪಾದಿಸಿದ ರಾಜಕೀಯ ಬಂಡವಾಳ, ಮಹಿಳಾ ಮತದಾರರ ನಡುವೆ ಅವರು ಹೊಂದಿದ್ದ ವರ್ಚಸ್ಸು ಕುಗ್ಗುತ್ತಾ ಬಂದಿದ್ದವು. ಅಲ್ಪಸಂಖ್ಯಾತರ ಮತಗಳನ್ನು ಮಮತಾ ನೆಚ್ಚಿಕೊಂಡಿದ್ದರಾದರೂ, ಆ ಮತಗಳು ಅವರ ಗೆಲುವು ಖಾತರಿಪಡಿಸಲು ಸಾಕಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಬಿಜೆಪಿಯು ಬದಲಾವಣೆಗೆ ಜನಾದೇಶ ಪಡೆದಿದೆ.

ರಾಜ್ಯದ ಅರ್ಥ ವ್ಯವಸ್ಥೆ ಮತ್ತು ಸಮಾಜಕ್ಕೆ ಹೊಸ ಚೈತನ್ಯ ತುಂಬುವುದಾಗಿ ಬಿಜೆಪಿ ಸರ್ಕಾರವು ಭರವಸೆ ನೀಡಿದೆ. ಅದರ ಮುಂದೆ ಗಂಭೀರ ಸವಾಲುಗಳಿವೆ. ಸುವೇಂದು ಅಧಿಕಾರಿ ಅವರ ಆಪ್ತರೊಬ್ಬರ ಹತ್ಯೆಯಾಗಿರುವುದು ಆಡಳಿತದಲ್ಲಿನ ಸಮಸ್ಯೆಗಳನ್ನು ಕೂಡ ಹೇಳುತ್ತಿದೆ. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಪಕ್ಷಗಳು ಆಡಳಿತಕ್ಕೆ ಬಂದಾಗ, ತಮ್ಮ ಪ್ರಾಬಲ್ಯ ತೋರಿಸಲು ಹಾಗೂ ವಿರೋಧಿಗಳನ್ನು ಹತ್ತಿಕ್ಕಲು ಹಿಂಸೆಯನ್ನು ಬಳಸಿಕೊಂಡ ನಿದರ್ಶನಗಳಿವೆ. ಅವೇ ಪಕ್ಷಗಳು ಕಾಲಕ್ರಮೇಣ ಆ ಹಿಂಸೆಯ ಸಂಸ್ಕೃತಿಯಲ್ಲಿ ಸಿಲುಕಿಕೊಂಡಿವೆ ಕೂಡ. ಈ ವರ್ತುಲದಿಂದ ಹೊಸ ಸರ್ಕಾರ ತನ್ನನ್ನು ಬಿಡಿಸಿಕೊಳ್ಳಬೇಕಾಗಿದೆ. ಉದ್ಯೋಗ ಸೃಷ್ಟಿ, ಕೈಗಾರಿಕೀಕರಣ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಅರ್ಥ ವ್ಯವಸ್ಥೆಯ ಸುಧಾರಣೆಯು ಸರ್ಕಾರದ ಮುಂದೆ ಇರುವ ಗಂಭೀರ ಸವಾಲುಗಳು. ಸುವೇಂದು ಅವರ ಸರ್ಕಾರಕ್ಕೆ ಕೇಂದ್ರದ ನೆರವು ಸಿಗುವುದು ಖಚಿತ. ಆದರೆ, ಹೊಸ ಸರ್ಕಾರವು ಬಹಳ ಬೇಗ ಕೆಲಸ ಮಾಡಿ ತೋರಿಸಬೇಕಿದೆ. ಆ ರಾಜ್ಯದ ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು ಸುಮಾರು ಶೇ 30ರಷ್ಟಿದ್ದು, ಒಳಗೊಳ್ಳುವ ಸಂಸ್ಕೃತಿಯ ಸ್ವರೂಪವನ್ನು ಸರ್ಕಾರ ಕಾಪಾಡಿಕೊಳ್ಳಬೇಕಿದೆ. ನೆರೆಯ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಂತೆಯೇ ಉಗ್ರ ಹಿಂದುತ್ವದ ನಿಲುವು, ಧ್ರುವೀಕರಣಕ್ಕೆ ದಾರಿ ಮಾಡಿಕೊಡುವ ಮಾತುಗಳ ಮೂಲಕವೇ ಸುವೇಂದು ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ವಿಭಜನಕಾರಿ ರಾಜಕೀಯ ಹಾಗೂ ಸಾಮಾಜಿಕ ಪರಿಸರದಲ್ಲಿ ಯಾವುದೇ ಪ್ರಜಾಪ್ರಭುತ್ವವಾದಿ ಸರ್ಕಾರ ಕೆಲಸ ಮಾಡಲು ಆಗುವುದಿಲ್ಲ, ಜನರ ಕಲ್ಯಾಣವನ್ನು ಖಾತರಿಪಡಿಸಲು ಕೂಡ ಆಗುವುದಿಲ್ಲ.

ಅಮ್ಮಂದಿರಿಗೆ ನಮನ

ಎಂತಹ ಆಗರ್ಭ ಶ್ರೀಮಂತರೇ ಆಗಿರಲಿ; ಒಂದಲ್ಲಾ ಒಂದು ದಿನ ಒಂದು ಹೊತ್ತಾದರೂ ಹಸಿವೆಯಿಂದ ಬಳಲಿರುತ್ತಾರೆ. ಆದರೆ, ತಾಯಿ ಗರ್ಭದಲ್ಲಿ ಇರುವಷ್ಟು ದಿನ ಹಸಿವು ಕಂಡಿರುವುದಿಲ್ಲ.

ಮಾಸ್ತಿ ಉಪ್ಪಾರಹಳ್ಳಿ, ಸಿನಿಮಾ ಸಂಭಾಷಣೆಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕಾಂಗ್ರೆಸ್‌ನ ಕಷ್ಟಕಾಲದಲ್ಲಿ ಡಿಎಂಕೆ ಅದರ ಜತೆಗಿತ್ತು. ಆದರೆ, ಈಗ ಅಧಿಕಾರದಲ್ಲಿ ಇಲ್ಲದ ಡಿಎಂಕೆ ಬೆನ್ನಿಗೆ ಕಾಂಗ್ರೆಸ್ ಚೂರಿ ಹಾಕಿದೆ. ಹೊಸ ಪಕ್ಷದ ಬೆನ್ನೇರಿದೆ. ಅದರ ಬೆನ್ನಿಗೂ ಕಾಂಗ್ರೆಸ್ ಚೂರಿ ಹಾಕುವ ಕಾಲ ದೂರವಿಲ್ಲ.

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಶುಕ್ರವಾರ, 11-5-2001

• **ಬಿಸಿಲಿನ ತಾಪಕ್ಕೆ ಓರ್ವನ ಬಲಿ**

ಬೀದರ್, ಮೇ 10– ಕಡುಬಿಸಿಲಿನ ತಾಪಕ್ಕೆ ಜಿಲ್ಲೆಯ ಬಸವಕಲ್ಯಾಣದಲ್ಲಿ ವ್ಯಕ್ತಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಪಟ್ಟಣದ ದೂರಸಂಪರ್ಕ ಇಲಾಖೆಯ ಉದ್ಯೋಗಿ ಶರಣಪ್ಪ ಸಾಗರ (35) ಮೃತಪಟ್ಟ ವ್ಯಕ್ತಿ. ಈತ ತಮ್ಮ ಮನೆ ಮಾಲೀಕರ ಮದುವೆ ನಿಮಿತ್ತ ಕಳೆದ ಎರಡು ಮೂರು ದಿನಗಳಿಂದ ಓಡಾಡಿದ್ದು, ನಿನ್ನೆ ಸಂಜೆ ಮನೆಯಲ್ಲಿ ನೀರು ಕುಡಿದಾಗ ಹಠಾತ್ತನೆ ಕುಸಿದು ಬಿದ್ದ ಎನ್ನಲಾಗಿದೆ.

ನೀರು ಕುಡಿದ ತಕ್ಷಣ ಅಸ್ವಸ್ಥಗೊಂಡ ಈತನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಬಿಸಿಲಿನ ತಾಪದಿಂದಲೇ ಸತ್ತಿರಬಹುದೆಂದು ವೈದ್ಯರು ಶಂಕಿಸಿದ್ದಾರೆ.

• **ಘಾನಾ ಫುಟ್‌ಬಾಲ್ ಕ್ರೀಡಾಂಗಣ ಭೀಕರ ದುರಂತ: 130 ಸಾವು**

ಅಕ್ರಾ, ಮೇ 10– ನಗರದ ಫುಟ್‌ಬಾಲ್ ಕ್ರೀಡಾಂಗಣವೊಂದರಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭೀಕರ ದುರಂತದಲ್ಲಿ 130 ಮಂದಿ ಸತ್ತಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮೂಲಗಳು ತಿಳಿಸಿವೆ.

ಈ ಮೊದಲು ದುರ್ಘಟನೆಯಲ್ಲಿ 120 ಮಂದಿ ಸತ್ತಿದ್ದಾರೆ ಎಂದು ಸ್ಥಳೀಯ ರೇಡಿಯೊ ವರದಿ ಮಾಡಿತ್ತು. ಆದರೆ, ವೈದ್ಯಕೀಯ ಮೂಲಗಳ ಪ್ರಕಾರ ಸತ್ತವರ ಸಂಖ್ಯೆ 130 ಆಗಿದೆ. ದಕ್ಷಿಣ ಆಫ್ರಿಕಾದ ಫುಟ್‌ಬಾಲ್ ಇತಿಹಾಸದಲ್ಲಿ ನಡೆದ ಘೋರ ದುರಂತ ಇದಾಗಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 11-5-1951

• **ಉತ್ತರ ಪ್ರದೇಶದ ಜಮೀನ್ದಾರಿ ರದ್ದಿನ ಶಾಸನ ನ್ಯಾಯಬದ್ಧ**

ಅಹಮದಾಬಾದ್, ಮೇ 10– 1951ರ ಉತ್ತರ ಪ್ರದೇಶದ ಜಮೀನ್ದಾರಿ ರದ್ದು ಮತ್ತು ಭೂಸುಧಾರಣಾ ಶಾಸನವು ಶಾಸನಬದ್ಧವೆಂದು ಅಲಹಾಬಾದ್ ಹೈಕೋರ್ಟ್ ಇಂದು ಘೋಷಿಸಿತು.

ಉತ್ತರ ಪ್ರದೇಶ ರಾಜ್ಯದ ಶಾಸನ ಸಭೆಗೆ ಈ ಶಾಸನಕ್ಕೆ ಅಂಗೀಕಾರ ಮುದ್ರೆಯೀಯಲು ಅಧಿಕಾರವಿದೆಯೆಂದೂ ಕೋರ್ಟು ಪ್ರತಿಪಾದಿಸಿತು.

ಉತ್ತರ ಪ್ರದೇಶದ ಜಮೀನ್ದಾರರು ಮೇಲ್ಕಂಡ ಶಾಸನದ ನ್ಯಾಯಬದ್ಧತೆಗೆ ಸವಾಲು ಹಾಕಿ ನೀಡಿದ ಎಲ್ಲ ಅರ್ಜಿಗಳನ್ನೂ ನ್ಯಾಯಾಧೀಶರು ತಳ್ಳಿ ಹಾಕಿದರು.

ದ್ವಿಭಾಷಾನೀತಿ: ದಾರಿ–ಜಾರಿ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು ಅಳವಡಿಸಬೇಕೆಂಬ ವಿಷಯವನ್ನು ಕುರಿತು ಚರ್ಚಿಸುವಾಗ ಮಾತೃಭಾಷಾ ಕಲಿಕೆಯ ಪ್ರಶ್ನೆಗೂ ಉತ್ತರಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ, ದ್ವಿಭಾಷಾ ನೀತಿಯ ಅನುಷ್ಠಾನದಲ್ಲಿ ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷೆಯ ವಿಷಯವೂ ತಳಕು ಹಾಕಿಕೊಳ್ಳುತ್ತದೆ. ನಮ್ಮಲ್ಲಿ ಕೆಲವರು ಶಿಕ್ಷಣದಲ್ಲಿ ರಾಜ್ಯಭಾಷೆ ಎಂದು ಮಾತ್ರ ನಮೂದಿಸಬೇಕೆಂದೂ, ಮಾತೃಭಾಷೆಯೆಂಬ ನಮೂದು ಇರಬಾರದೆಂದೂ ವಾದಿಸುತ್ತಿದ್ದಾರೆ. 'ಮಾತೃಭಾಷೆ ಎಂದು ನಮೂದಿಸಿದರೆ ತಂತಮ್ಮ ಮಾತೃಭಾಷೆಯನ್ನು ಕಲಿಸಿ ಎಂದು ಸಣ್ಣಪುಟ್ಟ ಸಂಖ್ಯೆಯ ಭಾಷಿಕರೆಲ್ಲ ಕೇಳುತ್ತಾರೆ, ಆಗ ಅವುಗಳ ಅಳವಡಿಕೆ ಹೇಗೆ ಸಾಧ್ಯ? ಆದ್ದರಿಂದ ರಾಜ್ಯಭಾಷೆ ಕಲಿಕೆ ಮತ್ತು ರಾಜ್ಯಭಾಷೆ ಶಿಕ್ಷಣ ಮಾಧ್ಯಮ ಎಂದು ಮಾತ್ರ ಇರಬೇಕು' ಎಂಬುದು ಇಂಥವರ ವಾದದ ಸಾರ. ಆದರೆ, ವಸ್ತುಸ್ಥಿತಿ ಬೇರೆಯೇ ಇದೆ. ಮೊದಲನೆಯದಾಗಿ, ರಾಜ್ಯದಲ್ಲಿರುವ ಎಲ್ಲ ಮಾತೃಭಾಷೆಗಳ ಬೋಧನೆ ಕಡ್ಡಾಯವಲ್ಲ. ಸರ್ಕಾರದ ಆದೇಶಗಳಲ್ಲಿ ಯಾವ್ಯಾವ ಮಾತೃಭಾಷೆಗಳನ್ನು ಬೋಧಿಸಲಾಗುವುದೆಂಬ ಪಟ್ಟಿಯನ್ನು ಮೊದಲೇ ಕೊಡಲಾಗುತ್ತದೆ. ಸಾಕ್ಷಿಗಾಗಿ, 1993ರ ಸುಪ್ರೀಂ ಕೋರ್ಟ್ ತೀರ್ಪಿಗನುಗುಣವಾಗಿ, ಅಲ್ಪಸಂಖ್ಯಾತರ ಭಾಷೆಗಳ ಕಲಿಕೆಗೆ ಅವಕಾಶ ಕಲ್ಪಿಸಿ, 1994ರ ಏಪ್ರಿಲ್ 30ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶ ಗಮನಿಸಬಹುದು.

ಎರಡನೆಯದಾಗಿ, ಭಾಷಿಕ ಅಲ್ಪಸಂಖ್ಯಾತರಿಗೆ ತಂತಮ್ಮ ಮಾತೃಭಾಷೆಗಳಲ್ಲಿ ಕಲಿಯುವ ಅವಕಾಶವನ್ನು ಸಂವಿಧಾನವೇ ಕಲ್ಪಿಸಿದ್ದು, ಅದನ್ನು ಉಲ್ಲಂಘಿಸಲಾಗುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನದ 29(1), 30(1) ಮತ್ತು 350ಎ ಪರಿಚ್ಛೇದಗಳನ್ನು ನೋಡಬಹುದು. 29(1) ಪರಿಚ್ಛೇದದ ಪ್ರಕಾರ, ಭಾರತದ ಯಾವುದೇ ರಾಜ್ಯದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ಭಾಷೆ, ಲಿಪಿ, ಸಂಸ್ಕೃತಿಯನ್ನು ಸಂರಕ್ಷಿಸಬೇಕು. 30(1)ನೇ ಪರಿಚ್ಛೇದದ ಪ್ರಕಾರ, ತಮ್ಮದೇ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ಆಡಳಿತ ನಡೆಸುವುದು ಅಲ್ಪಸಂಖ್ಯಾತರ ಹಕ್ಕು. 350ಎ ಪರಿಚ್ಛೇದದ ಪ್ರಕಾರ, ಪ್ರಾಥಮಿಕ ಹಂತದಲ್ಲಿ ಭಾಷಾ ಅಲ್ಪಸಂಖ್ಯಾತರ ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವುದಕ್ಕೆ ರಾಜ್ಯಗಳು ಅಗತ್ಯ ಸೌಲಭ್ಯ ಒದಗಿಸಬೇಕು. ಈ ನಿಟ್ಟಿನಲ್ಲಿ ರಾಷ್ಟ್ರಪತಿ ಅವರು ಅಗತ್ಯಬಿದ್ದಾಗ ನಿರ್ದೇಶನ ನೀಡಬಹುದು. ಸಂವಿಧಾನದಲ್ಲಿರುವ ಈ ಅಂಶಗಳ ಕಾರಣಕ್ಕಾಗಿ ಯಾವುದೇ ರಾಜ್ಯವು ತನ್ನ ಶಾಲಾ ಪಠ್ಯಕ್ರಮದಲ್ಲಿ ರಾಜ್ಯಭಾಷೆ ಅಥವಾ ಮಾತೃಭಾಷೆ ಎಂದು ಎರಡನ್ನೂ ನಮೂದಿಸಲೇಬೇಕಾಗುತ್ತದೆ. ಆದರೆ, ತಂತಮ್ಮ ಮಾತೃಭಾಷೆಯನ್ನು ಬಿಟ್ಟು ರಾಜ್ಯಭಾಷೆಯನ್ನು ಕಲಿಯುವ ಸ್ವಾತಂತ್ರ್ಯವು ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಇರುತ್ತದೆ.

ಮೂರನೆಯದಾಗಿ, ಭಾಷಾ ಅಲ್ಪಸಂಖ್ಯಾತರ ಮಾತೃಭಾಷಾ ಕಲಿಕೆಗೆ ಸಂವಿಧಾನವು ಅವಕಾಶ ಕಲ್ಪಿಸಿರುವುದರಿಂದಲೇ ಮಹಾರಾಷ್ಟ್ರ ಮತ್ತು ಕಾಸರಗೋಡಿನಲ್ಲಿ ಅನೇಕ ಕನ್ನಡ ಶಾಲೆಗಳು ಅಸ್ತಿತ್ವದಲ್ಲಿವೆ. ಆಂಧ್ರಪ್ರದೇಶ, ತಮಿಳುನಾಡು, ಮುಂತಾದ ರಾಜ್ಯಗಳಲ್ಲಿ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕೆಲವು ರಾಜ್ಯಗಳಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗಗಳಿವೆ.

ಅಲ್ಪಸಂಖ್ಯಾತರ ಮಾತೃಭಾಷೆಗಳಿಗೆ ಶಾಲಾ ಶಿಕ್ಷಣದಲ್ಲಿ ಸೂಕ್ತಸ್ಥಾನವಿಲ್ಲದಿದ್ದರೆ ಏನಾಗುತ್ತದೆ? ಈ ಪ್ರಶ್ನೆಗೆ ಉತ್ತರವಾಗಿ ಗೋಕಾಕ್ ವರದಿಯನುಸಾರ ಕನ್ನಡವೊಂದನ್ನೇ ಪ್ರಥಮ ಭಾಷೆಯನ್ನಾಗಿ ಕಡ್ಡಾಯ ಮಾಡಿ, ರಾಜ್ಯ ಸರ್ಕಾರವು ಹೊರಡಿಸಿದ್ದ 20.7.1982ರ ಆದೇಶವನ್ನು ಕರ್ನಾಟಕದ ಹೈಕೋರ್ಟ್ ರದ್ದುಮಾಡಿದ ತೀರ್ಪನ್ನು ಉಲ್ಲೇಖಿಸಬಹುದು. ಸಂವಿಧಾನದ 14, 29(1) ಮತ್ತು 30(1) ಪರಿಚ್ಛೇದಗಳನ್ನು ಉಲ್ಲೇಖಿಸಿ ನ್ಯಾಯಾಲಯವು ಸರ್ಕಾರದ ಆದೇಶವನ್ನು ರದ್ದುಮಾಡಿದ್ದರ ಪರಿಣಾಮದಿಂದ 19.6.1989ರಲ್ಲಿ ರಾಜ್ಯ ಸರ್ಕಾರವು ಗಣನೀಯ ಸಂಖ್ಯೆಯುಳ್ಳ ಅಲ್ಪಸಂಖ್ಯಾತರ ಮಾತೃಭಾಷೆಗಳನ್ನು ಪ್ರಥಮಭಾಷಾ ಪಟ್ಟಿಗೆ ಸೇರಿಸಿ ಹೊಸ ಆದೇಶ ಹೊರಡಿಸಬೇಕಾಯಿತು.

> ಶಿಕ್ಷಣದಲ್ಲಿ ದ್ವಿಭಾಷಾ ನೀತಿಗೆ ಸಂಬಂಧಿಸಿದಂತೆ ದೊಡ್ಡ ಚರಿತ್ರೆಯೇ ಇದೆ. ಅದರ ಅರಿವಿನೊಂದಿಗೆ, ಸಂವಿಧಾನ ಹಾಗೂ ನ್ಯಾಯಾಲಯದ ತೀರ್ಪುಗಳ ಅಧ್ಯಯನದ ಮೂಲಕ ಕಾನೂನು ತೊಡಕು ಉಂಟಾಗದಂತೆ ನಮ್ಮ 'ದ್ವಿಭಾಷಾನೀತಿ'ಯನ್ನು ರೂಪಿಸಿಕೊಳ್ಳಬೇಕಾಗಿದೆ.

ನ್ಯಾಯಾಲಯದ ಆದೇಶಗಳು ಹೀಗಿರುವಾಗ, ತಮಿಳುನಾಡಿನಲ್ಲಿ ದ್ವಿಭಾಷಾ ನೀತಿ ಹೇಗೆ ಜಾರಿಯಾಯಿತು? ಕರ್ನಾಟಕದಲ್ಲಿ ದ್ವಿಭಾಷಾ ನೀತಿಗಾಗಿ ಒತ್ತಾಯಿಸುತ್ತಿರುವ ಅನೇಕರು ತಮಿಳುನಾಡನ್ನೇ ನಿದರ್ಶನವಾಗಿ ನೀಡುತ್ತಿರುವುದರಿಂದ ಈ ಪ್ರಶ್ನೆ ಮುಖ್ಯವಾಗುತ್ತದೆ. ಕೇಂದ್ರ ಸರ್ಕಾರವು ಹಿಂದಿ ಪರವಾದ ಪರಿಷ್ಕೃತ ನಿರ್ಣಯವನ್ನು 8.1.1968ರಲ್ಲಿ ರೂಪಿಸಿತು. ಯಥಾಪ್ರಕಾರ ಹಿಂದಿಗೂ ಆದ್ಯತೆ ನೀಡಲಾಗಿತ್ತು. ಇದಕ್ಕೆ ಪ್ರತಿರೋಧಾತ್ಮಕವಾಗಿ ತಮಿಳುನಾಡು ಸರ್ಕಾರವು 1968ರ ಜನವರಿ 23ರಂದು ವಿಧಾನಮಂಡಲದಲ್ಲಿ ದ್ವಿಭಾಷಾ ಬಳಕೆಯ ನಿರ್ಣಯವನ್ನು ಕೈಗೊಂಡಿತು. 1953 ಮತ್ತು 1963ರ ಮದ್ರಾಸ್ ಅಧಿಕೃತ ಭಾಷಾ ಅಧಿನಿಯಮದ ಪ್ರಕಾರ ರಾಜ್ಯವು ಶಿಕ್ಷಣ ಮತ್ತು ಆಡಳಿತದಲ್ಲಿ ತನ್ನದೇ ಭಾಷಾನೀತಿಯನ್ನು ರೂಪಿಸಲು ಅಧಿಕಾರವಿದ್ದು, ಆ ಪ್ರಕಾರ, ದ್ವಿಭಾಷಾ ನೀತಿಗೆ ಅಧಿನಿಯಮದ ರೂಪ ಕೊಡಲಾಯಿತು. ಈ ಅಧಿನಿಯಮದ ಪ್ರಕಾರ ತಮಿಳುನಾಡಿನ ಆಡಳಿತದಲ್ಲಿ ತಮಿಳಿಗೆ ಆದ್ಯತೆ. ಅಗತ್ಯವಿದ್ದಾಗ ಇಂಗ್ಲಿಷ್ ಬಳಕೆ. ಹಿಂದಿಗೆ ಸ್ಥಾನವಿಲ್ಲ. ಶಿಕ್ಷಣದಲ್ಲಿ ಮೊದಲ ಭಾಷೆಯಾಗಿ ತಮಿಳು ಮತ್ತು ಎರಡನೇ ಭಾಷೆಯಾಗಿ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡಲಾಯಿತು. ಹಾಗಾದರೆ, ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷೆಗಳಿಗೆ ಯಾವ ಸ್ಥಾನ? ಮೂರನೇ ಭಾಷೆಯಾಗಿ ಕನ್ನಡವನ್ನೂ ಒಳಗೊಂಡಂತೆ ತೆಲುಗು, ಮಲಯಾಳ, ಹಿಂದಿ, ಸಂಸ್ಕೃತ, ಗುಜರಾತಿ ಮುಂತಾದ ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷೆಗಳ ಬೋಧನೆಗೆ ಅವಕಾಶ ಕಲ್ಪಿಸಿ ಕಲಿಕೆಯೇ 'ಐಚ್ಛಿಕ'ವೆಂದು ಅಧಿನಿಯಮದಲ್ಲಿ ತಿಳಿಸಲಾಯಿತು. ಕಲಿಕೆಯೇ ಐಚ್ಛಿಕವಾದ್ದರಿಂದ ಈ ಭಾಷೆಗಳಿಗೆ ಪರೀಕ್ಷೆ ಇರುವುದಿಲ್ಲ. ಆಗ ಕೆಲಸ ಕಳೆದುಕೊಳ್ಳುತ್ತಿದ್ದ ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಒಟ್ಟು 4,000 ಅಧ್ಯಾಪಕರನ್ನು 2,400 ಶಾಲೆಗಳಲ್ಲಿ ಬೇರೆ ಪಠ್ಯ ವಿಷಯ ಬೋಧನೆಗೆ ನೇಮಿಸಲಾಯಿತು.

ಸರ್ಕಾರದ ಈ ಅಧಿನಿಯಮಕ್ಕೆ ಗುರುತರ ಪ್ರತಿರೋಧ ಎದುರಾಗದಿದ್ದರೂ ದ್ವಿಭಾಷಾ ನೀತಿಯ ವಿಷಯ ಇಷ್ಟಕ್ಕೇ ನಿಲ್ಲಲಿಲ್ಲ. ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. 1994ರ ಏಪ್ರಿಲ್ 21ರಂದು ತಮಿಳುನಾಡಿನ ಹೈಕೋರ್ಟ್, ರಾಜ್ಯ ಸರ್ಕಾರದ ಅಧಿನಿಯಮವನ್ನು ಊರ್ಜಿತಗೊಳಿಸಿ ಆದೇಶ ಮಾಡಿತು. ಆದರೆ, ಖಾಸಗಿ ಮತ್ತು ಭಾಷಿಕ ಅಲ್ಪಸಂಖ್ಯಾತರ ಶಾಲೆಗಳಲ್ಲೂ ತಮಿಳು ಭಾಷಾಕಲಿಕೆಯನ್ನು ಕಡ್ಡಾಯಗೊಳಿಸಿದ್ದನ್ನು ಕುರಿತ ಪ್ರಶ್ನೆ ಜೀವಂತವಾಗಿತ್ತು. ಬಹುಶಃ ಈ ಕಾರಣದಿಂದ ತಮಿಳುನಾಡು ಸರ್ಕಾರವು 2006ರ ಜೂನ್ 12ರಂದು 'ಕಡ್ಡಾಯ ತಮಿಳು ಕಲಿಕಾ ಅಧಿನಿಯಮ'ವನ್ನು ಜಾರಿಗೆ ತಂದಿತು. 10ನೇ ತರಗತಿಯವರೆಗೆ 'ಎಲ್ಲಾ ಮಾದರಿಯ ಶಾಲೆಗಳಲ್ಲೂ' ತಮಿಳು ಕಲಿಕೆಯನ್ನು ಕಡ್ಡಾಯ ಮಾಡಿ, 1968ರ ದ್ವಿಭಾಷಾ ನೀತಿಯನ್ನು ಮುಂದುವರಿಸಿತು.

ಕಾನೂನು ಹೋರಾಟ ಇಷ್ಟಕ್ಕೇ ನಿಲ್ಲಲಿಲ್ಲ. ಭಾಷಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು 'ತಮಿಳುನಾಡು ಭಾಷಿಕ ಅಲ್ಪಸಂಖ್ಯಾತರ ವೇದಿಕೆ' ವತಿಯಿಂದ ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಅದು ಸುಪ್ರೀಂ ಕೋರ್ಟ್‌ವರೆಗೂ ಹೋಗಿ, 2023ರ ಸೆಪ್ಟೆಂಬರ್ 21ರಂದು ತೀರ್ಪು ನೀಡಲಾಯಿತು. ತಮಿಳು ಮತ್ತು ಇಂಗ್ಲಿಷ್ ಕಡ್ಡಾಯ ಕಲಿಕೆಯ ಆಶಯವು ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷಾ ಕಲಿಕೆಗೂ ವಿಸ್ತಾರವಾಗುವ ಅಗತ್ಯವಿದೆಯೆಂದೂ ಅಲ್ಪಸಂಖ್ಯಾತರ ಭಾಷೆಗಳ ಕಡ್ಡಾಯ ಕಲಿಕೆ, ಪರೀಕ್ಷೆ ಮತ್ತು ಅಂಕ ನಮೂದು ಅಗತ್ಯವೆಂದೂ ಈ ತೀರ್ಪು ಆದೇಶಿಸಿತು. ಭಾಷಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಅವರ ಮಾತೃಭಾಷಾ ಮಾಧ್ಯಮಕ್ಕೂ ಅವಕಾಶವಿರಬೇಕೆಂದು ತಿಳಿಸಿತು. ಈ ತೀರ್ಪನ್ನು ಅನುಸರಿಸಿ ತಮಿಳುನಾಡು ಸರ್ಕಾರವು 2024–25ರ ವಾರ್ಷಿಕದಿಂದ ಅನ್ವಯವಾಗುವಂತೆ ಹೊಸ ಆದೇಶವನ್ನು ಹೊರಡಿಸಿತು. ಈ ಆದೇಶದ ಪ್ರಕಾರ, ಮೊದಲನೇ ಭಾಷೆಯಾಗಿ ತಮಿಳು, ಎರಡನೇ ಭಾಷೆಯಾಗಿ ಇಂಗ್ಲಿಷ್ ಎಂದಿನಂತೆ ಕಡ್ಡಾಯ. ಅಲ್ಪಸಂಖ್ಯಾತರ ಮಾತೃಭಾಷಾ ಪಟ್ಟಿಯುಳ್ಳ ಮೂರನೇ ಭಾಷೆಯ ಕಲಿಕೆಯು ಭಾಷಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಕಡ್ಡಾಯ. ಇತರೆ ಎಲ್ಲಾ ಶಾಲೆಗಳಲ್ಲಿ ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷೆಗಳ ಕಲಿಕೆಯು ಹಿಂದಿನಂತೆಯೇ 'ಐಚ್ಛಿಕ'. ಭಾಷೆಗಳ ಜೊತೆಗೆ ವಿಜ್ಞಾನ, ಸಮಾಜಶಾಸ್ತ್ರ, ಗಣಿತ ಸೇರಿ ಭಾಷಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ 600 ಅಂಕಗಳಿಗೆ ಕಲಿಕೆ ಮತ್ತು ಪರೀಕ್ಷೆ. ಇತರೆ ಶಾಲೆಗಳಲ್ಲಿ ಮೂರನೇ ಭಾಷೆ ಐಚ್ಛಿಕವಾದ್ದರಿಂದ ಪರೀಕ್ಷೆಗೆ ಪರಿಗಣಿಸುವುದಿಲ್ಲ. 500 ಅಂಕಗಳಿಗೆ ಮಾತ್ರ ಕಡ್ಡಾಯ ಕಲಿಕೆ ಮತ್ತು ಪರೀಕ್ಷೆ. ಈ ವ್ಯತ್ಯಾಸದೊಂದಿಗೆ ದ್ವಿಭಾಷಾ ನೀತಿ ಅನುಷ್ಠಾನದಲ್ಲಿದೆ.

ರಾಷ್ಟ್ರೀಯ ಶಿಕ್ಷಣನೀತಿಯನ್ನು ತಮಿಳುನಾಡು ಸರ್ಕಾರವು ಜಾರಿ ಮಾಡುವಂತೆ ನಿರ್ದೇಶನ ನೀಡಬೇಕೆಂದು ಮಣಿ ಎನ್ನುವವರು, ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದಾಗ 2025ರ ಮೇ 9ರಂದು 'ರಾಜ್ಯಗಳು ಜಾರಿ ಮಾಡಲೇಬೇಕೆಂದು ಒತ್ತಾಯಿಸಲಾಗದು' ಎಂದು ಸುಪ್ರೀಂ ಕೋರ್ಟ್ ಹೇಳಿದ್ದು ಉಲ್ಲೇಖನೀಯ. ಅಲ್ಲದೆ, ದ್ವಿಭಾಷೆಗೆ ಬದಲು ತ್ರಿಭಾಷಾ ನೀತಿಯುಳ್ಳ ಕೇಂದ್ರದ ನವೋದಯ ಶಾಲೆಗಳ ಪ್ರವೇಶಕ್ಕೆ ತಮಿಳುನಾಡು ಸರ್ಕಾರವು ಇಲ್ಲಿಯವರೆಗೆ ಅವಕಾಶ ಕೊಟ್ಟಿಲ್ಲದಿರುವ ಬಗ್ಗೆ, ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆ ನಡೆದು, ಇನ್ನೂ ಅಂತಿಮ ತೀರ್ಪು ಬಂದಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕು.

ದ್ವಿಭಾಷಾ ನೀತಿ ಕುರಿತಂತೆ ಇಷ್ಟೆಲ್ಲ 'ಇತಿಹಾಸ'ವನ್ನು ತಿಳಿಸಿದ ಉದ್ದೇಶ ಇಷ್ಟೇ: ಸಂವಿಧಾನ ಮತ್ತು ನ್ಯಾಯಾಲಯಗಳ ತೀರ್ಪುಗಳ ಅಧ್ಯಯನದ ಮೂಲಕ ಕಾನೂನಿನ ಸರಿದಾರಿಯನ್ನು ಕಂಡುಕೊಂಡು, ತಡೆಯಾಜ್ಞೆಯ ತೊಡಕುಗಳಿಗೆ ಅವಕಾಶವಾಗದಂತೆ ನಮ್ಮ ರಾಜ್ಯದಲ್ಲಿ ದ್ವಿಭಾಷಾ ನೀತಿ ರೂಪುಗೊಳ್ಳಬೇಕು, ಜಾರಿಯಾಗಬೇಕು.

ವಾಚಕರ ವಾಣಿ

ಎಲ್ಲರೂ ಸಮಾನರಲ್ಲ! ಸ್ವಾಮೀಜಿಗಳೂ...

ಚಿತ್ರದುರ್ಗದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಸಣ್ಣ, ದೊಡ್ಡ ಜಾತಿಯ ಹಲವು ಮಠಾಧೀಶರು ಭಾಗವಹಿಸಿದ್ದು, ಅವರವರ ಅಂತಸ್ತಿಗೆ ತಕ್ಕಂತೆ ಆಸನದ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ಛಲವಾದಿ ಪೀಠದ ಬಸವನಾಗಿದೇವ ಸ್ವಾಮೀಜಿ ಹಾಗೂ ಪ್ರಣವಕುಮಾರ ಸ್ವಾಮೀಜಿ– ತಮ್ಮನ್ನು ಮುಖ್ಯ ವೇದಿಕೆಗೆ ಹತ್ತಿಸದೆ ಅವಮಾನ ಮಾಡಲಾಯಿತೆಂದು ಅಸಮಾಧಾನ ತೋಡಿಕೊಂಡಿದ್ದಾರೆ. ಶ್ರೇಣೀಕೃತ ಜಾತಿವ್ಯವಸ್ಥೆಯ ಸಾವಿರಾರು ವರ್ಷಗಳ ಶಾಪ ಪರಿಹಾರವಾಗಿಲ್ಲ ಎನ್ನುವುದಕ್ಕೆ ಈ ಸ್ವಾಮೀಜಿಗಳು ರೂಪಕದಂತೆ ಕಾಣಿಸುತ್ತಾರೆ. ಮೊದಲನೆಯದಾಗಿ, ಸ್ವಾಮೀಜಿಗಳಿಗೆ ತಮ್ಮ ಚಿಂತಾಜನಕ ಅಂತಸ್ತಿನ ಅರಿವಿದ್ದಿದ್ದರೆ ಆ ಸ್ಥಳಕ್ಕೆ ಹೋಗುತ್ತಲೇ ಇರಲಿಲ್ಲ. ಆದರೆ, ಮಾಯಾಲೋಕದಂತಿರುವ ಅದ್ದೂರಿ ರಾಜಕಾರಣದ ಸೆಳೆತ ಸ್ವಾಮಿಗಳನ್ನೂ ಬಿಟ್ಟಿಲ್ಲ. ಭಾರತ ಒಕ್ಕೂಟದಲ್ಲಿ ಎಲ್ಲ ಜಾತಿಗಳವರೂ ಸಮಾನರು ಅನ್ನುವುದೇ ಬಹುದೊಡ್ಡ ವ್ಯಂಗ್ಯ. ಅಸಮಾನತೆ, ಜಾತಿ ತಾರತಮ್ಯ ಕಣ್ಣಿಗೆ ರಾಚುತ್ತಿರುವಾಗಲೇ ಜಾಣಕುರುಡರಂತೆ ವರ್ತಿಸುವ ಬಸವನಾಗಿದೇವರಂತಹ ಸ್ವಾಮೀಜಿಯವರು ಬಸವಣ್ಣ, ಆತ ಕಟ್ಟಿದ ಅಪೂರ್ವ ಚಳವಳಿ, ಅದರ ಗುರಿಯನ್ನು ಆಳವಾಗಿ ಅರಿಯಬೇಕಿದೆ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಸೂರ್ಯಕಾಂತಿಗೆ ಸುಸ್ಥಿರ ಬೆಂಬಲ ಬೇಕು

ಸರ್ಕಾರವು ಸೂರ್ಯಕಾಂತಿ ಬೀಜಕ್ಕೆ ಪ್ರತಿ ಕ್ವಿಂಟಲ್‌ಗೆ ₹7,721 ಬೆಂಬಲ ಬೆಲೆ ಘೋಷಿಸಿದೆ. ಆದರೆ, ಖರೀದಿ ಕೇಂದ್ರ ತೆರೆಯುವುದರಿಂದಷ್ಟೇ ರೈತರ ಸಂಕಷ್ಟ ನೀಗದು. ಪ್ರಸ್ತುತ ಮಾರುಕಟ್ಟೆಯಲ್ಲಿ ಬೆಲೆಯು ₹4,500ರ ಆಸುಪಾಸಿನಲ್ಲಿದೆ. ಮುಕ್ತ ಮಾರುಕಟ್ಟೆ ಮತ್ತು ಬೆಂಬಲ ಬೆಲೆ ನಡುವಿನ ಈ ಭಾರೀ ವ್ಯತ್ಯಾಸವು ರೈತರನ್ನು ಆರ್ಥಿಕವಾಗಿ ಹೈರಾಣಾಗಿಸಿದೆ. ಕೇವಲ ಹತ್ತು ಸಾವಿರ ಕ್ವಿಂಟಲ್ ಸಂಗ್ರಹದ ಗುರಿ ರಾಜ್ಯದ ಒಟ್ಟು ಇಳುವರಿಗೆ ಹೋಲಿಸಿದರೆ ಅತ್ಯಲ್ಪ. ಕನಿಷ್ಠ ಪಕ್ಷ ಇಳುವರಿಯ ಶೇ 50ರಷ್ಟನ್ನಾದರೂ ನೇರವಾಗಿ ಖರೀದಿಸಬೇಕು. ಕಾಲಮಿತಿಯಲ್ಲಿ ನೇರ ನಗದು ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಸರ್ಕಾರಿ ಶಾಲೆಗಳ ಅನಾದರ ಬೇಡ

ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರವು ಗಮನ ಹರಿಸಬೇಕಿದೆ. ಈ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಡಿಜಿಟಲ್ ಕಲಿಕೆ, ಕ್ರೀಡೆ ಮತ್ತು ಮೂಲಸೌಲಭ್ಯದ ಕೊರತೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಡ್ಡಿಯಾಗುತ್ತಿದೆ. ನಗರ ಪ್ರದೇಶದ ಮಕ್ಕಳಿಗೆ ಸಿಗುವ ಅವಕಾಶಗಳು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲ. ಇದರಿಂದ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅವರು ಹಿಂದುಳಿಯುತ್ತಿದ್ದಾರೆ. ಸರ್ಕಾರ ಮತ್ತು ಜನಪ್ರತಿನಿಧಿಗಳು, ನಾಗರಿಕರು ಸೇರಿ ಗ್ರಾಮೀಣ ಶಾಲೆಗಳ ಬಲವರ್ಧನೆಗೆ ಮುಂದಾಗಬೇಕು. ಶಾಲೆಗಳಲ್ಲಿ ಉತ್ತಮ ಶಿಕ್ಷಕರ ನೇಮಕ, ಸ್ಪೋಕನ್ ಇಂಗ್ಲಿಷ್ ಹಾಗೂ ಕಂಪ್ಯೂಟರ್ ಶಿಕ್ಷಣಕ್ಕೆ ಹೆಚ್ಚಿನ ಒತ್ತು, ಗ್ರಂಥಾಲಯ ಮತ್ತು ಪ್ರಯೋಗಾಲಯಗಳ ವ್ಯವಸ್ಥೆ ಮಾಡಬೇಕಿದೆ. ಜೊತೆಗೆ, ಪೋಷಕರೂ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿವಹಿಸಬೇಕು.

ಶಿವಯೋಗಿ ಎಂ.ವಿ., ರಾಂಪುರ

ಇತಿಹಾಸ ಸೃಷ್ಟಿಸಿದ 'ದಳಪತಿ' ವಿಜಯ್

ನಟ ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಯಶಸ್ಸು ಸಾಧಿಸಿದೆ. ಮುಖ್ಯಮಂತ್ರಿಯಾಗಿ 'ದಳಪತಿ' ಪದಗ್ರಹಣ ಮಾಡಿದ್ದಾರೆ. ಸುಮಾರು 60 ವರ್ಷಗಳಿಂದ ಅಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ನಡುವೆ ಇದ್ದ ಅಧಿಕಾರದ ಪೈಪೋಟಿಯನ್ನು ಮುರಿದು, ಯುವಪೀಳಿಗೆಯ ಹೊಸಶಕ್ತಿಯಾಗಿ ಅವರು ಅಧಿಕಾರಕ್ಕೆ ಬಂದಿದ್ದಾರೆ. 1967ರ ನಂತರ ಈ ಎರಡು ಪ್ರಮುಖ ದ್ರಾವಿಡ ಪಕ್ಷಗಳ ಹೊರತಾಗಿ ಮುಖ್ಯಮಂತ್ರಿಯಾದ ಮೊದಲ ವ್ಯಕ್ತಿ ವಿಜಯ್ ಆಗಿದ್ದಾರೆ. ಜೊತೆಗೆ ತಮಿಳುನಾಡು ವಿಧಾನಸಭೆಯ ಇತಿಹಾಸದಲ್ಲಿ 1952ರಿಂದ ಇದುವರೆಗೆ ಒಮ್ಮೆಯೂ ಅಧಿಕೃತವಾಗಿ 'ಸಮ್ಮಿಶ್ರ ಸರ್ಕಾರ' ಅಸ್ತಿತ್ವಕ್ಕೆ ಬಂದಿಲ್ಲ. ಈಗ ಕಾಂಗ್ರೆಸ್ ಮತ್ತು ಇತರ ಸಣ್ಣ ಪಕ್ಷಗಳ ಜೊತೆಗೆ ಸೇರಿ ಸರ್ಕಾರ ರಚಿಸಿರುವ ಅವರು ತಮಿಳುನಾಡಿನ ಮೊದಲ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಆಗಿದ್ದಾರೆ. ಅವರ ಈ ಗೆಲುವು ದೇಶದ ಇತಿಹಾಸದ ಪುಟ ಸೇರಿದೆ.

ಬಸವರಾಜ ನರಗಟ್ಟಿ, ಬೆಳಗಾವಿ

ವಾಲಿದ ತಕ್ಕಡಿ; ಹಕ್ಕು ವಂಚಿತ ಮತದಾರ

ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಹೆಸರನ್ನು ಯಾವುದೇ ಸ್ಪಷ್ಟ ಕಾರಣವಿಲ್ಲದೆ ಮತದಾರರ ಪಟ್ಟಿಯಿಂದ ತೆಗೆದುಹಾಕಿದ ಪರಿಣಾಮ ಈಗ ಗೋಚರಿಸುತ್ತಿದೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆ. ಮತದಾನದ ಹಕ್ಕು ಪ್ರಜಾಪ್ರಭುತ್ವದ ತಳಹದಿ. ಅದು ನಾಗರಿಕರ ಹಕ್ಕಷ್ಟೇ ಅಲ್ಲ, ಪ್ರಜಾಪ್ರಭುತ್ವದ ಜೀವಾಳ. ಚುನಾವಣೆಯ ಸಂದರ್ಭದಲ್ಲಿ ನಾಗರಿಕರನ್ನು ಮತಹಕ್ಕಿನಿಂದ ವಂಚಿಸಿದ ಬಳಿಕ, 'ನಿಮ್ಮ ಹಕ್ಕನ್ನು ಶಾಶ್ವತವಾಗಿ ಕಸಿದುಕೊಂಡಿಲ್ಲ' ಎಂಬ ತೀರ್ಪು ಸಾರ್ವಜನಿಕರಲ್ಲಿ ನ್ಯಾಯಾಂಗದ ಮೇಲಿನ ವಿಶ್ವಾಸಕ್ಕೆ ಧಕ್ಕೆ ಉಂಟುಮಾಡಬಹುದು.

'ಮುಂದಿನ ಬಾರಿ ಮತ ಹಾಕಬಹುದು' ಎಂಬ ಸಮರ್ಥನೆಯು ಈಗಾಗಲೇ ಹಕ್ಕು ಕಳೆದುಕೊಂಡ ಮತದಾರರ ನೋವನ್ನು ತಗ್ಗಿಸಲಾರದು. ಒಂದು ಚುನಾವಣೆಯಲ್ಲಿ ಮತ ಚಲಾಯಿಸುವ ಅವಕಾಶ ಕಳೆದುಹೋದರೆ, ಮುಂದಿನ ಬಾರಿ ಅವಕಾಶ ಸಿಗುವವರೆಗೂ ಅದು ಹಕ್ಕಿನ ವಂಚನೆಯಾಗಿಯೇ ಉಳಿಯುತ್ತದೆ ಹಾಗೂ ಅದನ್ನು ಸರಿಪಡಿಸುವ ಅವಕಾಶ ಇಲ್ಲವಾಗುತ್ತದೆ. ನ್ಯಾಯಾಂಗ ಹಾಗೂ ಚುನಾವಣಾ ವ್ಯವಸ್ಥೆಯ ಮೇಲೆ ಜನರು ಇಟ್ಟಿರುವ ವಿಶ್ವಾಸವು ಉಳಿಯಬೇಕಾದರೆ, ಮತದಾರರ ಹಕ್ಕುಗಳನ್ನು ಅತ್ಯಂತ ಜಾಗರೂಕತೆಯಿಂದ ರಕ್ಷಿಸಬೇಕು. ಇಲ್ಲವಾದರೆ ಪ್ರಜಾಪ್ರಭುತ್ವದ ಅಸ್ತಿತ್ವವೇ ದುರ್ಬಲವಾಗುವ, ಸಂವಿಧಾನದ ಆಶಯಗಳು ಮೂಲೆಗುಂಪಾಗುವ ಅಪಾಯ ಇದೆ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಚುರುಮುರಿ

ಕಮಲ ಪುರಾಣ

• ಸುಮಂಗಲಾ

ಬೆಕ್ಕಣ್ಣ ಪೇಪರು ಹಿಡಿದು ಭಾರೀ ಆಸಕ್ತಿಯಿಂದ ಓದುತ್ತಿತ್ತು.

'ಮೈಸೂರಿನಾಗೆ ಬಸ್ ನಿಲ್ದಾಣದ ಫುಟ್‌ಪಾತ್ ಬದಿಯಲ್ಲಿ ಮಂದಿ ನಿಂತು ಮೂತ್ರ ಮಾಡತಿದ್ದರಂತೆ, ಪಾನ್ ತಿಂದು ಉಗಿತಿದ್ದರಂತೆ. ದಂಡಕ್ಕೂ ಬಗ್ಗದವರಿಗೆ ಪಾಠ ಕಲಿಸಬೇಕಂತ ಈಗ ಸ್ಟೀಲ್ ಕನ್ನಡಿಯ ತಡೆಗೋಡೆ ಮಾಡ್ಯಾರಂತೆ. ಈ ಕಡೆ ನಿಂತು ಗಲೀಜು ಮಾಡಿದ್ರೆ ಆ ಕಡೆವ್ರಿಗೂ ಕಾಣಿಸತೈತಿ ಅಂತ ಈಗ ಮಂದಿ ಗಲೀಜು ಮಾಡೂದು ಬಿಟ್ಟಾರಂತೆ' ಎಂದು ಬೆಕ್ಕಣ್ಣ ಭಾರೀ ಉಮೇದಿನಿಂದ ನನಗೂ ಸುದ್ದಿಯನ್ನು ಓದಿ ಹೇಳಿತು.

'ಹೌದು ನೋಡು... ಸರ್ಕಾರಿ ಆಫೀಸಿನ ಗೋಡೆಗಳೂ ಹಿಂಗೆ ಇರಬೇಕು... ಒಳಗಡೆ ಲಂಚ ತಗಂಡಿದ್ದು ಹೊರಗಿನವ್ರಿಗೆ ಕಾಣೂ ಹಂಗ. ಆವಾಗಾದ್ರೂ ಲಂಚ ತಗಳೂದು ಕಡಿಮಿ ಆಗಬೌದು' ಎಂದೆ.

'ಭ್ರಷ್ಟಾಚಾರದ ಕೈ ಎಲ್ಲಿ ಇರತೈತಿ ಅಲ್ಲಷ್ಟೇ ಬೇಕು. ಎಲ್ಲಾ ರಾಜ್ಯಗಳ ಸರ್ಕಾರಿ ಆಫೀಸಿಗೆ ಅಗತ್ಯ ಇಲ್ಲ' ಎಂದು ಬೆಕ್ಕಣ್ಣ ಮುಗುಮ್ಮಾಗಿ ಹೇಳಿತು.

'ಭ್ರಷ್ಟಾಚಾರದ ಕೈ ಎಲ್ಲಾ ಕಡಿಗಿ ಉದ್ದಕ್ಕೆ ಚಾಚೈತಿ... ಯಾವ ರಾಜ್ಯ ಬಿಟ್ಟೈತಿ' ಎಂದೆ ಸಿಟ್ಟಿನಿಂದ.

'ಈಗ ಮೋದಿಮಾಮಾರು ಒಟ್ಟು ಒಂಬತ್ತು ರಾಜ್ಯಗಳಲ್ಲಿ ನವಕಮಲಗಳನ್ನು ಅರಳಿಸ್ಯಾರೆ. ಆ ರಾಜ್ಯಗಳಲ್ಲಿ ಸರ್ಕಾರಿ ಆಫೀಸುಗಳಿಗೆ ಈ ಥರಾ ಸ್ಟೀಲ್ ಗೋಡೆ ಬ್ಯಾಡ... ಅಲ್ಲಿ ಎಲ್ಲ ಸಾಫ್, ಸ್ವಚ್ಛ, ಸುಂದರ... ಭ್ರಷ್ಟಾಚಾರ ಮುಕ್ತ' ಎಂದು ನಕ್ಕಿತು.

'ಕಮಲ ಅರಳೂದೆ ಕೆಸರು ನೀರಿನಲ್ಲಿ ಅನ್ನೂದನ್ನು ಮರೀಬ್ಯಾಡ'.

'ಸುತ್ತ ಕೆಸರಿದ್ದರೂ ಕಮಲದ ಎಲೆಗಾಗಲೀ ಕಮಲಕ್ಕಾಗಲೀ ಕೆಸರು ಅಂಟಂಗಿಲ್ಲ' ಬೆಕ್ಕಣ್ಣ ವಾದಿಸಿತು.

'ನಮ್ಮ ಪಕ್ಕದ ರಾಜ್ಯದಾಗೆ ಸೀಟಿ ಸದ್ದಿನೊಳಗೆ ಕಮಲದ ಹೂ ಬಾಡಿ ಹೋಗೈತೆ ಅನ್ನೂದನ್ನು ಮರೀಬ್ಯಾಡ' ಎಂದು ನಾನು ಕಿಚಾಯಿಸಿದೆ.

'ಸೀಟಿ ಎಷ್ಟು ಸದ್ದು ಮಾಡಿದರೇನು... ಸ್ಕ್ರಿಪ್ಟ್ ಅನ್ನೇ ಬದಲಿಸಿ, ಹೀರೊ ಕಿವಿಗೂ ಬೇಕಾದರೆ ಕಮಲದ ಹೂ ಇಡಿಸ್ತಾರೆ ನಮ್ ಮೋದಿಮಾಮಾ' ಎಂದು ಬೆಕ್ಕಣ್ಣ ಮೀಸೆ ತಿರುವಿತು.

ಸಂಗತ

ಬಕಾಸುರ ದಾಹದ ಡೇಟಾ ಸೆಂಟರ್ ಬೇಕೆ?

ರಾಜ್ಯದಲ್ಲಿ 'ಎಐ' ತಂತ್ರಜ್ಞಾನದ ಭಾಗವಾದ ಡೇಟಾ ಸೆಂಟರ್‌ಗಳ ನಿರ್ಮಾಣದ ಪ್ರಸ್ತಾವ ಚರ್ಚೆಯಲ್ಲಿದೆ. ಅವು ಪರಿಸರದ ಮೇಲೆ ಉಂಟುಮಾಡುವ ಒತ್ತಡ ಅಪಾರ.

• ಸರೋಜಾ ಪ್ರಕಾಶ್

ಇಡೀ ವಿಶ್ವವನ್ನೇ ಪ್ರಭಾವಿಸುತ್ತಿರುವ ಎಐ ತಂತ್ರಜ್ಞಾನಕ್ಕೆ ನಮ್ಮಲ್ಲೂ ಮಣೆ ಹಾಕಲಾಗುತ್ತಿದೆ. ಕರ್ನಾಟಕದಲ್ಲಿ ಇನ್ನೂ ಕೆಲವು ಡೇಟಾ ಸೆಂಟರ್ ತೆರೆಯಲಾಗುವುದು ಎಂದು ಸರ್ಕಾರ ಹೇಳಿದೆ. ಈ ಡೇಟಾ ಸೆಂಟರ್‌ಗಳು ಇತರೆ ವಾಣಿಜ್ಯ ಕಟ್ಟಡಗಳಂತಲ್ಲ. ಇವು ತಡೆರಹಿತ ವಿದ್ಯುತ್ ಮತ್ತು ಅಪಾರ ಪ್ರಮಾಣದ ನೀರನ್ನು ಬೇಡುವ ಕಟ್ಟಡಗಳು!

ಹಗಲಿರುಳೆನ್ನದೆ ಯೂಟ್ಯೂಬ್ ಬಳಸುವವರಿಗಾಗಿ, ಎಐಗಳಿಂದ ಮಾಹಿತಿ ಪಡೆಯುವವರಿಗಾಗಿ ಸರ್ವರ್‌ಗಳು ಲಕ್ಷಗಟ್ಟಲೆ ಜಾಲತಾಣಗಳನ್ನು ಜಾಲಾಡುತ್ತವೆ. ಅವು 24 ಗಂಟೆಯೂ ಕೆಲಸ ಮಾಡುತ್ತಿರಬೇಕಾಗುತ್ತದೆ. ಅವುಗಳಿಗೆ 'ಶಟ್ ಡೌನ್' ಎನ್ನುವುದು ಇಲ್ಲವೇ ಇಲ್ಲ. ಇದರರ್ಥ, ಸದಾಕಾಲ ವಿದ್ಯುತ್ ಪೂರೈಕೆ ಇರಲೇಬೇಕು. ಕ್ಷಣಮಾತ್ರದ ವಿದ್ಯುತ್ ವ್ಯತ್ಯಯವೂ ಅಪಾರ ಮಾಹಿತಿಯನ್ನು ಕಳೆದುಹಾಕುವ ಸಾಧ್ಯತೆಯಿದೆ.

ಅಪಾರ ನೀರು ಯಾಕೆ ಅಂದಿರಾ? ಕಂಪ್ಯೂಟರ್‌ಗಳು, ಸರ್ವರ್‌ಗಳು, ಅವುಗಳಲ್ಲಿರುವ ಮೈಕ್ರೊಚಿಪ್‌ನಂತಹ ಬಿಡಿಭಾಗಗಳು ವಿದ್ಯುತ್ ಬಳಸಿ ಕೆಲಸ ಮಾಡುವಾಗ ಸತತ ಬಿಸಿ ಉಗುಳುತ್ತಿರುತ್ತವೆ. ಆ ಬಿಸಿಯಿಂದ ಯಂತ್ರದ ಭಾಗಗಳಿಗೆ ಹಾನಿ ಆಗಬಾರದು, ಸರಾಗವಾಗಿ ಗಣಕ ಕಾರ್ಯಗಳು ನಡೆಯುತ್ತಿರಬೇಕು ಎಂದಾದರೆ ಆ ಬಿಸಿ ಆರುವ ಹಾಗೆ ವ್ಯವಸ್ಥೆ ಇರಬೇಕು. ಯಂತ್ರಗಳ ಬಿಸಿಯನ್ನು ನೀರಿಗೆ ವರ್ಗಾಯಿಸಿ ಆ ನೀರು ಆವಿಯಾಗುವ ಹಾಗೆ ಇರುವ ವ್ಯವಸ್ಥೆಯಲ್ಲಿ ಬಳಸಿದ ನೀರೆಲ್ಲವೂ ವಾತಾವರಣ ಸೇರುತ್ತದೆ. ಅಂದರೆ, ನೀರಿನ ಪೂರೈಕೆ ನಿರಂತರವಾಗಿ ಆಗುತ್ತಿರಬೇಕಾಗುತ್ತದೆ. ಒಂದು ಅಂದಾಜಿನ ಪ್ರಕಾರ, 1 ಮೆಗಾವಾಟ್ ಡೇಟಾ ಸೆಂಟರ್‌ಗೆ ದಿನವೊಂದಕ್ಕೆ 68 ಸಾವಿರ ಲೀಟರ್ ನೀರಿನ ಅವಶ್ಯಕತೆ ಇರುತ್ತದೆ! ಇನ್ನೊಂದು ವ್ಯವಸ್ಥೆಯಲ್ಲಿ, ನೀರನ್ನು ಅತಿಯಾಗಿ ತಂಪಾಗಿಸಿ ಕೊಳವೆಗಳ ಮೂಲಕ ಸರ್ವರ್ ಕೋಣೆಗಳಲ್ಲಿ ಹಾಯಿಸಿ ಬಿಸಿಯನ್ನು ನೀರಿಗೆ ವರ್ಗಾಯಿಸಲಾಗುತ್ತದೆ, ಬಿಸಿ ನೀರನ್ನು ಮತ್ತೆ ತಂಪುಗೊಳಿಸಿ ಅದೇ ಪ್ರಕ್ರಿಯೆ ಮುಂದುವರಿಯುತ್ತದೆ. ಇಲ್ಲಿ ನೀರನ್ನು ತಂಪಾಗಿಸಲು ಬಹಳಷ್ಟು ವಿದ್ಯುತ್ ಶಕ್ತಿ ಬೇಕಾಗುತ್ತದೆ.



ಬೆಂಗಳೂರಿನಲ್ಲಿ ಈಗಾಗಲೇ 31 ಡೇಟಾ ಸೆಂಟರ್‌ಗಳಿವೆ. ಇವುಗಳ ವಿಸ್ತರಣೆ ಬೇಡ ಎಂದು ಪರಿಸರ ಸಂಘಟನೆಗಳು ವಿರೋಧಿಸುತ್ತಿವೆ. ಸಂಪದ್ಭರಿತ ನೆಲ ಮತ್ತು ನೀರನ್ನು ಡೇಟಾ ಸೆಂಟರ್‌ಗೆ ಬಲಿ ಕೊಡಲು ನಾವು ಸಿದ್ಧರಿಲ್ಲ ಎಂದು ರೈತಸಂಘಟನೆಗಳೂ ಪಟ್ಟು ಹಿಡಿದಿವೆ. ಜನವಿರೋಧಕ್ಕೆ ತಲೆಬಾಗಿ ಬೆಂಗಳೂರಿನ ಬದಲಾಗಿ ಮೈಸೂರು ಮತ್ತು ಮಂಗಳೂರಿನಲ್ಲಿ ಡೇಟಾ ಸೆಂಟರ್ ತೆರೆಯುವುದಕ್ಕೆ ಸರ್ಕಾರ ತಲೆದೂಗಿದೆ.

ಅಮೆರಿಕ, ಐರ್ಲೆಂಡ್, ಬ್ರಿಟನ್, ಜರ್ಮನಿ, ಸ್ಪೇನ್ ಹಾಗೂ ಲ್ಯಾಟಿನ್ ಅಮೆರಿಕದ ಕೆಲವು ದೇಶಗಳಲ್ಲಿ ಬೃಹತ್ ಡೇಟಾ ಸೆಂಟರ್‌ಗಳಿಗೆ ವಿರೋಧದ ಅಲೆ ಎದ್ದಿದ್ದು, ಅನೇಕ ಕಡೆ ಡೇಟಾ ಸೆಂಟರ್ ನಿರ್ಮಾಣ ಯೋಜನೆಯನ್ನು ಸ್ಥಗಿತಗೊಳಿಸಿದ ಉದಾಹರಣೆಗಳಿವೆ. ನೀರು, ನೆಲ ಮತ್ತು ವಿದ್ಯುತ್ ಪೂರೈಕೆಯ ಮೇಲೆ ಬೀಳುವ ಒತ್ತಡವನ್ನು ಸ್ಥಳೀಯರು ವಿರೋಧಿಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಮಾನವ ಹಕ್ಕುಗಳ ವೇದಿಕೆ ಹಾಗೂ ವಿಜ್ಞಾನಿಗಳ ಗುಂಪು, ವಿಶಾಖಪಟ್ಟಣದಲ್ಲಿ ಎರಡು ಗೂಗಲ್ ಡೇಟಾ ಸೆಂಟರ್‌ಗಳಿಗೆ ಅನುಮತಿ ನೀಡಿದ ಸರ್ಕಾರದ ಮೇಲೆ ದಾವಾ ಹೂಡಿವೆ. ವಿಜ್ಞಾನ ಮತ್ತು ನೈತಿಕತೆಯ ಮೂಲಭೂತ ವೈಫಲ್ಯ ಅದು ಎಂದು ಟೀಕಿಸಿವೆ.

ಇದೇ ವೇಳೆಗೆ ನಾಲ್ಕು ಜಿಲ್ಲೆಗಳಲ್ಲಿ ಅಣುವಿದ್ಯುತ್ ಸ್ಥಾವರಕ್ಕಾಗಿ ಕರ್ನಾಟಕ ಸರ್ಕಾರ ಸಮೀಕ್ಷೆ ಮಾಡುತ್ತಿರುವುದು ಸುದ್ದಿಯಾಗಿದೆ. ಡೇಟಾ ಸೆಂಟರ್‌ಗಳ ವಿದ್ಯುತ್ ಬೇಡಿಕೆ ಪೂರೈಕೆಯೂ ಈ ಚಟುವಟಿಕೆಗೆ ಕಾರಣ ಎಂದು ಹೇಳಲಾಗುತ್ತಿದೆ. ಕೊಪ್ಪಳ, ವಿಜಯಪುರ, ಉತ್ತರಕನ್ನಡ ಹಾಗೂ ಶಿವಮೊಗ್ಗ ಇವೇ ಆ ನಾಲ್ಕು ಜಿಲ್ಲೆಗಳು. ಶಿವಮೊಗ್ಗದ ಸಾಗರ ತಾಲ್ಲೂಕಿನ ಬೇಸೂರು, ರಾಯಚೂರಿನ ಶಕ್ತಿನಗರ, ಉತ್ತರಕನ್ನಡದ ಅಂಕೋಲಾ ತಾಲ್ಲೂಕಿನ ಭಾವಿಕೇರಿ ಮತ್ತು ಕೊಪ್ಪಳದ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್ ಬಳಿ ಹಾಗೂ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮಣೂರು ಗ್ರಾಮದ ಸಮೀಪ ಸ್ಥಳ ಪರಿಶೀಲನೆ ನಡೆದಿದೆ ಎಂಬ ವರದಿಗೆ ಜನರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಮಾಲಿನ್ಯರಹಿತ ಎಂದು ಹೆಸರು ಪಡೆದಿದ್ದರೂ ಅಣು ವಿದ್ಯುತ್ ಯೋಜನೆಗಳು ಜಗತ್ತಿನೆಲ್ಲೆಡೆ ತಿರಸ್ಕೃತವಾಗುತ್ತಿವೆ. ಚೆರ್ನೊಬಿಲ್, ಫುಕುಶಿಮಾ ದುರಂತಗಳು ಅಣು ಅಪಾಯಗಳನ್ನು ಸಾರಿ ಹೇಳಿವೆ. ಅಷ್ಟೇ ಅಲ್ಲ, ದಿನದಿಂದ ದಿನಕ್ಕೆ ಅಣುಸ್ಥಾವರಗಳ ನಿರ್ಮಾಣವೆಚ್ಚ ಅಧಿಕವಾಗುತ್ತಿದ್ದು, ಅದು ಸುಸ್ಥಿರ ಯೋಜನೆ ಅಲ್ಲ ಎಂದು ಎಷ್ಟೋ ದೇಶಗಳ ಸರ್ಕಾರಗಳು ಕೈಬಿಟ್ಟಿವೆ. ಮುಂದುವರಿದ ದೇಶಗಳು ತಮ್ಮ ಯಂತ್ರ, ತಂತ್ರಜ್ಞಾನವನ್ನು ಭಾರತದಂತಹ ದೇಶಗಳಿಗೆ ಮಾರಿ ಕೈತೊಳೆದುಕೊಳ್ಳುವ ಹುನ್ನಾರ ಅದು ಎಂತಲೂ ಪುಕಾರು ಇದೆ.

ಇಲ್ಲೊಂದು ಪ್ರಶ್ನೆ ಎದುರಾಗುತ್ತದೆ, ಡೇಟಾ ಸೆಂಟರ್‌ಗಳು ಜನರ ಮೂಲಭೂತ ಅವಶ್ಯಕತೆಗಳಲ್ಲಿ ಒಂದೇ? ಕೃಷಿಗೆ, ಸಾರ್ವಜನಿಕ ಬಳಕೆಗೆ ಅಗತ್ಯವಾಗಿರುವ ನೀರನ್ನು ಡೇಟಾ ಸೆಂಟರ್‌ಗಳಿಗೆ ತಿರುಗಿಸಬಹುದೆ? ಎಷ್ಟಾದರೂ ಖಾಸಗಿ ಕಂಪನಿಗಳ ಸೊತ್ತುಗಳು ಅವು. ಮಳೆನೀರು ಸಂಗ್ರಹ, ನೀರಿಂಗಿಸುವಿಕೆ, ತ್ಯಾಜ್ಯನೀರಿನ ಮರುಬಳಕೆಯ ಮೂಲಕ ಈ ಗಜಗಾತ್ರದ ಕಂಪನಿಗಳು ತಮ್ಮ ಅಗತ್ಯದ ನೀರಿನ ಬಹುಪಾಲನ್ನು ಪಡೆಯಬಹುದು. ವಿದ್ಯುತ್ ವಿಷಯದಲ್ಲೂ ಅಷ್ಟೆ. ತಮ್ಮ ಆವರಣದಲ್ಲಿ ಸೌರ, ಪವನ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಂಡು ಸ್ವಾವಲಂಬಿಯಾಗಲು, ಪರಿಸರಸ್ನೇಹಿ ಆಗಿರಲು ಸಾಧ್ಯವಿದೆ.

ಎಚ್ಚೆತ್ತ ಜನತೆಯಿಂದ ಮಾತ್ರವೇ ಇಂತಹ ಅಪಾಯಕಾರಿ ಯೋಜನೆಗಳಿಗೆ ಕಡಿವಾಣ ಹಾಕಲು ಸಾಧ್ಯ!

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಪಿಎಲ್ ಆಚೀಚೆಯ ಸದ್ದು–ಗದ್ದಲಗಳು

• ಗಿರೀಶ ದೊಡ್ಡಮನಿ

ದಶಕಗಳ ಹಿಂದಿನ ಮಾತು. ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ 200–250 ರನ್‌ಗಳ ಮೊತ್ತವೆಂದರೆ ದೊಡ್ಡ ಸವಾಲು ಎಂದೇ ಅರ್ಥ. ಆದರೆ ಟಿ20 ಕ್ರಿಕೆಟ್ ಬಂದ ನಂತರ ವ್ಯಾಖ್ಯಾನ ಪೂರ್ಣ ಬದಲಾಗಿದೆ. ಅದರಲ್ಲೂ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯು ಕ್ರಿಕೆಟ್‌ನಲ್ಲಿ 'ಮಾಯಾಲೋಕ'ವನ್ನೇ ಸೃಷ್ಟಿಸಿಬಿಟ್ಟಿದೆ. ಕೇವಲ 20 ಓವರ್‌ಗಳಲ್ಲಿ 300 ರನ್‌ಗಳ ಮೊತ್ತ ಪೇರಿಸುವ ಸಾಧ್ಯತೆಯನ್ನು ಹುಟ್ಟುಹಾಕಿದೆ. ಸನ್‌ರೈಸರ್ಸ್ ಹೈದರಾಬಾದ್, ಡೆಲ್ಲಿ ಕ್ಯಾಪಿಟಲ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು 250ರ ಗಡಿ ದಾಟಿ ತೋರಿಸಿದ್ದೂ ಆಗಿದೆ.

15ರ ಪೋರ ವೈಭವ್ ಸೂರ್ಯವಂಶಿಯ ಸಿಕ್ಸರ್‌ಗಳು ಚಮತ್ಕಾರದಂತೆ ಭಾಸವಾಗುತ್ತಿವೆ. ಇನ್ನೊಂದೆಡೆ ಜಸ್‌ಪ್ರೀತ್ ಬೂಮ್ರಾ ಅವರಂತಹ ದಿಗ್ಗಜ ಬೌಲರ್ ಮೊದಲ ನಾಲ್ಕು ಪಂದ್ಯಗಳಲ್ಲಿ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಪುನರಾಗಮನ ಮಾಡಿದ ಮೊಹ್ಸಿನ್ ಖಾನ್ ಅವರಂತಹ ಬೌಲರ್‌ಗಳು ಸಫಲರಾದರು. ಕಳೆದ 44 ದಿನಗಳಿಂದ ನಡೆಯುತ್ತಿರುವ ಐಪಿಎಲ್‌ನಲ್ಲಿ ಇಂತಹ ಹತ್ತಾರು ಅಚ್ಚರಿಗಳು ಘಟಿಸಿವೆ. ಕೇವಲ ಆಟವಷ್ಟೇ ಅಲ್ಲ. ಒಂದಿಷ್ಟು ಅನೂಹ್ಯ ಸಂಗತಿಗಳೂ ಈ ಬಾರಿಯ ಐಪಿಎಲ್‌ನಲ್ಲಿ ಗಮನ ಸೆಳೆದಿವೆ.

ಅಶಿಸ್ತು, ನಿಯಮ ಉಲ್ಲಂಘನೆಗೆ ಕಠಿಣ ಶಿಕ್ಷೆ ಇಲ್ಲ, ದಂಡಕ್ಕಷ್ಟೇ ಸೀಮಿತ

ಶಾಸಕರಿಗೆ ಪಾಸ್; ಫೈನಲ್‌ಗೆ ಗೇಟ್‌ಪಾಸ್!

ಭಾರತದಲ್ಲಿ ಇವತ್ತು ಎಲ್ಲರೂ ಕ್ರಿಕೆಟ್‌ನೊಂದಿಗೆ ಗುರುತಿಸಿಕೊಳ್ಳಲು ಬಯಸುತ್ತಾರೆ. ವಯಸ್ಸು, ಧರ್ಮ, ಜಾತಿ, ಭಾಷೆ, ವೃತ್ತಿ ಮತ್ತು ಭೌಗೋಳಿಕತೆಯನ್ನೂ ಮೀರಿದ ಆಕರ್ಷಣೆಯನ್ನು ಕ್ರಿಕೆಟ್ ಇವತ್ತು ಗಳಿಸಿದೆ. ಇಷ್ಟೆಲ್ಲ ಇದ್ದ ಮೇಲೆ ರಾಜಕಾರಣಿಗಳು ಬಿಡುತ್ತಾರೆಯೇ?

ಅದಕ್ಕಾಗಿಯೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯಗಳನ್ನು ವೀಕ್ಷಿಸಲು ತಮಗೂ ಉಚಿತ ಟಿಕೆಟ್ ನೀಡಬೇಕು ಎಂದು ವಿಧಾನಸಭೆ ಅಧಿವೇಶನದಲ್ಲಿಯೇ ಬೇಡಿಕೆ ಇಟ್ಟರು. ಅದಕ್ಕೆ ವಿಧಾನಸಭಾಧ್ಯಕ್ಷರು, ಉಪಮುಖ್ಯಮಂತ್ರಿಗಳು ಮತ್ತು ವಿಪಕ್ಷ ನಾಯಕರು ಒಕ್ಕೊರಲ ಬೆಂಬಲ ಸೂಚಿಸಿದರು. ಇದಕ್ಕೆ ಮಣಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗಳು ಇಲ್ಲಿ ನಡೆದ ಐದು ಐಪಿಎಲ್ ಪಂದ್ಯಗಳಿಗೂ ಪ್ರತಿಯೊಬ್ಬ ಶಾಸಕ, ಸಂಸದ, ಸಚಿವರೆಲ್ಲರಿಗೂ ತಲಾ ಮೂರು ಉಚಿತ ಟಿಕೆಟ್‌ಗಳನ್ನು ವಿತರಿಸಿದವು.

ಹೋದ ವರ್ಷ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಅದರ ನಂತರ ಭದ್ರತೆಯ 'ಕಾರಣ' ನೀಡಿ ಪಂದ್ಯಗಳಿಗೆ ಅನುಮತಿ ನೀಡಿರಲಿಲ್ಲ. ಆದರೆ ಐಪಿಎಲ್ ಪಂದ್ಯಗಳಿಗಾಗಿ ಅನುಮತಿ ಕೊಡಲು ಸರ್ಕಾರವು ವಿಧಿಸಿದ ಎಲ್ಲ ಶರತ್ತುಗಳನ್ನು ಪೂರೈಸುವತ್ತ ಕೆಎಸ್‌ಸಿಎ ಕಾರ್ಯೋನ್ಮುಖವಾಯಿತು. ಅದನ್ನೇ ದಾಳವಾಗಿಟ್ಟುಕೊಂಡ ಶಾಸಕರು ಟಿಕೆಟ್‌ಗಳಿಗೂ ಬೇಡಿಕೆಯಿಟ್ಟರು. ಅದರ ಫಲವಾಗಿ ಇಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಸ್ಥಳಾಂತರಗೊಂಡಿತು. ಸ್ವತಃ ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಅವರೇ ಈ ವಿಷಯ ಬಹಿರಂಗಪಡಿಸಿದ್ದಾರೆ.

ವಿವಾದದ 'ಹೊಗೆ'

ಕ್ರೀಡಾಂಗಣದಲ್ಲಿ ಪಂದ್ಯ ನೋಡಲು ಹೋಗುವವರು ಅಥವಾ ವರದಿ ಮಾಡಲು ಹೋಗುವ ಮಾಧ್ಯಮದವರನ್ನು ನಖಶಿಖಾಂತ ಪರಿಶೀಲಿಸಲಾಗುತ್ತದೆ. ನಾಣ್ಯವನ್ನೂ ಒಳಗೆ ಒಯ್ಯಲು ಬಿಡುವುದಿಲ್ಲ. ಸಿಗರೇಟ್, ತಂಬಾಕು ಅಂತಹ ವಸ್ತುಗಳನ್ನೂ ಬಿಡುವುದಿಲ್ಲ. ಆದರೆ ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಅವರು ಡ್ರೆಸಿಂಗ್‌ರೂಮ್‌ನಲ್ಲಿ 'ಇ ಸಿಗರೇಟ್' ಸೇದಿ ಹೊಗೆ ಬಿಡುವ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ದೂಳೆಬ್ಬಿಸಿದವು.

ಭಾರತದಲ್ಲಿ ಇ ಸಿಗರೇಟ್ ಬಳಕೆ, ಉತ್ಪಾದನೆ ಮತ್ತು ಮಾರಾಟ ನಿಷಿದ್ಧ. ಅಂತಹದರಲ್ಲಿ ಕೋಟ್ಯಂತರ ಜನರು ಟಿ.ವಿ., ಮೊಬೈಲ್ ಆ್ಯಪ್ ಮೂಲಕ ವೀಕ್ಷಿಸಿದ ಐಪಿಎಲ್ ಪಂದ್ಯದಲ್ಲಿ ಖ್ಯಾತ ಆಟಗಾರ ಪರಾಗ್ ಇ ಸಿಗರೇಟ್ ಬಳಸಿದ್ದು ವಿವಾದ ಹುಟ್ಟುಹಾಕಿತು. ಅವರಿಗೆ ಕಠಿಣ ಶಿಕ್ಷೆಯಾಗುವ ನಿರೀಕ್ಷೆ ಮೂಡಿತ್ತು. ಆದರೆ ಬಿಸಿಸಿಐ ಅವರಿಗೆ ಪಂದ್ಯದ ಸಂಭಾವನೆಯ ಶೇ 25ರಷ್ಟು ದಂಡ ವಿಧಿಸಿ ಸುಮ್ಮನಾಯಿತು. ತಂಡದ ವಿರುದ್ಧವೂ ಯಾವುದೇ ಕ್ರಮವಾಗಿಲ್ಲ. ಪರಾಗ್ ಅವರು ನಂತರದ ಪಂದ್ಯದಲ್ಲಿ ಆಡಿದರು. ಅಷ್ಟೇ ಅಲ್ಲ. 90 ರನ್ ಕೂಡ ಹೊಡೆದರು.

'ಟೀಕಾಕಾರಿಗೆ (ವೇಪಿಂಗ್ ಪ್ರಕರಣಕ್ಕೆ ಸಂಬಂಧಿಸಿ) ಉತ್ತರ ಕೊಡುವ ಅಗತ್ಯವಿಲ್ಲ. ನನ್ನ ಆಟವೇ ಉತ್ತರ' ಎಂದರು. ಈ ಹಿಂದೆ ನಡೆದಿದ್ದ ಕೆಲವು ಸಣ್ಣ, ಪುಟ್ಟ ಪ್ರಕರಣಗಳಲ್ಲಿ ಆಟಗಾರರನ್ನು ಒಂದು ಅಥವಾ ಎರಡು ಪಂದ್ಯಗಳಿಂದ ಅಮಾನತು ಮಾಡಿರುವ ಉದಾಹರಣೆಗಳು ಇವೆ. ಆದರೆ ಪರಾಗ್ ಪ್ರಕರಣದಲ್ಲಿ ಬಿಸಿಸಿಐ, ಐಪಿಎಲ್ ಆಡಳಿತ ಸಮಿತಿ ಮತ್ತು ಸ್ಥಳೀಯ ಆಡಳಿತ ಮಗುಮ್ಮಾಗಿ ಉಳಿದಿವೆ. ನಿಷೇಧಿತ ಇ ಸಿಗರೇಟ್‌ಗೆ ಅಂತರರಾಷ್ಟ್ರೀಯ ಮಟ್ಟದ ಪ್ರಚಾರ ಸಿಕ್ಕಿದಂತಾಯಿತು. 15 ವರ್ಷದ ಬಾಲಕ ವೈಭವ್ ಸೂರ್ಯವಂಶಿ ಇರುವ ತಂಡ ರಾಜಸ್ಥಾನ ರಾಯಲ್ಸ್. ಅಂತಹ ಕಿರಿಯರ ಮೇಲೆ ಇಂತಹ ಪ್ರಕರಣಗಳಿಂದ ಆಗುವ ಪರಿಣಾಮವೆಂತಹುದು? ಈ ಹಿಂದೆ ಕೋಟ್ಯಂತರ ರೂಪಾಯಿ ಪಡೆದು ತಂಬಾಕು ಉತ್ಪನ್ನಗಳ ಪ್ರಚಾರ ಮಾಡುವ ಒಪ್ಪಂದವನ್ನೇ ಧಿಕ್ಕರಿಸಿದ್ದ ಸಚಿನ್ ತೆಂಡೂಲ್ಕರ್ ಅವರು ಹೊಸ ಆದರ್ಶಪ್ರಾಯರಾಗಬೇಕಲ್ಲವೇ?

ವಿರಾಟ್ ಕೊಹ್ಲಿ ಅಭಿಮಾನಿಯೊಬ್ಬಳ ಸಂಭ್ರಮ

ಇ ಸಿಗರೇಟ್ ಸೇದುತ್ತಿರುವ ರಿಯಾನ್ ಪರಾಗ್

'ಹನಿಟ್ರ್ಯಾಪ್' ಆತಂಕದಲ್ಲಿ ಬಿಸಿಸಿಐ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ತಡವಾಗಿ ಎಚ್ಚೆತ್ತುಕೊಂಡಿದೆ. ಐಪಿಎಲ್ ತಂಡಗಳ ಆಟಗಾರರು, ನೆರವು ಸಿಬ್ಬಂದಿ ಮತ್ತು ಅಧಿಕಾರಿಗಳು 'ಹನಿಟ್ರ್ಯಾಪ್'ಗೆ ಬೀಳುವ ಆತಂಕದಿಂದ ಹೊಸ ಮಾರ್ಗಸೂಚಿ ತಂದಿದೆ. ಅದಕ್ಕಾಗಿ ತಂಡದವರು ತಂಗುವ ಹೋಟೆಲ್ ಕೋಣೆಗಳಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ನಿಷೇಧಿಸಿದೆ. ಪರಿಚಿತರನ್ನು ಕರೆದೊಯ್ಯಬೇಕಾದರೂ ಆಯಾ ತಂಡಗಳ ವ್ಯವಸ್ಥಾಪಕರ ಅನುಮತಿ ಪತ್ರ ಪಡೆದಿರುವುದು ಕಡ್ಡಾಯ ಎಂದು ಹೇಳಿದೆ. ಆದರೆ ಇದ್ದಕ್ಕಿದ್ದಂತೆ ಈ ಮಾರ್ಗಸೂಚಿ ತರಲು ಕಾರಣವೇನು? ಮೊದಲು ಈ ನಿಯಮಗಳು ಇರಲಿಲ್ಲವೇ?

2013–14ರಲ್ಲಿ ಐಪಿಎಲ್‌ನಲ್ಲಿ ಸ್ಪಾಟ್ ಫಿಕ್ಸಿಂಗ್ ಪ್ರಕರಣ ನಡೆದಿತ್ತು. ಅದರ ನಂತರ ತನಿಖೆ ನಡೆಸಿದ್ದ ಮೌದ್ಗಿಲ್ ಸಮಿತಿ ಮತ್ತು ಬಿಸಿಸಿಐ ಆಡಳಿತ ಸುಧಾರಣೆಗಾಗಿ ನಿಯಮಾವಳಿ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯು ಇಂತಹ ಪ್ರಕರಣಗಳು ನಡೆದಿರುವುದನ್ನು ಆಗಲೇ ಉಲ್ಲೇಖಿಸಿತ್ತು.

ಅನಧಿಕೃತ ವ್ಯಕ್ತಿಗಳೊಂದಿಗೆ ತಂಡದವರ ಸಂಪರ್ಕ, ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆ ಮತ್ತು ರಾಜಕೀಯ ವ್ಯಕ್ತಿಗಳ ಹಸ್ತಕ್ಷೇಪದ ಕುರಿತು ಎಚ್ಚರಿಸಿತ್ತು. ಅವುಗಳ ನಿಯಂತ್ರಣಕ್ಕಾಗಿ ನಿಯಮಗಳನ್ನೂ ರೂಪಿಸಿತ್ತು. ಆದರೆ ಐಪಿಎಲ್ ಜಗತ್ತೇ ಬೇರೆ. ಇಲ್ಲಿ ದೇಶಿ, ವಿದೇಶಿ ಆಟಗಾರರಲ್ಲಿ ಕೆಲವರು ತಮ್ಮ ಗೆಳತಿಯರು ಮತ್ತು ಆಪ್ತರನ್ನು ತಮ್ಮ ಕೋಣೆಗಳಿಗೆ ಕರೆದೊಯ್ದ ಉದಾಹರಣೆಗಳಿವೆ. ಪಂದ್ಯದ ಸಂದರ್ಭಗಳಲ್ಲಿ ಆಟಗಾರರ ನಿಕಟವರ್ತಿಗಳು (ಹೊರಗಿನಿಂದ ಬಂದವರು) ಮೈದಾನದಲ್ಲಿಯೇ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಿಗೆ ಹಾಕಿದ ಪ್ರಕರಣಗಳನ್ನೂ ಮಂಡಳಿಯ ಭ್ರಷ್ಟಾಚಾರ ನಿಗ್ರಹ ಪಡೆ ಪತ್ತೆ ಮಾಡಿತ್ತು. ಸ್ವತಃ ಕೆಲವು ಆಟಗಾರರೇ ಡ್ರೆಸಿಂಗ್ ರೂಮ್ ವಿಡಿಯೊ ಮಾಡಿ ಹರಿಬಿಟ್ಟಿದ್ದು ಕೂಡ ಇದೆ ಎಂಬ ವರದಿಗಳಿವೆ. ಅದಕ್ಕಾಗಿ ಕೆಲವು ಆಟಗಾರರ ಅಮಾನತು ಕೂಡ ಆಗಿದೆಯಂತೆ. ಆದರೆ ಈ ಕುರಿತು ಬಿಸಿಸಿಐ ಮಾತ್ರ ಬಹಿರಂಗವಾಗಿ ಎಲ್ಲಿಯೂ ಹೇಳಿಕೊಂಡಿಲ್ಲ.

'ಲೀಗ್ ಘನತೆ ಕುಂದದಂತೆ ನೋಡಿಕೊಳ್ಳುವ ಜವಾಬ್ದಾರಿ ಫ್ರ್ಯಾಂಚೈಸಿಗಳಿಗೂ ಇದೆ. ಬಿಸಿಸಿಐಗೂ ಇದೆ. ಇದಕ್ಕೆ ಸಂಬಂಧಿಸಿದ ಎಲ್ಲರೂ ಜಾಗೃತರಾಗಿರಬೇಕು' ಎಂದು ಮಂಡಳಿ ಹೇಳಿದೆ. ಏಕೆಂದರೆ ಐಪಿಎಲ್ ಶ್ರೀಮಂತವಾಗಿ ಬೆಳೆಯಲು 'ಬ್ರ್ಯಾಂಡ್ ಮೌಲ್ಯ' ಮುಖ್ಯವಾಗುತ್ತದೆ. ಅದೇ ಕಡಿಮೆಯಾದರೆ ಎಲ್ಲವೂ ಇಳಿಮುಖವಾಗುತ್ತದೆ. ಆದ್ದರಿಂದ ಆಟಗಾರರೂ ಸೇರಿದಂತೆ ಮತ್ತಿತರರೆಲ್ಲರ 'ಸನ್ನಡತೆ'ಯೂ ಮಹತ್ವದ್ದಾಗುತ್ತದೆ.

ಆವೇಶ್ ಖಾನ್

ಆವೇಶ್ ಬೌಂಡರಿಯಾಚೆ ಬ್ಯಾಟಿಂಗ್

ಲಖನೌ ಸೂಪರ್ ಜೈಂಟ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ಪಂದ್ಯ ಅದು. ವಿಜಯದ ರನ್ ಗಳಿಸಲು ಲಖನೌ ಬ್ಯಾಟರ್ ರಿಷಭ್ ಅವರು ಚೆಂಡನ್ನು ಹೊಡೆಯುತ್ತಾರೆ. ಚೆಂಡು ಇನ್ನೇನು ಡಗ್‌ಔಟ್ ಸಮೀಪ ಹೋಗಿ ಬೌಂಡರಿಯಾಗಬೇಕಿತ್ತು. ಆದರೆ ಹಗ್ಗದಾಚೆ ಪ್ಯಾಡ್ ಕಟ್ಟಿಕೊಂಡು ನಿಂತಿದ್ದ ಆವೇಶ್ ಖಾನ್ ತಮ್ಮ ಕೈಯಲ್ಲಿದ್ದ ಬ್ಯಾಟ್‌ನಿಂದ ಚೆಂಡನ್ನು ಹೊಡೆದೇ ಬಿಟ್ಟರು. ಅಷ್ಟರಲ್ಲಿ ಬ್ಯಾಟರ್‌ಗಳಿಬ್ಬರೂ ವಿಜಯಕ್ಕೆ ಬೇಕಾದ 2 ರನ್ ಓಡಿದ್ದರು. ಆದರೆ ಆವೇಶ್ ಅವತ್ತು ಮಾಡಿದ್ದು ಅಶಿಸ್ತು. ಈ ಬಗ್ಗೆ ಸನ್‌ರೈಸರ್ಸ್ ತಂಡವು ರೆಫರಿಗೆ ದೂರು ನೀಡಿತು. ಈ ಹಿಂದೆಯೂ ಆವೇಶ್ ಪಂದ್ಯವೊಂದರಲ್ಲಿ 'ಆವೇಶ'ಕ್ಕೆ ಒಳಗಾಗಿ ತಮ್ಮ ಹೆಲ್ಮೆಟ್ ಮತ್ತು ಬ್ಯಾಟ್ ಅನ್ನು ಪಿಚ್ ನಲ್ಲಿಯೇ ನೆಲಕ್ಕೆ ಅಪ್ಪಳಿಸುವಂತೆ ಬೀಸಾಕಿದ್ದರು. ಆಗ ಅವರಿಗೆ ದಂಡ ವಿಧಿಸಲಾಗಿತ್ತು.

ಕೆಲವು ಪಂದ್ಯಗಳು ರಾತ್ರಿ ತಡವಾಗಿ ಮುಕ್ತಾಯವಾಗುತ್ತಿವೆ. ಕೊನೆಯ ಹಂತದ ಓವರ್‌ಗಳನ್ನು ಪೂರೈಸಲು ಬಹಳಷ್ಟು ಸಮಯ ವ್ಯಯ ಮಾಡಲಾಗುತ್ತಿದೆ. ಕೆಲವು ಅಂಪೈರ್ ನಿರ್ಣಯಗಳೂ ಟೀಕೆಗೊಳಗಾಗಿವೆ. ಈಚೆಗೆ ಆರ್‌ಸಿಬಿಯ ರಜತ್ ಪಾಟೀದಾರ್ ಅವರ ಕ್ಯಾಚ್ ಅನ್ನು ಜೇಸನ್ ಹೋಲ್ಡರ್ ಪಡೆದಿದ್ದು. ಅವರು ಚೆಂಡಕ್ಕೆ ನೆಲಕ್ಕೆ ತಾಗಿಸಿದ್ದು ವಿಡಿಯೊದಲ್ಲಿ ಕಾಣಿಸಿತ್ತು. ಅಂಗಕ್ರಿಷ್ ರಘುವಂಶಿ ಅವರು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ರನ್ ಪಡೆಯುವ ಪ್ರಯತ್ನದಲ್ಲಿ ಫೀಲ್ಡರ್ ಕಾರ್ಯಾಚರಣೆಗೆ ಅಡ್ಡಿಯಾದರು ಎಂಬ ಕಾರಣಕ್ಕೆ ಔಟ್ ಆದರು.

ಹೀಗೆ ಲೆಕ್ಕ ಹಾಕುತ್ತ ಹೋದರೆ ಮತ್ತಷ್ಟು, ಮೊಗೆದಷ್ಟು ಸಂಗತಿಗಳು ಸಿಗುತ್ತವೆ. ಕ್ರಿಕೆಟ್ ಆಟಕ್ಕಿಂತಲೂ ಇವೇ ದೊಡ್ಡ ಸುದ್ದಿಗಳಾಗುತ್ತವೆಯಲ್ಲವೇ? ಈ ತಿಂಗಳಾಂತ್ಯದಲ್ಲಿ ಟೂರ್ನಿ ಮುಗಿಯುವ ವೇಳೆಗೆ ಇನ್ನಷ್ಟು ಅಚ್ಚರಿಗಳು ದಾಖಲಾಗಬಹುದೇನೋ?

ಅಂಗಕ್ರಿಷ್ ರಘುವಂಶಿ

ಡಗೌಟ್‌ನಲ್ಲಿ ಮೊಬೈಲ್ ವೀಕ್ಷಣೆ

ಮೊಬೈಲ್ ವೀಕ್ಷಿಸಿದ ರೋಮಿ ಬಿಂದರ್

ರಾಜಸ್ಥಾನ ರಾಯಲ್ಸ್ ತಂಡದ ಮ್ಯಾನೇಜರ್ ರೋಮಿ ಬಿಂದರ್ ಅವರು ಗುವಾಹಟಿಯಲ್ಲಿ ನಡೆದಿದ್ದ ಆರ್‌ಸಿಬಿ ವಿರುದ್ಧದ (ಏ.10) ಪಂದ್ಯದ ವೇಳೆ ಡಗೌಟ್‌ನಲ್ಲಿ ಮೊಬೈಲ್ ಫೋನ್ ಬಳಸಿದ್ದು ವಿವಾದಕ್ಕೆ ಕಾರಣವಾಯಿತು.

ಡಗೌಟ್‌ನಲ್ಲಿ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಅವರ ಪಕ್ಕದಲ್ಲಿ ಕುಳಿತುಕೊಂಡಿದ್ದ ರೋಮಿ ಅವರು ಮೊಬೈಲ್ ಬಳಸುತ್ತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಐಪಿಎಲ್ ನಿಯಮಗಳ ಪ್ರಕಾರ, ಡಗೌಟ್ ಮತ್ತು ಮೈದಾನದ ಆಸುಪಾಸಿನಲ್ಲಿ ಮೊಬೈಲ್ ಸೇರಿದಂತೆ ಯಾವುದೇ ಸಂವಹನ ಸಾಧನಗಳನ್ನು ಬಳಸುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಈ ಸಂಬಂಧ ಬಿಸಿಸಿಐನ ಭ್ರಷ್ಟಾಚಾರ ನಿಗ್ರಹ ಘಟಕವು ರೋಮಿ ಅವರಿಗೆ ಷೋಕಾಸ್ ನೋಟಿಸ್ ಜಾರಿ ನೀಡಿತ್ತು. ಶಿಷ್ಟಾಚಾರ ಉಲ್ಲಂಘನೆ ಬಗ್ಗೆ 48 ಗಂಟೆಗಳ ಒಳಗೆ ವಿವರಣೆ ನೀಡುವಂತೆ ಅವರಿಗೆ ಸೂಚಿಸಲಾಗಿತ್ತು.

ತಂಡಗಳ ಮ್ಯಾನೇಜರ್‌ಗಳಿಗೆ ಲಾಜಿಸ್ಟಿಕ್ಸ್ ಉದ್ದೇಶಗಳಿಗಾಗಿ ಫೋನ್ ಇಟ್ಟುಕೊಳ್ಳಲು ಅನುಮತಿ ಇದೆಯಾದರೂ, ಅದನ್ನು ಕೇವಲ ಡ್ರೆಸ್ಸಿಂಗ್ ರೂಮ್‌ನಲ್ಲಿ ಮಾತ್ರ ಬಳಸಬೇಕು. ಆಟಗಾರರು ಮತ್ತು ಸಹಾಯಕ ಸಿಬ್ಬಂದಿ ಕ್ರೀಡಾಂಗಣಕ್ಕೆ ಬಂದ ತಕ್ಷಣ ತಮ್ಮ ಫೋನ್‌ಗಳು ಮತ್ತು ಸ್ಮಾರ್ಟ್‌ವಾಚ್‌ಗಳನ್ನು ಭದ್ರತಾ ಅಧಿಕಾರಿಗೆ ಒಪ್ಪಿಸಬೇಕು.

ರೋಮಿ ಅವರು ತಪ್ಪು ಒಪ್ಪಿಕೊಂಡಿದ್ದರಿಂದ ಮತ್ತು ಇದು ಮೊದಲ ಬಾರಿಯ ತಪ್ಪು ಎಂದು ಪರಿಗಣಿಸಿ, ಅವರಿಗೆ ₹ 1 ಲಕ್ಷ ದಂಡ ವಿಧಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಯಿತು. ನೋಟಿಸ್‌ಗೆ ಅವರ ಉತ್ತರ ಸಮರ್ಪಕವಾಗಿಲ್ಲದ ಕಾರಣ ಎಚ್ಚರಿಕೆ ನೀಡಲಾಯಿತು. ಆದರೆ, ಈ ಪ್ರಕರಣದಲ್ಲಿ ಸೂರ್ಯವಂಶಿ ಅವರಿಗೆ ದಂಡ ಹಾಕಿಲ್ಲ. ಅವರಿಗೆ ನಿಯಮಗಳ ಬಗ್ಗೆ ತಂಡವು ಹೆಚ್ಚಿನ ತಿಳಿವಳಿಕೆ ನೀಡಬೇಕೆಂದು ಬಿಸಿಸಿಐ ಬಯಸಿತ್ತು.

ಮಾಹಿತಿ: ಪ್ರದೀಶ್ ಎಚ್.ಮರೋಡಿ

ಇಬ್ರಾಹಿಂ ಸಾಹೇಬರು ಕಟ್ಟಿದ ಕಸ್ತೂರಿ ನಿವಾಸ

ನುಡಿ ಬೆಳಗು


ದಾದಾಪೀರ್ ನವಿಲೇಹಾಳ್

ದಂಡಿನ ಹಿರೇಹಾಳು ಎಂಬ ಹಳ್ಳಿಯ ಸಾಮಾನ್ಯ ದೂದೇಕುಲ ಕುಟುಂಬದಲ್ಲಿ ಹುಟ್ಟಿದ ಹುಡುಗನೊಬ್ಬ ಹೊಟ್ಟೆ ಹೊರೆಯುವ ಸಲುವಾಗಿ ಊರೂರು ಅಲೆದು ಶಿವಮೊಗ್ಗಕ್ಕೆ ಬಂದು ನೆಲಸಿ ಕಟ್ಟಿದ ಕಸ್ತೂರಿ ನಿವಾಸದ ಕಥೆ 'ಕೊಡುವ ಸಡಗರ'ಕ್ಕೆ ಸಾಕ್ಷಿಯಾಗಿದೆ. ಇಬ್ರಾಹಿಂ ಸಾಹೇಬರು ತಮ್ಮ ವ್ಯವಹಾರದಿಂದ ಬಂದ ಲಾಭದ ಸಣ್ಣ ಭಾಗವನ್ನೂ ಸ್ವಂತಕ್ಕೆ ಬಳಸದೆ ಬಡ ವಿದ್ಯಾರ್ಥಿಗಳು, ಹಾಸ್ಟೆಲ್, ಸಾಮಾಜಿಕ ಸೇವಾನಿರತ ಸಂಘ ಸಂಸ್ಥೆಗಳು ಯಾರೇ ಬರಲಿ ಕೇಳಿದಂತೆಲ್ಲಾ ಕೇಳಿದಷ್ಟನ್ನು ಕೊಟ್ಟು ಕಳಿಸುವ ಕಕ್ಕುಲಾತಿಯವರು. ಎಷ್ಟೋ ಸಲ ಕೊಡುವಾಗ ಪಡೆದುಕೊಳ್ಳುವವರ ವಿವರ ತಿಳಿದು ಅಗತ್ಯ ಬಿದ್ದರೆ ಕೇಳಿದ್ದಕ್ಕಿಂತ ಹೆಚ್ಚೇ ಕೊಟ್ಟು ಕರಗಿದವರು. ಕೈಚಾಚಿ ಕೊಡುವಾಗ ಅವರ ಮುಖದ ತುಂಬ ಅರಳುತ್ತಿದ್ದ ನಗು, ಮೆದುವಾದ ಮಾತುಗಳು ಅವರ ಆಳದ ಚೈತನ್ಯವನ್ನು ಸೂಚಿಸುತ್ತಿದ್ದವು. ಅವರಿಗಿದ್ದ ತೀವ್ರ ಕಲಾಸಕ್ತಿಯ ಕಾರಣಕ್ಕೆ ಶಿವಮೊಗ್ಗ ಕವಿ ಕಲಾವಿದರಿಂದ ತುಂಬಿ ತುಳುಕುತ್ತಿತ್ತು. ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಗಾಯಕರ ಕಾರ್ಯಕ್ರಮಗಳಿಂದ ಹಿಡಿದು ಇಡೀ ಕನ್ನಡ ಸಾಹಿತ್ಯ ಮತ್ತು ತತ್ವಪದಗಳವರೆಗೆ ವಿಚಾರಸಂಕಿರಣಗಳಿಗೆ, ರಂಗ ಪ್ರದರ್ಶನಕ್ಕೆ ಅವರು ಕಾಯಂ ಪ್ರಾಯೋಜಕರಾಗಿದ್ದರು. ವೇದಿಕೆಯಿಂದ ದೂರವಿದ್ದು ಅವರು ನಿರ್ವಹಿಸಿದ ಕಾರ್ಯಕ್ರಮಗಳು ಅಚ್ಚುಕಟ್ಟುತನಕ್ಕೆ, ಅದ್ದೂರಿಗೆ ಸಾಕ್ಷಿಯಾಗಿದ್ದವು.

ಅವರ ಮನೆಯ ಗೋಡೆಗಳನ್ನು ಅನ್ಯಮತದ ದೇವರ ದೊಡ್ಡ ಗಾತ್ರದ ಫೋಟೋಗಳು ಅಲಂಕರಿಸಿದ್ದವು. ಮಾತ್ರವಲ್ಲ, ನಿತ್ಯವೂ ಆ ದೇವರ ಪೂಜೆ ಸಾಂಗವಾಗಿ ನಡೆಯುತ್ತಿತ್ತು. ಸದಾ ಜನರಿಂದ ತುಂಬಿರುತ್ತಿದ್ದ ಆ ಕಸ್ತೂರಿ ನಿವಾಸದಲ್ಲಿ ಸೌಹಾರ್ದ ಎಂಬುದು ಬರೀ ಪದವಾಗಿಯಲ್ಲ, ಕ್ರಿಯೆಯಾಗಿತ್ತು. ಸಾಮರಸ್ಯ ಇಬ್ರಾಹಿಂ ಸಾಹೇಬರ ವ್ಯಕ್ತಿ ಪ್ರಜ್ಞೆಯ ಭಾಗವಾಗಿತ್ತು. ಪಿಂಜಾರ ಸಮುದಾಯದ ಜೀವಧಾತುವಿನಂತಿರುವ ಧರ್ಮ ಸಮನ್ವಯದಿಂದಾಗಿ ಉದ್ದಕ್ಕೂ ಅವರು ಎಲ್ಲ ಉತ್ತಮಗಳ ಮೊತ್ತದಂತಿದ್ದರು. ಕೊಡುವುದರಲ್ಲಿನ ಖುಷಿಗೆ ಯಾವುದೂ ಸಾಟಿಯಿಲ್ಲ. ಅದು ಬೇರೆ ಯಾವುದರಿಂದಲೂ ಸಿಗುವುದಿಲ್ಲ ಎಂದು ಅವರು ನಂಬಿ ಬದುಕಿದ್ದರು. ಕೊಟ್ಟು ಕೊಟ್ಟು ಬರಿಗೈಯಾಗುವ ಅಳುಕಿಲ್ಲದೆ ಕೊಡುತ್ತಲೇ ಹೋದರು. ಮನುಷ್ಯ ಜೀವನವನ್ನು ಇಷ್ಟು ನಿಸ್ವಾರ್ಥದಿಂದ ಬದುಕಬಹುದು ಎಂಬುದನ್ನು ಅವರ ಬಾಳಿನ ಭವ್ಯತೆಯೇ ಹೇಳುತ್ತದೆ.

ಕಸ್ತೂರಿ ನಿವಾಸ ಸಿನಿಮಾದ ನಾಯಕನೂ ಹಾಗೆಯೇ. ಯಾರಿಗೇ ಆಗಲಿ, ಎಂಥದ್ದೇ ಸಂದರ್ಭ ಬರಲಿ ವಿಚಲಿತನಾಗದೆ ಧಾರಾಳವಾಗಿ ಕೊಡುತ್ತಲೇ ಹೋಗುತ್ತಾನೆ. ಕೊಡುವುದು ಅವನಿಗೆ ಸಂತೋಷ ತರುತ್ತದೆ ಮಾತ್ರವಲ್ಲ, ಅದು ಆತನ ಪ್ರತಿಷ್ಠೆ ಕೂಡ. ಕೊಡುವಾಗಲೆಲ್ಲಾ ನಾಯಕನಿಂದ 'ಕಸ್ತೂರಿ ನಿವಾಸದ ವಂಶದ ಕೈ ಯಾವಾಗಲೂ ಭೂಮಿಯನ್ನು ನೋಡುತ್ತದೆಯೇ ಹೊರತು ಆಕಾಶವನ್ನು ನೋಡುವುದಿಲ್ಲ' ಎಂಬ ತುಂಬಾ ಜನಪ್ರಿಯವಾದ ಡೈಲಾಗ್ ಬರುತ್ತದೆ. ಕೊಟ್ಟು ಕೊಟ್ಟು ಬರಿಗೈಯಾಗಿ ಕಡೆಯಲ್ಲಿ ನಾಯಕ ನಿಧನವಾಗಿ ನೆಲಕ್ಕೆ ಬಿದ್ದ ಬಗೆಯನ್ನು ಆತನ ನಿಷ್ಠಾವಂತ ಸೇವಕ 'ನೋಡಿ ಆ ಕೈನಾ, ಈಗಲೂ ಭೂಮಿನೇ ನೋಡ್ತಾ ಇದೆ' ಎಂದು ಸಂಕಟಪಡುತ್ತಾನೆ.

ಹಿರೇಹಾಳು ಹಳ್ಳಿಯ ಇಬ್ರಾಹಿಂ ಸಾಹೇಬರ ಅಸಂಖ್ಯಾತ ಅಭಿಮಾನಿಗಳ ಸಂಕಟ ಈ ಬಗೆಯದ್ದೇ ಆಗಿದೆ. ಅವರು ಎಲ್ಲೇ ಇರಲಿ, ಹೇಗೇ ಇರಲಿ ಅವರ ಕೊಡುವ ಕೈ ನೆಲ ನೋಡುತ್ತದೆ. ಕೊಟ್ಟು ಕೊಟ್ಟು ಅವರು ಪಡೆದುಕೊಂಡದ್ದು ಏನು ಅಂತ ಅವರಿಂದ ಆಶ್ರಿತರಾದವರ ಕಣ್ಣಹನಿಗಳನ್ನು ನೋಡಿದರೆ ತಿಳಿಯುತ್ತದೆ. ಅದೊಂದು ಬಗೆಯ ಧನ್ಯತೆ. ಸಾರ್ಥಕ ಜೀವನಯಾನದ ಭವ್ಯತೆ. ನಾವು ಎಷ್ಟು ಗಳಿಸುತ್ತಿದ್ದೇವೆ? ಅನ್ನುವುದಕ್ಕಿಂತ ಹೇಗೆ ಗಳಿಸುತ್ತಿದ್ದೇವೆ ಅನ್ನುವುದು ಮುಖ್ಯ. ಹಾಗೆಯೇ ನಮ್ಮ ಗಳಿಕೆಯ ಉಪಯೋಗ ಯಾರಿಗೆ ಹೇಗೆ ಆಗುತ್ತಿದೆ ಎನ್ನುವುದು ಅದಕ್ಕಿಂತ ಮಹತ್ವದ್ದು. ನಾವು ಕಟ್ಟುವ ಕಸ್ತೂರಿ ನಿವಾಸದ ಭೌತಿಕ ಸ್ವರೂಪ ಶಾಶ್ವತವಲ್ಲ, ಅದರ ಆಂತರಿಕ ಆಶಯಗಳು ಮಾತ್ರ ಜೀವಂತವಾಗಿ ಉಪಯುಕ್ತವಾಗಿ ಇರುವಂತೆ ನೋಡಿಕೊಳ್ಳಬೇಕು. ❖

ಗುಂಡಣ್ಣ

ರಾಷ್ಟ್ರೀಯ

ಪ. ಬಂಗಾಳ: ಶೋಭನ್‌ದೇಬ್ ವಿರೋಧ ಪಕ್ಷದ ನಾಯಕ


ಶೋಭನ್‌ದೇಬ್ ಚಟ್ಟೋಪಾಧ್ಯಾಯ

ಕೋಲ್ಕತ್ತ(ಪಿಟಿಐ): ಬಾಲಿಗಂಜ್ ಕ್ಷೇತ್ರದ ಶಾಸಕ ಶೋಭನ್‌ದೇಬ್ ಚಟ್ಟೋಪಾಧ್ಯಾಯ ಅವರನ್ನು ಪಶ್ಚಿಮ ಬಂಗಾಳದ ವಿಧಾನಸಭೆಯ ವಿರೋಧ ಪಕ್ಷದ ನಾಯಕನನ್ನಾಗಿ ತೃಣಮೂಲ ಕಾಂಗ್ರೆಸ್ ಪಕ್ಷವು(ಟಿಎಂಸಿ) ನೇಮಿಸಿದೆ.

ಧಾನಿಯಾಖಲಿ ಕ್ಷೇತ್ರದ ಶಾಸಕಿ ಅಸೀಮಾ ಪಾತ್ರ ಮತ್ತು ಚೌರಂಗೀ ಕ್ಷೇತ್ರದ ಶಾಸಕಿ ನೈನಾ ಬಂಡೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ಉಪ ನಾಯಕರನ್ನಾಗಿ ನೇಮಿಸಲಾಗಿದೆ ಎಂದು ಪಕ್ಷವು ಶನಿವಾರ ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಕೋಲ್ಕತ್ತ ಪೋರ್ಟ್ ಶಾಸಕ ಫರ್ಹಾದ್ ಹಕೀಮ್ ಅವರನ್ನು ವಿಧಾನಸಭೆಯಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆ. ಹಕೀಮ್ ಅವರು ಕೋಲ್ಕತ್ತ ನಗರ ಪಾಲಿಕೆಯ ಮೇಯರ್ ಕೂಡ ಆಗಿದ್ದಾರೆ.

'ಹೊಸದಾಗಿ ನೇಮಕಗೊಂಡಿರುವ ನಾಯಕರು ಬಂಗಾಳದ ಜನರ ಹಿತಾಸಕ್ತಿಗಾಗಿ ಬದ್ಧತೆಯಿಂದ ಕೆಲಸ ಮಾಡುತ್ತಾರೆ' ಎಂದು ಟಿಎಂಸಿ ವಿಶ್ವಾಸ ವ್ಯಕ್ತಪಡಿಸಿದೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿತ್ತು. 294 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ ಮೊದಲ ಬಾರಿಗೆ ಸರ್ಕಾರ ರಚಿಸಿತು. ಟಿಎಂಸಿ 80 ಸ್ಥಾನಗಳನ್ನು ಗಳಿಸಿತು. ಸುವೇಂದು ಅಧಿಕಾರಿ ಶನಿವಾರ ಬೆಳಿಗ್ಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಯೋಗಿ ಸಚಿವ ಸಂಪುಟ ವಿಸ್ತರಣೆ

ಯೋಗಿ ಆದಿತ್ಯನಾಥ

ಲಖನೌ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸಚಿವ ಸಂಪುಟವನ್ನು ವಿಸ್ತರಿಸಲಾಗಿದ್ದು, ಒಟ್ಟು ಆರು ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ಈ ಪೈಕಿ ಇಬ್ಬರಿಗೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನೀಡಿದ್ದರೆ, ನಾಲ್ವರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಲಾಗಿದೆ. ಇದಲ್ಲದೇ ಇಬ್ಬರು ರಾಜ್ಯ ಸಚಿವರಿಗೆ ಸ್ವತಂತ್ರ ಖಾತೆ ನೀಡಲಾಗಿದೆ.

ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಭೂಪೇಂದ್ರ ಚೌಧರಿ ಹಾಗೂ ಎಸ್.ಪಿ ಮನೋಜ್ ಪಾಂಡೆ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಕೃಷ್ಣಪಾಸ್ವಾನ್, ಸುರೇಂದ್ರತ ದಿಲೆರ್, ಹಂಸರಾಜ್ ವಿಶ್ವಕರ್ಮ ಹಾಗೂ ಕೈಲಾಶ್ ರಜಪೂತ್ ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರಿಗೆ ಸ್ವತಂತ್ರ ಖಾತೆಗಳನ್ನು ನೀಡಲಾಗಿದೆ.

ದ್ರಾವಿಡ ನಾಡಿಗೆ ವಿಜಯ್ 'ದಳಪತಿ'

ಒಂದನೇ ಪುಟದಿಂದ...

ಮೊದಲ ಸಾಲಿನಲ್ಲಿ ಕುಳಿತಿದ್ದ ವಿಜಯ್ ಪೋಷಕರು, ತಮ್ಮ ಮಗ ಚೊಚ್ಚಲ ಚುನಾವಣೆಯಲ್ಲೇ ರಾಜಕೀಯವಾಗಿ ಉತ್ತುಂಗಕ್ಕೇರಿದ್ದನ್ನು ನೋಡಿ ಭಾವುಕರಾದರು.

ಸ್ಟಾಲಿನ್ ಗೈರು: ಮಾಜಿ ಮುಖ್ಯಮಂತ್ರಿಗಳಾದ ಡಿಎಂಕೆ ಅಧ್ಯಕ್ಷ ಎಂ.ಕೆ ಸ್ಟಾಲಿನ್ ಮತ್ತು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ವಿಜಯ್ ಪತ್ನಿ ಸಂಗೀತಾ ಹಾಗೂ ಇಬ್ಬರು ಮಕ್ಕಳೂ ಗೈರಾಗಿದ್ದರು. ಟಿವಿಕೆಗೆ ಸರ್ಕಾರ ರಚಿಸಲು ಬೆಂಬಲ ನೀಡಿರುವ ವಿಸಿಕೆ, ಸಿಪಿಐ, ಸಿಪಿಎಂ ಮತ್ತು ಐಯುಎಂಎಲ್ ಪಕ್ಷಗಳ ನಾಯಕರು ಸಮಾರಂಭದಲ್ಲಿ ಪಾಲ್ಗೊಂಡರು.

ವಿಜಯ್ ಅವರು ರಾಹುಲ್ ಗಾಂಧಿ ಮತ್ತು ಸಂಪುಟ ಸಹೋದ್ಯೋಗಿಗಳು ಸೇರಿದಂತೆ ವೇದಿಕೆಯಲ್ಲಿದ್ದವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ಮೂಲಕ ಸುಮಾರು ಒಂದು ಗಂಟೆ ನಡೆದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಐತಿಹಾಸಿಕ ಸೇಂಟ್ ಜಾರ್ಜ್ ಕೋಟೆಯ ಆವರಣದಲ್ಲಿರುವ ತಮಿಳುನಾಡು ಸಚಿವಾಲಯಕ್ಕೆ ಭೇಟಿ ನೀಡಿ ಅಧಿಕಾರ ವಹಿಸಿಕೊಂಡು ಔಪಚಾರಿಕವಾಗಿ ಕೆಲಸ ಆರಂಭಿಸಿದರು.

ಉದಯನಿಧಿ ಡಿಎಂಕೆ ಶಾಸಕಾಂಗ ಪಕ್ಷದ ನಾಯಕ: ಮಾಜಿ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಡಿಎಂಕೆ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಮಾಜಿ ಸಚಿವ ಮತ್ತು ಪಕ್ಷದ ಹಿರಿಯ ನಾಯಕ ಕೆ.ಎನ್ ನೆಹ್ರು ಅವರನ್ನು ಶಾಸಕಾಂಗ ಪಕ್ಷದ ಉಪ ನಾಯಕ ಹಾಗೂ ಮಾಜಿ ಸಚಿವ ಇ.ವಿ ವೇಲು ಅವರನ್ನು ಸಚೇತಕರನ್ನಾಗಿ ಆಗಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪದಬಂಧ 6399

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕದಲದೇ ಇರುವಂಥದ್ದು (2)
3.ಸ್ಥಾವರ ಹಾಗೂ ಜಂಗಮ ವಸ್ತುಗಳು (4)
5.ಮರದ ಸಮೀಪ ನಡೆದ ಕಾಳಗ (3)
7.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
10.ಸುಲಿಗೆಗೆ ಬಂದಾತ ತೋರಿದ ಅತೀ ಪರಿಚಯ (3)
11.ಈತ ವಿಧಿಯನ್ನು ಬರೆಯುವವನು (3)
12.ಯುದ್ಧ ಮಾಡಲು ಸಜ್ಜಾದ ಭೂಮಿ (4)
14.ನಯ ನಾಜೂಕು ಇಲ್ಲದವನು! (3)
16.ಸರ ಹಿಡಿದಿರುವ ಸೈನ್ಯದ ಮುಖ್ಯಸ್ಥ (4)
17.ಜರೂರಾಗಿ ಹಾಕಿದ ಸಹಿ (2)

ಮೇಲಿಂದ ಕೆಳಕ್ಕೆ
2.ಭರವಸೆ ನೀಡಿದಾಗ ಹೆಚ್ಚಿದ ವೇಗ! (3)
3.ಈತ ಚರ್ಮದ ಕೆಲಸಗಾರ (3)
4.ಚತುರಂಗ ಬಲದಲ್ಲಿರುವವ ಜಾಣ! (3)
6.ಕಡೆದ ಮೊಸರು (3)
8.ಅನ್ಯ ಮಾರ್ಗವಿದು (4)
9.ವರನ ಹತ್ತಿರವಿರುವ ಚಿನ್ನ (4)
11.ಹೆಂಡತಿಯನ್ನು ಕಳೆದುಕೊಂಡವನು (3)
13.ಗರ ಬಡಿದವನಿರುವ ಗವಿ (3)
14.ಬಿನ್ನಾಣ ಈ ರೀತಿ ಬಂದಿದೆ (3)
15.ಗಂಡು ಕುರಿ ಇಲ್ಲಿದೆ (3)

1	2	■	3		4		■	■
■		■		■		■	■	■
■	5	6		■	7			8
9	■		■	■	■	■	■	
10			■	■	■	11		
	■	■	■	■	■		■	
12			13	■	14		15	■
■	■	■		■		■		■
■	■	16				■	17	

6398ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಾಕ್ಷಿಗಾರ 3.ಪರೋಕ್ಷ
4.ವಿಶಾರದ 6.ರಥಿಕ
7.ಅಡಾವುಡಿ 8.ಸಹಜ
9.ಅನುಮತಿ 12.ಸನದು
13.ಕನ್ನಡಕ 15.ರಂಜಕ
16.ಡಮರುಗ

ಮೇಲಿಂದ ಕೆಳಕ್ಕೆ:
1.ಸಾಕ್ಷರತೆ 2.ರವಿ
3.ಪಕಳೆ 5.ದಮ್ಮಡಿ
7.ಅಜ 8.ಸತಿ 9.ಅಳ್ಳಕ
10.ಚದುರಂಗ 11.ಭೌತಿಕ
14.ಕಡ

ಸುಡೊಕು 6782

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7				1			8	
	3	6	8		9	5		7
4			7				9	
	7							
		4	9	3	8		7	
8		1						
	8			9			4	
1		2		8		7	6	
	4		1		7		2	

6781 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಮೇ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣನವಮಿ ಗಂ. 15-25 ನಕ್ಷತ್ರ: ಶತಭಿಷ ಗಂ. 25-29 ಯೋಗ: ಐಂದ್ರ ಗಂ. 25-04 ಕರಣ: ಗರ ಗಂ. 15-25, ಮೇಷ ಮಾಸದ 28 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 , ಸೂರ್ಯೋದಯ : 06-09 ಸೂರ್ಯಾಸ್ತ : 06-44, ಮುಸ್ಲಿಂ ದಿನಾಂಕ : 23 ಜುಲ್ಕಾದಾ, ಅದೃಷ್ಟ ಸಂಖ್ಯೆ : 7, 4.

ಮೇಷ: ಮಾನಸಿಕ ನೆಮ್ಮದಿಗೆ ಪುಣ್ಯಕ್ಷೇತ್ರಗಳ ದರ್ಶನ ಮಾಡುವುದು ಉತ್ತಮ. ವೃತ್ತಿಯಲ್ಲಿ ಹೊಸ ಪ್ರಯತ್ನಗಳು ಲಾಭ ತಂದು ಕೊಡಲಿವೆ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು.

ವೃಷಭ: ರಾಜಕೀಯ ವರ್ಗದವರಿಗೆ ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಕಾಲ. ಕೆಲಸಗಾರರ ಅಸಹಕಾರದಿಂದ ನಷ್ಟ ನೋಡಬೇಕಾಗಬಹುದು. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುವುದು.

ಮಿಥುನ: ಕಾಡುವ ಸಮಸ್ಯೆಯಿಂದ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿಬರುವುದು. ಕಣ್ಣಿನ ದೃಷ್ಟಿ ಸರಿಪಡಿಸಿಕೊಳ್ಳಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುವುದು. ಬರಹಗಾರರಿಗೆ ವಿಷಯ ಸಂಗ್ರಹವಾಗುವುದು.

ಕರ್ಕಾಟಕ: ಸಾಹಸ ಕೃತ್ಯಗಳನ್ನು ಕೈಗೊಳ್ಳುವ ಮನೋಭಿಲಾಷೆ ಕಾಡಲಿದ್ದು ಅದಕ್ಕೆ ಪ್ರಯತ್ನಿಸುವಿರಿ. ಮಗನ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷ. ಇಂದು ಅಪೇಕ್ಷಿಸುತ್ತಿರುವ ವಸ್ತು ಕೈ ಸೇರಲಿದೆ.

ಸಿಂಹ: ಅತಿ ಆಲಸ್ಯವು ಕೆಲಸಕ್ಕೆ ಅಡ್ಡಿ ಮಾಡಲಿದೆ. ಅದರ ಪರಿಣಾಮ ಜನರ ಅಪಹಾಸ್ಯಕ್ಕೆ ಕಾರಣರಾಗುವಿರಿ. ಹಳೆಯ ವಾಹನದ ಕೊಡು–ಕೊಳ್ಳುವಿಕೆಯಲ್ಲಿ ಲೆಕ್ಕಪತ್ರಗಳ ಬಗ್ಗೆ ಗಮನವಿರಲಿ.

ಕನ್ಯಾ: ವಸ್ತ್ರಗಳ ಖರೀದಿಯಲ್ಲಿ ವಿಶೇಷ ರಿಯಾಯಿತಿ ಸಿಕ್ಕಿ ಲಾಭ ಪಡೆಯುವಿರಿ. ಮಾನಸಿಕ ಸ್ಥಿತಿ ಹತೋಟಿಗೆ ತರುವಲ್ಲಿ ಶ್ರಮದ ಅಗತ್ಯ. ನಿರುದ್ಯೋಗಿಗಳಿಗೆ ಲೆಕ್ಕಪತ್ರಗಳ ಜವಾಬ್ದಾರಿ ನೋಡುವ ಕೆಲಸ ಸಿಗುವ ಸಾಧ್ಯತೆ ಇದೆ.

ತುಲಾ: ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿ. ಕೃಷಿ ಪ್ರದೇಶವನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳಲು ತೀರ್ಮಾನಿಸುವುದು ಉತ್ತಮ.

ವೃಶ್ಚಿಕ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ಆದಾಯವಿದೆ. ಬಂಧುಗಳ ಮನೆಯ ಸತ್ಕಾರ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಉದ್ಯೋಗ ವ್ಯವಹಾರಗಳಲ್ಲಿ ತೊಂದರೆಗಳಿರುವುದಿಲ್ಲ.

ಧನು: ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಬದುಕಿನಲ್ಲಿ ಮುಂದಿನ ಹೆಜ್ಜೆ ಇಡುವುದು ಉತ್ತಮ. ವ್ಯವಹಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ಇರಿ.

ಮಕರ: ಹಿಡಿದ ಕಾರ್ಯಗಳಲ್ಲಿ ವಿಳಂಬ ಉಂಟಾಗುವುದು ಅಥವಾ ಅಂತಿಮ ಕ್ಷಣದಲ್ಲಿ ನೆರವೇರುವ ಅನುಭವವಾಗಲಿದೆ. ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರಬರಲಿದೆ.

ಕುಂಭ: ಪ್ರತಿಯೊಂದರಲ್ಲೂ ಯಶಸ್ಸನ್ನು ಕಾಣಲು ಅಪೇಕ್ಷಿಸುವ ಅದಕ್ಕಾಗಿ ಶ್ರಮಪಡಬೇಕಾದ ಅಗತ್ಯವಿದೆ. ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಉದ್ಯೋಗ ದೊರೆತು ಸಮಾಧಾನವಾಗುವುದು.

ಮೀನ: ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡದೆ ನಿಮ್ಮ ಕೆಲಸಗಳನ್ನು ಮಾಡಿಕೊಂಡಲ್ಲಿ ಲಾಭ ದೊರಕುವುದು. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುವಿರಿ.

ಅಂತಿಮ ಎಸೆತದಲ್ಲಿ ಗೆದ್ದ ಆರ್‌ಸಿಬಿ

ಭುವಿ ಬೌಲಿಂಗ್ ಸೊಬಗು • ಕೃಣಾಲ್ ಪಾಂಡ್ಯ ದಿಟ್ಟ ಬ್ಯಾಟಿಂಗ್ • ಅಗ್ರಸ್ಥಾನಕ್ಕೆ ರಜತ್ ಪಾಟೀದಾರ್ ಬಳಗ

• ಗಿರೀಶ ದೊಡ್ಡಮನಿ

ಕೃಣಾಲ್ ಪಾಂಡ್ಯ ಚಿತ್ರಗಳು: ಎಎಫ್‌ಪಿ

ರಾಯಪುರ: ಕ್ಷಣ ಕ್ಷಣಕ್ಕೂ ಕುತೂಹಲ ಕೆರಳಿಸುವ 'ಸಸ್ಪೆನ್ಸ್ ಥ್ರಿಲ್ಲರ್' ಚಲನಚಿತ್ರದಂತಿದ್ದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯಭೇರಿ ಬಾರಿಸಿತು. 'ಉದ್ಯಾನನಗರಿ'ಯಿಂದ ಇಲ್ಲಿಯ ಶಹೀದ್ ವೀರನಾರಾಯಣ ಕ್ರೀಡಾಂಗಣಕ್ಕೆ ಬಂದು ಸೇರಿದ್ದ ತನ್ನ ನೂರಾರು ಅಭಿಮಾನಿಗಳಿಗೆ ಭರ್ತಿ ಮನರಂಜನೆಯ ಜೊತೆಗೆ ಗೆಲುವಿನ ಕಾಣಿಕೆಯನ್ನೂ ನೀಡಿತು.

ಭಾನುವಾರ ಇಲ್ಲಿ ನಡೆದ ಐಪಿಎಲ್ ಪಂದ್ಯವು ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿತ್ತು. ಮುಂಬೈ ಇಂಡಿಯನ್ಸ್ ಎದುರು 2 ವಿಕೆಟ್‌ಗಳಿಂದ ಜಯಿಸಿದ ಹಾದಿ ಸಾಹಸಯಾತ್ರೆಯಂತಿತ್ತು. 167 ರನ್‌ಗಳ ಜಯದ ಗುರಿಯನ್ನು ಬೆನ್ನಟ್ಟಿದ್ದ ಹಾದಿಯಲ್ಲಿ ಆರ್‌ಸಿಬಿಯ ಪ್ರಮುಖ ಬ್ಯಾಟರ್‌ಗಳು ವಿಫಲರಾದರು. ಅದರಲ್ಲೂ ವಿರಾಟ್ ಕೊಹ್ಲಿ ಮತ್ತು ಟಿಮ್ ಡೇವಿಡ್ ಅವರು ಸೊನ್ನೆ ಸುತ್ತಿದ್ದು ತಂಡಕ್ಕೆ ಸಂಕಷ್ಟ ತಂದೊಡ್ಡಿತು. ಆದರೆ, ಕೃಣಾಲ್ ಪಾಂಡ್ಯ (73 ರನ್) ಅವರ ವೀರೋಚಿತ ಹೋರಾಟ ಎಲ್ಲರ ಮನಗೆದ್ದಿತು. ಎಡಗಾಲಿನ ಸ್ನಾಯುಸೆಳೆತದ ನೋವು ಅನುಭವಿಸುತ್ತ, ಬೀಳುತ್ತ, ಏಳುತ್ತ ಅವರು ಸಿಕ್ಸರ್‌ಗಳನ್ನು ಹೊಡೆದರು. ತಂಡದ ಗೆಲುವಿನ ಅವಕಾಶವನ್ನು ಜೀವಂತವಾಗಿಟ್ಟರು. ದೀಪಕ್ ಚಾಹರ್ (33ಕ್ಕೆ2) ಮತ್ತು ಕಾರ್ಬಿನ್ ಬಾಷ್ (26ಕ್ಕೆ4) ಅವರ ಕರಾರುವಾಕ್ ದಾಳಿಯ ನಡುವೆಯೂ ಕೃಣಾಲ್ ಆಟ ಚೇತೋಹಾರಿಯಾಗಿತ್ತು.

ಆದರೆ, 18ನೇ ಓವರ್‌ನಲ್ಲಿ ಅಲ್ಲಾಹ ಘಜನಫರ್ ಎಸೆತವನ್ನು ಕೃಣಾಲ್ ಸಿಕ್ಸರ್ ಗೆತ್ತುವ ಪ್ರಯತ್ನ ಮಾಡಿದರು. ಬೌಂಡರಿ ಲೈನ್‌ನಲ್ಲಿ ತಿಲಕ್ ವರ್ಮಾ ಸಾಹಸದಿಂದ ಹಿಡಿದ ಕ್ಯಾಚ್‌ಗೆ ಕ್ಯಾಚ್‌ಗೆ ಕೃಣಾಲ್ ಡಗ್‌ಔಟ್ ಸೇರಬೇಕಾಯಿತು.

ಕೊನೆಯ ಎರಡು ಓವರ್‌ಗಳಲ್ಲಿ 18 ರನ್ ಅಗತ್ಯವಿತ್ತು. ಆಗ ಜಸ್‌ಪ್ರೀತ್ ಬೂಮ್ರಾ 19ನೇ ಓವರ್‌ನಲ್ಲಿ ಕೇವಲ ಮೂರು ರನ್ ಬಿಟ್ಟುಕೊಟ್ಟರು. ಆರ್‌ಸಿಬಿಗೆ ಕೊನೆಯ ಓವರ್‌ನಲ್ಲಿ 15 ರನ್ ಬೇಕಿತ್ತು. ಯುವ ಆಟಗಾರ ರಾಜ್ ಬಾವಾ ಈ ಓವರ್ ಬೌಲಿಂಗ್ ಮಾಡಿ ದರು. ಅವರು 3 ವೈಡ್,1 ನೋಬಾಲ್ ಹಾಕಿದರು. ಹೀಗಾಗಿ ಆರ್‌ಸಿಬಿಗೆ ಹೆಚ್ಚುವರಿ ರನ್ ಸಿಕ್ಕವು. ಇದೇ ಓವರ್‌ನಲ್ಲಿ ರೊಮಾರಿಯೊ ಶೆಫರ್ಡ್ ಔಟಾದಾಗ ಮುಂಬೈ ತಂಡದಲ್ಲಿ ಜಯದ ಆಸೆ ಚಿಗುರಿತ್ತು.

ಭುವನೇಶ್ವರ್ ಕುಮಾರ್

ಕ್ರೀಸ್‌ನಲ್ಲಿ ಜೊತೆಗೂಡಿದ ಭುವನೇಶ್ವರ್ ಕುಮಾರ್ ಮತ್ತು ರಸಿಕ್ ದಾರ್ ಅವರು ದಿಟ್ಟ ಆಟವಾಡಿದರು. ಓವರ್‌ನ ನಾಲ್ಕನೇ ಎಸೆತವನ್ನು ಸಿಕ್ಸರ್‌ಗೆತ್ತಿದ ಭುವಿ, ಐದನೇಯದ್ದರಲ್ಲಿ ಒಂದು ರನ್ ಓಡಿದರು. ಕೊನೆಯ ಎಸೆತದಲ್ಲಿ ಎರಡು ರನ್ ಬೇಕಿದ್ದ ಸಂದರ್ಭದಲ್ಲಿ ರಸಿಕ್ ಚುರುಕುತನ ಮೆರೆದು ಗೆಲುವಿನ ಸಂಭ್ರಮ ಆಚರಿಸಿದರು.

ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಕ್ಕೇರಿತು. ಮುಂಬೈ ಪ್ಲೇಆಫ್ ರೇಸ್‌ನಿಂದ ಹೊರಬಿತ್ತು.

ಭುವಿ ಬಿರುಗಾಳಿ: ಟಾಸ್ ಗೆದ್ದ ಬೆಂಗಳೂರು ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಭುವನೇಶ್ವರ್ ಕುಮಾರ್ (4–0–23–4) ತಮ್ಮ ಅಮೋಘ ಬೌಲಿಂಗ್ ಮೂಲಕ ಮುಂಬೈ ತಂಡವನ್ನು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 166 ರನ್‌ಗಳಿಗೆ ಕಟ್ಟಿಹಾಕಿದರು. ತಿಲಕ್ ವರ್ಮಾ (57; 42ಎ) ಮತ್ತು ನಮನ್ ಧೀರ್ (47; 32ಎ) ಅವರ ಆಟ ದಿಂದಾಗಿ ಈ ಮೊತ್ತ ಕಲೆಹಾಕಲು ಸಾಧ್ಯವಾಯಿತು.

ಭುವಿ ಹಾಕಿದ ಮೊದಲ ಎಸೆತದಲ್ಲಿಯೇ ವಿಕೆಟ್ ಲಭಿಸುವ ಅವಕಾಶವೊಂದು ಇತ್ತು. ರಿಯಾನ್ ರಿಕೆಲ್ಟನ್ ಹೊಡೆದ ಚೆಂಡು ಗಾಳಿಯಲ್ಲಿ ಸಾಗಿತು. ಅದನ್ನು ಕ್ಯಾಚ್ ಮಾಡಲು ಮಿಡ್‌ಆಫ್‌ನಲ್ಲಿದ್ದ ರಜತ್ ಪಾಟೀದಾರ್ ಅವರು ಪಟ್ಟ ಪ್ರಯತ್ನ ಫಲಿಸಲಿಲ್ಲ. ಆದರೆ ಅದೇ ಓವರ್‌ನ ಕೊನೆಯ ಎಸೆತದಲ್ಲಿ ರಿಕೆಲ್ಟನ್ ಅವರು ರಜತ್ ಅವರಿಗೆ ಅದೇ ಜಾಗದಲ್ಲಿ ಸುಲಭ ಕ್ಯಾಚ್ ಕೊಟ್ಟು ನಿರ್ಗಮಿಸಿದರು. ಇದರೊಂದಿಗೆ ಭುವಿಯ ಬೇಟೆ ಆರಂಭವಾಯಿತು.

ತಮ್ಮ ಎರಡನೇ ಓವರ್‌ನಲ್ಲಿ ಅವರು ಹಾಕಿದ ನಕಲ್ ಬಾಲ್‌ಗೆ ರೋಹಿತ್ ಶರ್ಮಾ (22; 10ಎ) ದಂಡ ತೆತ್ತರು. ಆಫ್‌ಸ್ಟಂಪ್ ಹೊರಗಿದ್ದ ಚೆಂಡನ್ನು ಕೆಣಕಿದರು. ವಿಕೆಟ್‌ಕೀಪರ್ ಜಿತೇಶ್ ಶರ್ಮಾ ತಮ್ಮ ಬಲಕ್ಕೆ ನೆಗೆದು ಪಡೆದ ಆಕರ್ಷಕ ಕ್ಯಾಚ್‌ಗೆ ರೋಹಿತ್ ನಿರ್ಗಮಿಸಿದರು. ಹಾರ್ದಿಕ್ ಪಾಂಡ್ಯ ಫಿಟ್ ಇರದ ಕಾರಣ ನಾಯಕತ್ವ ವಹಿಸಿರುವ ಸೂರ್ಯಕುಮಾರ್ ಯಾದವ್ ತಾವೆದುರಿಸಿದ ಮೊದಲ ಎಸೆತದಲ್ಲಿಯೇ ಸ್ಲಿಪ್‌ನಲ್ಲಿದ್ದ ವಿರಾಟ್ ಕೊಹ್ಲಿಗೆ ಕ್ಯಾಚಿತ್ತರು. ಭುವಿ ಸಂಭ್ರಮಿಸಿದರು.

ಪವರ್‌ಪ್ಲೇ ನಂತರ ಕಾಶ್ಮೀರದ ಹುಡುಗ ರಸಿಕ್ ಸಲಾಮ್ ಎಸೆತದಲ್ಲಿ ತಿಲಕ್ ವರ್ಮಾ ಕೊಟ್ಟ ಸುಲಭ ಕ್ಯಾಚ್ ಅನ್ನು ಸುಯಶ್ ಶರ್ಮಾ ಕೈಚೆಲ್ಲಿದರು. 17ನೇ ಓವರ್‌ನವರೆಗೂ ವರ್ಮಾ ಅವರ ಆಟ ನಡೆಯಿತು. ಏಕಾಗ್ರತೆ ಮತ್ತು ತಾಳ್ಮೆ ಮೇಳೈಸಿದ ಅರ್ಧಶತಕ ಗಳಿಸಿದರು. ನಮನ್ ಧೀರ್ ಅವರೊಂದಿಗೆ 82 ರನ್ ಸೇರಿಸಿದರು. 18ನೇ ಓವರ್ ಹಾಕಲು ಮರಳಿದ ಭುವಿ, ವರ್ಮಾ ಇನಿಂಗ್ಸ್‌ಗೆ ತೆರೆಯೆಳೆದರು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 7 ವಿಕೆಟ್‌ಗೆ 166 (20 ಓವರ್‌ಗಳಲ್ಲಿ)

ರಿಕೆಲ್ಟನ್ ಸಿ ಪಾಟೀದಾರ್ ಬಿ ಭುವನೇಶ್ವರ್ 2 (4ಎ)
ರೋಹಿತ್ ಸಿ ಶರ್ಮಾ ಬಿ ಭುವನೇಶ್ವರ್ 22 (10ಎ, 4x2, 6x2)
ನಮನ್ ಬಿ ರಸಿಕ್ ಸಲಾಂ 47 (32ಎ, 4x5, 6x2)
ಸೂರ್ಯಕುಮಾರ್ ಸಿ ಕೊಹ್ಲಿ ಬಿ ಭುವನೇಶ್ವರ್ 0 (1ಎ)
ತಿಲಕ್ ಬಿ ಭುನವೇಶ್ವರ್ 57 (42ಎ, 4x3, 6x2)
ಜ್ಯಾಕ್ಸ್ ಸಿ ಬೆಥೆಲ್ ಬಿ ಶೆಫರ್ಡ್ 10 (10ಎ, 4x1)
ಬಾವಾ ಸಿ ಪಾಟೀದಾರ್ ಬಿ ಹೇಜಲ್‌ವುಡ್ 16 (14ಎ, 4x1)
ಕಾರ್ಬಿನ್ ಬಾಷ್ ಔಟಾಗದೇ 5 (5ಎ)
ದೀಪಕ್ ಚಾಹರ್ ಔಟಾಗದೇ 1 (2ಎ)
ಇತರೆ: 6 (ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1–4 (ರಿಯಾನ್ ರಿಕೆಲ್ಟನ್, 0.6), 2–28 (ರೋಹಿತ್ ಶರ್ಮಾ, 2.5), 3–28 (ಸೂರ್ಯಕುಮಾರ್ ಯಾದವ್, 2.6), 4–110 (ನಮನ್ ಧೀರ್, 12.3), 5–132 (ವಿಲ್ ಜ್ಯಾಕ್ಸ್, 15.2), 6–155 (ತಿಲಕ್ ವರ್ಮಾ, 17.6), 7–161 (ರಾಜ್ ಬಾವಾ, 18.6).
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–23–4; ಜೋಶ್ ಹೇಝಲ್‌ವುಡ್ 4–0–33–1; ರಸಿಕ್ ಸಲಾಂ 4–0–42–1; ರೊಮಾರಿಯೊ ಶೆಫರ್ಡ್ 3–0–18–1; ಕೃಣಾಲ್ ಪಾಂಡ್ಯ 3–0–26–0; ಸುಯಶ್ ಶರ್ಮಾ 2–0–21–0

ರಾಯಲ್ ಚಾಲೆಂಜರ್ಸ್ ಬೆಂಗಳೂರು: 8ಕ್ಕೆ 167 (20 ಓವರ್‌ಗಳಲ್ಲಿ)

ಬೆಥೆಲ್ ಸಿ ತಿಲಕ್ ಬಿ ಬಾಷ್ 26 (27ಎ, 4x2)
ವಿರಾಟ್ ಸಿ ಬಾವಾ ಬಿ ಚಾಹರ್ 0 (1ಎ)
ಪಡಿಕ್ಕಲ್ ಸಿ ರಿಕೆಲ್ಟನ್ ಬಿ ಚಾಹರ್ 12 (11ಎ, 4x1, 6x1)
ರಜತ್ ಸಿ ರಿಕೆಲ್ಟನ್ ಬಿ ಬಾಷ್ 8 (8ಎ, 4x1)
ಕೃಣಾಲ್ ಸಿ ತಿಲಕ್ ಬಿ ಘಜನಫರ್ 73 (46ಎ, 4x4, 6x5)
ಜಿತೇಶ್ ಸಿ ನಮನ್ ಬಿ ಬಾಷ್ 18 (12ಎ, 4x1, 6x2)
ಟಿಮ್ ಸಿ ರಿಕೆಲ್ಟನ್ ಬಿ ಬಾಷ್ 0 (1ಎ)
ಶೆಫರ್ಡ್ ಸಿ ತಿಲಕ್ ಬಿ ಬಾವಾ 4 (11ಎ)
ರಸಿಕ್ ಸಲಾಂ ಔಟಾಗದೇ 3 (2ಎ)
ಭುವನೇಶ್ವರ್ ಕುಮಾರ್ ಔಟಾಗದೇ 7 (2ಎ, 6x1)
ಇತರೆ: 16 (ಲೆಗ್‌ಬೈ 4, ನೋಬಾಲ್ 1, ವೈಡ್ 11)
ವಿಕೆಟ್ ಪತನ: 1–10 (ವಿರಾಟ್ ಕೊಹ್ಲಿ, 0.4), 2–24 (ದೇವದತ್ತ ಪಡಿಕ್ಕಲ್, 2.6), 3–39 (ರಜತ್ ಪಾಟೀದಾರ್, 5.1), 4–94 (ಜೇಕಬ್ ಬೆಥೆಲ್, 12.1), 5–131 (ಜಿತೇಶ್ ಶರ್ಮಾ, 15.5), 6–131 (ಟಿಮ್ ಡೇವಿಡ್, 15.6), 7–149 (ಕೃಣಾಲ್ ಪಾಂಡ್ಯ, 17.6), 8–157 (ರೊಮೆರಿಯೊ ಶೆಫರ್ಡ್, 19.3)
ಬೌಲಿಂಗ್: ದೀಪಕ್ ಚಾಹರ್ 4–0–33–2, ಜಸ್‌ಪ್ರೀತ್ ಬೂಮ್ರಾ 4–0–20–0, ಕಾರ್ಬಿನ್ ಬಾಷ್ 4–1–26–4, ವಿಲ್ ಜ್ಯಾಕ್ಸ್ 2–0–13–0, ಘಜನಫರ್ 3–0–32–1, ರಾಜ್ ಬಾವಾ 3–0–39–1
ಪಂದ್ಯದ ಆಟಗಾರ: ಭುವನೇಶ್ವರ್ ಕುಮಾರ್

278 ಆರ್‌ಸಿಬಿಯ ವಿರಾಟ್ ಕೊಹ್ಲಿ ಮತ್ತು ಮುಂಬೈನ ರೋಹಿತ್ ಶರ್ಮಾ ಅವರಿಬ್ಬರೂ ಐಪಿಎಲ್‌ನಲ್ಲಿ ಆಡಿರುವ ಪಂದ್ಯಗಳು. ಎಂ.ಎಸ್. ಧೋನಿ ಅವರ ದಾಖಲೆಯನ್ನು ಇಬ್ಬರೂ ಸರಿಗಟ್ಟಿದರು

21 ಭುವನೇಶ್ವರ್ ಕುಮಾರ್ ಅವರು ಈ ಸಲದ ಟೂರ್ನಿಯಲ್ಲಿ 20ಕ್ಕೂ ಹೆಚ್ಚು ವಿಕೆಟ್ ಗಳಿಸಿದರು. ಅವರು ಇಂತಹ ಸಾಧನೆಯನ್ನು ಒಟ್ಟು ನಾಲ್ಕು ಆವೃತ್ತಿಗಳಲ್ಲಿ ಮಾಡಿದ್ದಾರೆ.

ಉರ್ವಿಲ್ ಮಿಂಚು; ಚೆನ್ನೈ ಜಯಭೇರಿ

ಉರ್ವಿಲ್ ಪಟೇಲ್ ಪಿಟಿಐ ಚಿತ್ರ

ತಂದೆಗೆ ಅರ್ಪಣೆ

ಮೊಹಮ್ಮದ್ ಶಮಿ ಎಸೆತದಲ್ಲಿ ಒಂದು ರನ್ ತೆಗೆಯುವ ಮೂಲಕ 13ನೇ ಎಸೆತದಲ್ಲಿ ಅರ್ಧ ಶತಕ ಪೂರೈಸಿದ ಉರ್ವಿಲ್ ಪಟೇಲ್ ಆಗಸದತ್ತ ನೋಡಿದರು. ಕಿಸೆಯಿಂದ ಚೀಟಿಯನ್ನು ಹೊರತೆಗೆದರು. ಅದರಲ್ಲಿ 'ದಿಸ್ ಈಸ್ ಫಾರ್ ಯು ಪಾಪಾ' (ಅಪ್ಪಾ, ಇದು ನಿಮಗೋಸ್ಕರ) ಎಂದು ಬರೆದಿತ್ತು.

ಉರ್ವಿಲ್ ಅವರನ್ನು ವೃತ್ತಿಪರ ಕ್ರಿಕೆಟಿಗರನ್ನಾಗಿ ರೂಪಿಸುವಲ್ಲಿ ತಂದೆ ಮುಕೇಶ್ ಪಟೇಲ್ ಪ್ರಮುಖ ಪಾತ್ರವಹಿಸಿದ್ದಾರೆ.

ಚೆನ್ನೈ (ಪಿಟಿಐ): ಮಿಂಚಿನ ಆಟವಾಡಿದ ಉರ್ವಿಲ್ ಪಟೇಲ್ ಐಪಿಎಲ್‌ನಲ್ಲಿ ಅತಿ ವೇಗದ ಅರ್ಧಶತಕದ ದಾಖಲೆಯನ್ನು ಸರಿಗಟ್ಟಿದರು. ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಪಡೆದ ಐದು ವಿಕೆಟ್ ಗೆಲುವಿನಲ್ಲಿ ಅವರ ಆಟವೇ ಎದ್ದುಕಂಡಿತು.

ಮೊದಲು ಆಡಿದ ಎಲ್‌ಎಸ್‌ಜಿ ತಂಡಕ್ಕೆ ಜೋಶ್ ಇಂಗ್ಲಿಸ್ (85, 33 ಎಸೆತ, 4x10, 6x6) ಭರ್ಜರಿ ಆರಂಭ ನೀಡಿದ್ದರು. ಆದರೆ ನಂತರ ಚೆನ್ನೈ ಬೌಲರ್‌ಗಳು ಎದುರಾಳಿಗಳ ಅಬ್ಬರಕ್ಕೆ ಲಗಾಮು ಹಾಕಿ ಮೊತ್ತವನ್ನು 203ಕ್ಕೆ (8 ವಿಕೆಟ್‌ಗೆ) ನಿಯಂತ್ರಿಸಿದರು. ಆತಿಥೇಯರು ಇನ್ನೂ ನಾಲ್ಕು ಎಸೆತಗಳಿರುವಂತೆ 5 ವಿಕೆಟ್‌ಗೆ 208 ರನ್ ಹೊಡೆದು ಸಂಭ್ರಮಿಸಿದರು. ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೇರಿದರು.

27 ವರ್ಷ ವಯಸ್ಸಿನ ಉರ್ವಿಲ್ ಕೇವಲ 13 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸುವ ಮೂಲಕ ಯಶಸ್ವಿ ಜೈಸ್ವಾಲ್ ದಾಖಲೆ ಸರಿಗಟ್ಟಿದರು. 2023ರಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಜೈಸ್ವಾಲ್, ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಈ ದಾಖಲೆ ಸ್ಥಾಪಿಸಿದ್ದರು. ಉರ್ವಿಲ್ ಅವರ 65 ರನ್‌ಗಳ (23 ಎ) ಆಟದಲ್ಲಿ ಎಂಟು ಸಿಕ್ಸರ್, ಎರಡು ಬೌಂಡರಿಗಳಿದ್ದವು.

11 ಪಂದ್ಯಗಳಲ್ಲಿ ಎಂಟನೇ ಸೋಲು ಅನುಭವಿಸಿದ ಎಲ್‌ಎಸ್‌ಜಿ ತಂಡ ಪ್ಲೇಆಫ್ ಅವಕಾಶವನ್ನು ಕಳೆದುಕೊಂಡಿತು.

ಇಂಗ್ಲಿಸ್ ಮತ್ತು ಮಿಚೆಲ್ ಮಾರ್ಷ್ ಉತ್ತಮ ಆರಂಭ ನೀಡಿ ಕೇವಲ 5 ಓವರುಗಳಲ್ಲಿ 71 ರನ್ ಸೇರಿಸಿದ್ದರು. ಈ ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ಮಾರ್ಷ್ ಅವರ ಕೊಡುಗೆ ಈ ಮೊತ್ತದಲ್ಲಿ ಬರೇ 10 ರನ್ ಆಗಿತ್ತು. ನಿಕೋಲಸ್ ಪೂರನ್ (1) ಮತ್ತೆ ನಿರಾಸೆ ಮೂಡಿಸಿದರು.

ಆದರೆ ದೊಡ್ಡ ಮೊತ್ತ ಪೇರಿಸುವ ಲಖನೌ ಆಸೆಗೆ ಪೆಟ್ಟುನೀಡಿದ್ದು ಇಂಗ್ಲೆಂಡ್‌ನ ವೇಗಿ ಜೇಮಿ ಓವರ್ಟನ್. ಇನಿಂಗ್ಸ್‌ನ ಹತ್ತನೇ ಓವರಿನಲ್ಲಿ ಅವರು ಇಂಗ್ಲಿಸ್ ಮತ್ತು ನಾಯಕ ರಿಷಭ್ ಪಂತ್ (15, 12 ಎಸೆತ) ಅವರ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಮರ್ಕರಂ ರನೌಟ್ ಆದಾಗ ತಂಡದ ಮೊತ್ತ 5 ವಿಕೆಟ್‌ಗೆ 130. ಆದರೆ ಉಪಯುಕ್ತ ಆಟವಾಡಿದ ಶಾಬಾಜ್ ಅಹ್ಮದ್ (ಅಜೇಯ 43, 25 ಎ) ಮತ್ತು ಹಿಮ್ಮತ್ ಸಿಂಗ್ (17) ಅವರ ನಡುವೆ ಏಳನೇ ವಿಕೆಟ್‌ಗೆ 50 ರನ್ ಜೊತೆಯಾಟದಿಂದ ಮೊತ್ತ 200 ದಾಟಲು ಸಾಧ್ಯವಾಯಿತು.

ಚೆನ್ನೈ ತಂಡಕ್ಕೆ ನಾಯಕ ಋತುರಾಜ್ ಮತ್ತು ಸಂಜು ಸ್ಯಾಮ್ಸನ್ 45 ರನ್ ಸೇರಿಸುವ ಮೂಲಕ ಉತ್ತಮ ಆರಂಭ ನೀಡಿದರು. ಸಂಜು ನಿರ್ಗಮನದ ನಂತರ ಋತುರಾಜ್ ಜೊತೆಗೂಡಿದ ಉರ್ವಿಲ್ ಎದುರಾಳಿ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಎರಡನೇ ವಿಕೆಟ್‌ಗೆ ಕೇವಲ 34 ಎಸೆತಗಳಲ್ಲಿ 81 ರನ್ ಸೇರಿಸಿದರು.

ಚೆನ್ನೈ ತಂಡವೂ ಮಧ್ಯಮ ಹಂತದಲ್ಲಿ ಕುಸಿತ ಕಂಡರೂ ಕೊನೆಯಲ್ಲಿ ಶಿವಂ ದುಬೆ (ಅಜೇಯ 15) ಮತ್ತು ಪ್ರಶಾಂತ್ ವೀರ್ (ಅಜೇಯ 17, 12ಎಸೆತ) ಅವರು ತಂಡವನ್ನು ಗುರಿತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರುಗಳಲ್ಲಿ 8ಕ್ಕೆ 203 (ಜೋಶ್ ಇಂಗ್ಲಿಸ್ 85, ಶಾಬಾಜ್ ಅಹ್ಮದ್ 43; ಅನ್ಶುಲ್ ಕಂಬೋಜ್ 47ಕ್ಕೆ2, ಜೇಮಿ ಓವರ್ಟನ್ 36ಕ್ಕೆ3); ಚೆನ್ನೈ ಸೂಪರ್ ಕಿಂಗ್ಸ್: 19.2 ಓವರುಗಳಲ್ಲಿ 5ಕ್ಕೆ 208 (ಸಂಜು ಸ್ಯಾಮ್ಸನ್ 28, ಋತುರಾಜ್ ಗಾಯಕವಾಡ್ 42, ಉರ್ವಿಲ್ ಪಟೇಲ್ 65, ದಿಗ್ವೇಶ್ ರಾಥಿ 45ಕ್ಕೆ2, ಶಾಬಾಜ್ ಅಹ್ಮದ್ 30ಕ್ಕೆ2).
ಪಂದ್ಯದ ಆಟಗಾರ: ಜೇಮಿ ಓವರ್ಟನ್.

ಶ್ರೇಯಸ್ ಪಡೆಗೆ ಗೆಲುವಿನ ಹಳಿಗೆ ಮರಳುವ ಸವಾಲು

ಕಿಂಗ್ಸ್–ಕ್ಯಾಪಿಟಲ್ಸ್ ಮುಖಾಮುಖಿ

ಧರ್ಮಶಾಲಾ (ಪಿಟಿಐ): ಐಪಿಎಲ್ ಟೂರ್ನಿ ಅಂತಿಮ ಹಂತದತ್ತ ಸಾಗುತ್ತಿರುವಂತೆ ಪಂಜಾಬ್ ಕಿಂಗ್ಸ್ ಆಟದ ಮಟ್ಟ ನಿಧಾನವಾಗಿ ಕುಸಿಯುತ್ತಿರುವಂತೆ ಕಾಣುತ್ತಿದೆ. ಸೋಮವಾರ ಧರ್ಮಶಾಲಾದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿರುವ ಕಿಂಗ್ಸ್, ಈ ಕುಸಿತ ತಡೆಗಟ್ಟುವತ್ತ ಗಮನಹರಿಸಲಿದೆ.

ಮೊದಲ ಏಳು ಪಂದ್ಯಗಳಲ್ಲಿ ಅಜೇಯವಾಗಿದ್ದ ಶ್ರೇಯಸ್ ಅಯ್ಯರ್ ಬಳಗ ಕೊನೆಯ ಮೂರು ಪಂದ್ಯಗಳಲ್ಲಿ ಸೋಲನುಭವಿಸಿ ಒತ್ತಡಕ್ಕೆ ಸಿಲುಕಿದೆ. ಹೀಗಾಗಿ ಆಟದ ಎಲ್ಲ ವಿಭಾಗಗಳಲ್ಲಿ ಸುಧಾರಿತ ಪ್ರದರ್ಶನ ನೀಡುವ ಸವಾಲು ತಂಡದ ಎದುರು ಇದೆ.

ತಂಡ ಲೀಗ್‌ನ ಉಳಿದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಬೇಕಾಗಿದೆ. ಹೈದರಾಬಾದ್‌ನಲ್ಲಿ ತಂಡದ ಕ್ಯಾಚಿಂಗ್ ಕಳಪೆಯಾಗಿತ್ತು. ತಂಡದ ಅಗ್ರ ವೇಗದ ಬೌಲರ್ ಅರ್ಷದೀಪ್ ಸಾಕಷ್ಟು ರನ್‌ಗಳನ್ನು ತೆತ್ತರು. ಪ್ರಿಯಾಂಶ್ ಆರ್ಯ ಮತ್ತು ಪ್ರಭಸಿಮ್ರನ್ ಸಿಂಗ್ ಜೋಡಿ ಮೊದಲಿನಂತೆ ರನ್ ಹೊಳೆ ಹರಿಸುತ್ತಿಲ್ಲ. ಇದರಿಂದ ತಂಡಕ್ಕೆ ಭದ್ರ ಬುನಾದಿ ದೊರಕುತ್ತಿಲ್ಲ.

ಅಕ್ಷರ್ ಪಟೇಲ್ ಸಾರಥ್ಯದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಹಿನ್ನಡೆ ಕಾಣುತ್ತಿದ್ದು ಪಾಯಿಂಟ್ ಪಟ್ಟಿಯ ಕೆಳ ಅರ್ಧದಲ್ಲಿದೆ. ಆ ತಂಡ ಕೊನೆಯ ಆರು ಪಂದ್ಯಗಳಲ್ಲಿ ಐದು ಸೋತಿದ್ದು ಪ್ಲೇಆಫ್ ಸಾಧ್ಯತೆ ಕಠಿಣವಾಗಿದೆ.

ತವರಿನ ಪಂದ್ಯಗಳು ಈ ಬಾರಿ ಡೆಲ್ಲಿ ತಂಡವನ್ನು ದುಃಸ್ವಪ್ನದಂತೆ ಕಾಡಿದವು. ನಿಧಾನಗತಿಯ ಮತ್ತು ತಿರುವು ನೀಡುತ್ತಿದ್ದ ಪಿಚ್‌ನಲ್ಲಿ ಬ್ಯಾಟರ್‌ಗಳು ಪರದಾಡಿದರು. ಕೆಲವು ಪಂದ್ಯಗಳಲ್ಲಿ ಕೆ.ಎಲ್.ರಾಹುಲ್ ಉತ್ತಮವಾಗಿ ಆಡಿದ್ದು ಬಿಟ್ಟರೆ, ಯಾರೊಬ್ಬರೂ ಸ್ಥಿರ ಪ್ರದರ್ಶನ ನೀಡಲಿಲ್ಲ.

ಪ್ರಮುಖ ಸ್ಪಿನ್ನರ್ ಕುಲದೀಪ್ ಯಾದವ್ ಯಶಸ್ಸು ಗಳಿಸದಿರುವುದು ತಂಡದ ಮೇಲೆ ಪರಿಣಾಮ ಬೀರುತ್ತಿದೆ. ಆಸ್ಟ್ರೇಲಿಯಾದ ಅನುಭವಿ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ತಂಡವನ್ನು ಬಹಳ ತಡವಾಗಿ ಸೇರಿಕೊಂಡಿದ್ದೂ ಹಿನ್ನಡೆಯಾಯಿತು. ಪಂಜಾಬ್ ಕಿಂಗ್ಸ್ ರೀತಿ ಡೆಲ್ಲಿ ತಂಡದ ಕ್ಷೇತ್ರರಕ್ಷಣೆ ಅಚ್ಚುಕಟ್ಟಾಗಿಲ್ಲ.

ತಾಂತ್ರಿಕವಾಗಿ ಡೆಲ್ಲಿ ಕ್ಯಾಪಿಟಲ್ಸ್ ಪ್ಲೇ ಆಫ್ ರೇಸ್‌ನಿಂದ ಇನ್ನೂ ಹೊರಬಿದ್ದಿಲ್ಲ. ಆದರೆ ಆ ಸಾಧ್ಯತೆ ಕ್ಷೀಣವಾಗಿದೆ.

ಶ್ರೇಯಸ್ ಅಯ್ಯರ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	11	7	4	0	14	1.103
ಎಸ್‌ಆರ್‌ಎಚ್	11	7	4	0	14	0.737
ಜಿ ಟಿ	11	7	4	0	14	0.228
ಪಿಬಿಕೆಎಸ್	10	6	3	1	13	0.571
ಸಿಎಸ್‌ಕೆ	11	6	5	0	12	0.185
ಆರ್ ಆರ್	11	6	5	0	12	0.082
ಕೆಕೆಆರ್	10	4	5	1	9	- 0.169
ಡಿ ಸಿ	11	4	7	0	8	- 1.154
ಎಂ ಐ	11	3	8	0	6	- 0.585
ಎಲ್‌ಎಸ್‌ಜಿ	11	3	8	0	6	- 0.907

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (494 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (21 ವಿಕೆಟ್)

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್ V/s ಡೆಲ್ಲಿ ಕ್ಯಾಪಿಟಲ್ಸ್
ತಾಣ: ಧರ್ಮಶಾಲಾ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ ಒಟ್ಟು ಪಂದ್ಯ 35
ಪಂಜಾಬ್ ಗೆಲುವು 18
ಕ್ಯಾಪಿಟಲ್ಸ್ ಜಯ 17

ಅಖಿಲ ಭಾರತ 19 ವರ್ಷದೊಳಗಿನವರ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ರಾಜ್ಯದ ಅಭಿನವ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಪ್ರಶಸ್ತಿ ವಿಜೇತ ಆಟಗಾರರು. (ಎಡದಿಂದ) ಅಭಿನವ್ ಗರ್ಗ್, ತನ್ವಿ ಪತ್ರಿ, ಬರೂನಿ ಪಾರ್ಶವಾಲ್; ದಿಯಾ ಭೀಮಯ್ಯ, ಅದಿತಿ ದೀಪಕ್ ರಾಜ್; ಪುನೀತ್ ಎಸ್. ಹಾಗೂ ಪವನ್ ಎಸ್.

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಆಟಗಾರ ಅಭಿನವ್ ಗರ್ಗ್ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ಅಖಿಲ ಭಾರತ 19 ವರ್ಷದೊಳಗಿನವರ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಜೂನಿಯರ್ ಪುರುಷರ ಸಿಂಗಲ್ಸ್ ಕಿರೀಟ ಗೆದ್ದುಕೊಂಡರು. ಶೈನಾ ಮಣಿಮುತ್ತು ಜೂನಿಯರ್ ಮಹಿಳೆಯರ ಸಿಂಗಲ್ಸ್‌ನಲ್ಲಿ ರನ್ನರ್ಸ್‌ಅಪ್ ಆದರು.

ನಾಲ್ಕನೇ ಶ್ರೇಯಾಂಕದ ಆಟಗಾರ ಅಭಿನವ್ ಅವರು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಆವರಣದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು ರೋಚಕ ಜಯ ಸಾಧಿಸಿದರು. ಅವರು 8-21, 23-21, 22-20ರಿಂದ ಎಂಟನೇ ಶ್ರೇಯಾಂಕದ ಆಟಗಾರ, ತೆಲಂಗಾಣದ ಜ್ಞಾನದತ್ತು ಟಿ.ಟಿ. ಅವರನ್ನು ಮಣಿಸಿದರು.

ಒಡಿಶಾದ ತನ್ವಿ ಪತ್ರಿ ಅವರು ಜೂನಿಯರ್ ಮಹಿಳೆಯರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಶೈನಾ ಅವರಿಗೆ ಆಘಾತ ನೀಡಿದರು. 15 ವರ್ಷ ವಯಸ್ಸಿನ ತನ್ವಿ 21-17, 21-8ರಿಂದ ನೇರ ಆಟಗಳಲ್ಲಿ ಗೆಲುವು ಸಾಧಿಸಿದರು.

ಶಿವಮೊಗ್ಗದ ಅವಳಿ ಸಹೋದರರಾದ ಪವನ್ ಎಸ್. ಹಾಗೂ ಪುನೀತ್ ಎಸ್. ಅವರು ಜೂನಿಯರ್ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಈ ಜೋಡಿ, ಫೈನಲ್ ಪಂದ್ಯದಲ್ಲಿ 21-19, 21-10ರಿಂದ ಆನಯನ್ ಬೋರಾ (ಅಸ್ಸಾಂ) ಹಾಗೂ ಬಿ.ಜೈಸನ್ (ಕೇರಳ) ಅವರನ್ನು ಮಣಿಸಿತು.

ರಾಜ್ಯದ ದಿಯಾ ಭೀಮಯ್ಯ ಅವರು ಹರಿಯಾಣದ ಬರೂನಿ ಪಾರ್ಶವಾಲ್ ಜೊತೆಗೂಡಿ ಜೂನಿಯರ್ ಮಹಿಳೆಯರ ಡಬಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಅವರು ಫೈನಲ್‌ನಲ್ಲಿ 21-10, 22-20ರಿಂದ ಅಗ್ರ ಶ್ರೇಯಾಂಕದ ಜೋಡಿ, ತಮಿಳುನಾಡಿನ ಅನುಷ್ಕಾ ಜೆನಿಫರ್– ದೀಕ್ಷಿತಾ ಗೋಪಿನಾಥ್ ಸಿಂಗ್ ಅವರಿಗೆ ಆಘಾತ ನೀಡಿದರು.

ರಾಜ್ಯದ ಆಟಗಾರರು ಮಿಶ್ರ ಡಬಲ್ಸ್‌ನಲ್ಲಿಯೂ ಪಾರಮ್ಯ ಮೆರೆದರು. ಎಂಟನೇ ಶ್ರೇಯಾಂಕ ಪಡೆದಿದ್ದ ಪುನೀತ್ ಎಸ್.– ಅದಿತಿ ದೀಪಕ್ ರಾಜ್ ಜೋಡಿ 17-21, 21-16, 21-17ರಿಂದ ಸೈನುನ್‌ಮಾವಿಯಾ ಸೈಲೊ (ಮಿಜೋರಾಂ)– ರಿಷಿತಾ ಪಾಂಡೆ (ತೆಲಂಗಾಣ) ಅವರನ್ನು ಮಣಿಸಿತು.

ಗುಕೇಶ್‌ಗೆ 6ನೇ ಸ್ಥಾನ; ನೀಮನ್ ಚಾಂಪಿಯನ್

ವಾರ್ಸಾ (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಸೂಪರ್ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಚೆಸ್ ಟೂರ್ನಿಯಲ್ಲಿ ಆರನೇ ಸ್ಥಾನ ಗಳಿಸಲಷ್ಟೇ ಶಕ್ತರಾದರು. ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ಅವರು ಒಟ್ಟು 22.5 ಪಾಯಿಂಟ್ಸ್ ಕಲೆಹಾಕಿ, ಶನಿವಾರ ಚಾಂಪಿಯನ್ ಕಿರೀಟ ತಮ್ಮದಾಗಿಸಿಕೊಂಡರು.

ಟ್ರೋಫಿಯ ಜೊತೆ ಸುಮಾರು ₹47 ಲಕ್ಷ ಬಹುಮಾನ ನೀಮನ್ ಪಾಲಾಯಿತು. ಅಮೆರಿಕದ ಫ್ಯಾಬಿಯಾನೊ ಕರುವಾನ (22 ಪಾಯಿಂಟ್ಸ್), ವೆಸ್ಲಿ ಸೋ (21), ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ (18), ಫ್ರಾನ್ಸ್‌ನ ಅಲಿರೇಜಾ ಫಿರೋಝ್ (17.5) ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

ಗ್ರ್ಯಾಂಡ್‌ಚೆಸ್ ಟೂರ್‌ನ ಭಾಗವಾದ ಈ ಟೂರ್ನಿಯಲ್ಲಿ ಗುಕೇಶ್ ಸಂಭವನೀಯ 36ರಲ್ಲಿ 17 ಪಾಯಿಂಟ್ಸ್ ಗಳಿಸಿದರು. ಈ ಟೂರ್ನಿಯಲ್ಲಿ ರ‍್ಯಾಪಿಡ್ ಪಂದ್ಯದ ಗೆಲುವಿಗೆ 2 ಮತ್ತು ಬ್ಲಿಟ್ಝ್ ಆಟದ ಗೆಲುವಿಗೆ ಒಂದು ಪಾಯಿಂಟ್ ನೀಡಲಾಗುತ್ತದೆ. ಪ್ರತಿಯೊಬ್ಬ ಆಟಗಾರ 9 ರ‍್ಯಾಪಿಡ್ ಮತ್ತು 18 ಬ್ಲಿಟ್ಝ್ ಆಟಗಳನ್ನು ಆಡಬೇಕಿತ್ತು.

ಯೂಸ್ಟಿನಾ ಮಿಕುಲ್‌ಸ್ಕೀಟೆ (ಬಲ) ಹಾಗೂ ಝುರ್ಝುನಾ ಪಾವ್ಲಿಕೊವಾಸ್ಕಾ

ಯೂಸ್ಟಿನಾಗೆ ಸಿಂಗಲ್ಸ್ ಕಿರೀಟ

ಪ್ರಜಾವಾಣಿ ವಾರ್ತೆ

ತುಮಕೂರು: ಅಗ್ರ ಶ್ರೇಯಾಂಕದ ಯೂಸ್ಟಿನಾ ಮಿಕುಲ್‌ಸ್ಕೀಟೆ ಅವರು ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೆನಿಸ್ ಟೂರ್ನಿಯಲ್ಲಿ ಭಾನುವಾರ ಬೆವರಿಳಿಸದೇ ಪ್ರಶಸ್ತಿ ಗೆದ್ದುಕೊಂಡರು. ಅವರ ಫೈನಲ್ ಎದುರಾಳಿಯಾಗಿದ್ದ ಎರಡನೇ ಶ್ರೇಯಾಂಕದ ಝುರ್ಝುನಾ ಪಾವ್ಲಿಕೊವಾಸ್ಕಾ ಅವರು ಗಾಯದ ಕಾರಣ ಒಂದೇ ಗೇಮ್ ಮಾತ್ರ ಆಡಿ ಪಂದ್ಯ ಬಿಟ್ಟುಕೊಟ್ಟರು.

ಭುಜದ ನೋವು ಕಾಡುತ್ತಿದ್ದರೂ ಅವರು ತುಮಕೂರು ವಿಶ್ವವಿದ್ಯಾಲಯ ಆವರಣದಲ್ಲಿನ ಜಿಲ್ಲಾ ಟೆನಿಸ್ ಸಂಸ್ಥೆ ಕ್ರೀಡಾಂಗಣದ ಅಂಕಣಕ್ಕೆ ಬಂದರು. ಆದರೆ ಒಂದು ಗೇಮ್ ಆಡಿದ ನಂತರ ಅವರಿಗೆ ಆಟ ಮುಂದುವರಿಸಲಾಗಲಿಲ್ಲ. ಫೈನಲ್‌ನಲ್ಲಿ ಅಗ್ರ ಎರಡು ಶ್ರೇಯಾಂಕದ ಆಟಗಾರ್ತಿಯರ ನಡುವೆ ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರು ನಿರಾಸೆಗೆ ಒಳಗಾದರು.

ಇದು ಲಿಥುವೇನಿಯಾದ ಮಿಕುಲ್‌ಸ್ಕೀಟೆ ಅವರಿಗೆ ಎಂಟನೇ ಐಟಿಎಫ್ ಪ್ರಶಸ್ತಿಯಾಗಿದೆ. ಟ್ರೋಫಿ ಜೊತೆಗೆ ಅವರು ₹4.58 ಲಕ್ಷ ನಗದು ಬಹುಮಾನ ಪಡೆದರು. ಜೊತೆಗೆ 35 ಡಬ್ಲ್ಯುಟಿಎ ರ‍್ಯಾಂಕಿಂಗ್ ಪಾಯಿಂಟ್ ಸಹ ಅವರ ಖಾತೆಗೆ ಸೇರಿದವು.

ಎರಡನೇ ಸ್ಥಾನಕ್ಕಾಗಿ ಪಾವ್ಲಿಕೊವಾಸ್ಕ ಅವರು ₹2.49 ಲಕ್ಷ ಬಹುಮಾನದ ಜೊತೆಗೆ 23 ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸಿದರು. ಗಾಯದ ಸಮಸ್ಯೆಯಿಂದಾಗಿ ಪಾವ್ಲಿಕೊವಾಸ್ಕಾ ಅವರು ಶನಿವಾರ ಡಬಲ್ಸ್ ಫೈನಲ್‌ನಲ್ಲಿಯೂ ಆಡಿರಲಿಲ್ಲ.

ಶಾಟ್‌ಗನ್: ನೀರೂ–ವಿವಾನ್ ಜೋಡಿಗೆ ಕಂಚು

ಭಾರತದ ವಿವಾನ್ ಕಪೂರ್ ಹಾಗೂ ನೀರೂ ಧಂಡಾ

ನವದೆಹಲಿ (ಪಿಟಿಐ): ಭಾರತದ ನೀರೂ ಧಂಡಾ ಹಾಗೂ ವಿವಾನ್ ಕಪೂರ್ ಜೋಡಿಯು ಕಜಾಕಸ್ತಾನದ ಅಲ್ಮಾಟಿಯಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ (ಶಾಟ್‌ಗನ್) ವಿಶ್ವಕಪ್‌ನ ಟ್ರ್ಯಾಪ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾನುವಾರ ಕಂಚಿನ ಪದಕಕ್ಕೆ ಗುರಿಯಿಟ್ಟರು.

ನೀರೂ ಹಾಗೂ ವಿವಾನ್ ಅವರು ಫೈನಲ್‌ನ ಮೊದಲ ಮೂರು ಸುತ್ತುಗಳಲ್ಲಿ 30 ಗುರಿಗಳ ಪೈಕಿ 24ರಲ್ಲಿ ಯಶಸ್ವಿಯಾದರು. ಚೀನಾ ತೈಪೆಯ ಕುನ್–ಪಿ ಯಾಂಗ್ ಹಾಗೂ ವಾನ್–ಯೂ ಲ್ಯೂ ಜೋಡಿ ನಾಲ್ಕು ಸುತ್ತುಗಳಿಂದ 36 ಅಂಕ ಗಳಿಸಿ, ವಿಶ್ವದಾಖಲೆಯೊಂದಿಗೆ ಸ್ವರ್ಣ ಜಯಿಸಿತು. ಇಟಲಿಯ ಸಿಲ್ವಾನಾ ಸ್ಟಾಂಕೊ– ಮೌರೊ ಡಿ ಫಿಲಿಪ್ಸ್ ಜೋಡಿ ನಾಲ್ಕು ಸುತ್ತುಗಳ 40 ಗುರಿಗಳ ಪೈಕಿ 33ರಲ್ಲಿ ಯಶಸ್ಸು ಗಳಿಸಿತು. ಅದರೊಂದಿಗೆ ರಜತ ಪದಕಕ್ಕೆ ಕೊರಳೊಡ್ಡಿತು.

ಮಧ್ಯಪ್ರದೇಶದ ನೀರೂ ಹಾಗೂ ರಾಜಸ್ಥಾನದ ವಿವಾನ್ ಅವರು ಕ್ವಾಲಿಫಿಕೇಶನ್ ಸುತ್ತಿನಲ್ಲಿ 143 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದಿದ್ದರು. ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತ ಸ್ಟಾಂಕೊ– ಮಾಜಿ ವಿಶ್ವ ಚಾಂಪಿಯನ್ ಮೌರೊ ಜೋಡಿ (145 ಅಂಕ) ಅಗ್ರಸ್ಥಾನದೊಂದಿಗೆ ಹಾಗೂ ಯಾಂಗ್– ವಾನ್ ಜೋಡಿ (143) ಮೂರನೇ ಸ್ಥಾನದೊಂದಿಗೆ ಫೈನಲ್ ಸುತ್ತು ಪ್ರವೇಶಿಸಿದ್ದವು.

ಕಣದಲ್ಲಿದ್ದ ಭಾರತದ ಮತ್ತೊಂದು ಜೋಡಿ ಅಧ್ವರ್ ರಿಜ್ವಿ– ಪ್ರಗತಿ ದುಬೆ (130 ಅಂಕ) 23ನೇ ಸ್ಥಾನ ಪಡೆಯಿತು.

ರಿಕರ್ವ್: ಮಹಿಳಾ ತಂಡಕ್ಕೆ ಚಿನ್ನ

ಶಾಂಘೈ (ಪಿಟಿಐ): ಅನುಭವಿಗಳಾದ ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಹದಿಹರೆಯದ ಕುಂಕುಮ್ ಮೊಹದ್ ಅವರನ್ನು ಒಳಗೊಂಡಿದ್ದ ಭಾರತ ರಿಕರ್ವ್ ತಂಡ ತೀವ್ರ ಹೋರಾಟದ ಫೈನಲ್‌ನಲ್ಲಿ ಆತಿಥೇಯ ಚೀನಾ ತಂಡವನ್ನು ಸೋಲಿಸಿ ಆರ್ಚರಿ ವಿಶ್ವಕಪ್ ಸ್ಟೇಜ್ 2 ಟೂರ್ನಿಯಲ್ಲಿ ಚಿನ್ನ ಗೆದ್ದುಕೊಂಡಿತು.

ಅದೃಷ್ಟಗಳ ಏರಿಳಿತ ಕಂಡ ಫೈನಲ್‌ನಲ್ಲಿ ಭಾರತ ಶೂಟೌಟ್ ನಂತರ 5–4 (28–26) ರಿಂದ ಫೆವರಿಟ್ ಎನಿಸಿದ್ದ ಚೀನಾ ತಂಡವನ್ನು ಸೋಲಿಸಿತು. ನಾಲ್ಕು ಸೆಟ್‌ಗಳ ನಿಯಮಿತ ಅವಧಿ 4–4 ರಿಂದ ಸಮನಾಗಿತ್ತು.

ಇದರೊಂದಿಗೆ ಈ ವಿಶ್ವಕಪ್‌ನಲ್ಲಿ ಭಾರತ ಕೇವಲ ಎರಡು ಪದಕಗಳೊಂದಿಗೆ ತವರಿಗೆ ಮರಳಬೇಕಾಯಿತು. ಸಾಹಿಲ್ ಜಾಧವ್ ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು.

ಸಿಮ್ರನ್‌ಜೀತ್‌ಗೆ ನಿರಾಸೆ: ರಿಕರ್ವ್ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಭಾರತದ ಸಿಮ್ರನ್‌ಜೀತ್ ಕೌರ್ ಅವರು ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಬಿಲ್ಗಾರ್ತಿ ಕಾಂಗ್ ಚೇಯೊಂಗ್ (ದಕ್ಷಿಣ ಕೊರಿಯಾ) ಅವರಿಗೆ ಮಣಿದು ನಿರಾಸೆ ಅನುಭವಿಸಿದರು.

ಕಂಚಿನ ಪದಕಕ್ಕೆ ನಡೆದ ಪ್ಲೇ ಆಫ್‌ನಲ್ಲೂ ಅವರಿಗೆ ಗೆಲುವು ಒಲಿಯಲಿಲ್ಲ. ದಕ್ಷಿಣ ಕೊರಿಯಾ ಇನ್ನೊಬ್ಬ ಬಿಲ್ಗಾರ್ತಿ ಜಾಂಗ್ ಮಿನ್‌ಹೀ ಅವರಿಗೆ ಮಣಿದರು.

ಭಾರತದ ಅಂಕಿತಾ ಭಕತ್, ದೀಪಿಕಾ ಕುಮಾರಿ ಹಾಗೂ ಕುಂಕುಮ್ ಮೊಹದ್

ಏಷ್ಯನ್ ವೇಟ್‌ಲಿಫ್ಟಿಂಗ್ ಇಂದಿನಿಂದ

ಗಾಂಧಿನಗರ (ಪಿಟಿಐ): ಭಾರತದ ವೇಟ್‌ಲಿಫ್ಟರ್‌ಗಳು ಸೋಮವಾರ ಇಲ್ಲಿ ಆರಂಭವಾಗುವ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತವರಿನ ಬೆಂಬಲದ ಲಾಭ ಪಡೆದು ಉತ್ತಮ ನಿರ್ವಹಣೆ ತೋರುವ ವಿಶ್ವಾಸದಲ್ಲಿದ್ದಾರೆ. ಮುಂಬರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಕ್ರೀಡೆಗಳಿಗೆ ಸಿದ್ಧತೆ ನಡೆಸಲು ಅವರಿಗೆ ಈ ಚಾಂಪಿಯನ್‌ಷಿಪ್ ವೇದಿಕೆಯಾಗಿದೆ.

ಕಾಮನ್‌ವೆಲ್ತ್ ಕ್ರೀಡೆಗಳು ಜುಲೈ 23 ರಿಂದ ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ನಿಗದಿಯಾಗಿದೆ. ಏಷ್ಯನ್ ಕ್ರೀಡೆಗಳು ಸೆ. 19ರಿಂದ ಜಪಾನ್‌ನಲ್ಲಿ ನಡೆಯಲಿದೆ. ಹೀಗಾಗಿ ಈ ಚಾಂಪಿಯನ್‌ಷಿಪ್‌ಗೆ ಹೆಚ್ಚಿನ ಮಹತ್ವ ಬಂದಿದೆ.

ಒಂದು ವಾರ ನಡೆಯುವ ಈ ಚಾಂಪಿಯನ್‌ಷಿಪ್ ಪ್ರಬಲ ಕಣ ಹೊಂದಿದ್ದು, ಭಾರತವು ಅನುಭವಿ ಮತ್ತು ಯುವ ಪ್ರತಿಭೆಗಳನ್ನು ಹೊಂದಿದೆ. 16 ಮಂದಿಯ ತಂಡದಲ್ಲಿ ಎಂಟು ಪುರುಷರು ಮತ್ತು ಎಂಟು ಮಹಿಳೆಯರು ಇದ್ದಾರೆ. ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಭುಜದ ನೋವಿನಿಂದಾಗಿ ಇಲ್ಲಿ ಭಾಗವಹಿಸುತ್ತಿಲ್ಲ. ಹೀಗಾಗಿ ಬಿಂದ್ಯಾರಾಣಿ ದೇವಿ, ಹರ್ಜಿಂದರ್ ಕೌರ್ ಮತ್ತು ಲವ್‌ಪ್ರೀತ್ ಸಿಂಗ್ ಅವರ ಪ್ರದರ್ಶನದ ಮೇಲೆ ಕಣ್ಣಿದೆ.

ಯುವಪ್ರತಿಭೆಗಳಾದ ವೇದವ್ರತ ಭರಾಲಿ ಮತ್ತು ಜ್ಞಾನೇಶ್ವರಿ ಯಾದವ್ ಅವರ ಮೇಲೂ ಉತ್ತಮ ಪ್ರದರ್ಶನದ ನಿರೀಕ್ಷೆಯಿದೆ.

ಚೀನಾದಲ್ಲಿ ನಡೆದ ಈ ಹಿಂದಿನ ಆವೃತ್ತಿಯಲ್ಲಿ ಭಾರತದ ಇಬ್ಬರು ಮಾತ್ರ ಭಾಗವಹಿಸಿದ್ದು, ಬರಿಗೈಯಲ್ಲಿ ಮರಳಿದ್ದರು.

ಏಪ್ರಿಲ್‌ನಲ್ಲಿ ನಿಗದಿಯಾಗಿದ್ದ ಈ ಕೂಟವನ್ನು ಪಶ್ಚಿಮ ಏಷ್ಯಾದಲ್ಲಿ ತಲೆದೋರಿದ್ದ ಸಂಘರ್ಷದ ಸ್ಥಿತಿಯಿಂದಾಗಿ ಮುಂದೂಡಲಾಗಿತ್ತು.

30 ರಾಷ್ಟ್ರಗಳ 170 ಮಂದಿ ಕಣಕ್ಕಿಳಿಯಲಿದ್ದಾರೆ. ಇವರಲ್ಲಿ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ನರು ಇದ್ದಾರೆ. ಚೀನಾದ ಲಿಯು ಹುವಾನ್‌ಹುವಾ ಅವರು 102 ಕೆ.ಜಿ. ವಿಭಾಗದಲ್ಲಿ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಆಗಿದ್ದಾರೆ.



ಹರ್ಜಿಂದರ್ ಕೌರ್ ಪಿಟಿಐ ಚಿತ್ರ

ಭಾರತ ತಂಡ: ಮಹಿಳೆಯರು: ಕೋಮಲ್ ಕೊಹರ್ (48 ಕೆ.ಜಿ), ಜ್ಞಾನೇಶ್ವರಿ ಯಾದವ್ (53 ಕೆ.ಜಿ), ಕೊಯೆಲ್ ಬರ್ (53 ಕೆಜಿ.), ಬಿಂದ್ಯಾರಾಣಿ ದೇವಿ (58 ಕೆ.ಜಿ), ನಿರುಪಮಾ ದೇವಿ (63 ಕೆ.ಜಿ), ಹರ್ಜಿಂದರ್ ಕೌರ್ (69 ಕೆ.ಜಿ), ಸಂಜನ (77 ಕೆ.ಜಿ), ವಂಶಿತಾ ವರ್ಮಾ (86 ಕೆ.ಜಿ), ಮರಿನಾ ದೇವಿ (+86 ಕೆ.ಜಿ)
ಪುರುಷರು: ರಿಷಿಕಾಂತ ಸಿಂಗ್‌ಚನಾಬಮ್ (60 ಕೆ.ಜಿ), ಎಂ.ರಾಜಾ (65 ಕೆ.ಜಿ), ಪೆಸಿ ಚಾರು (65 ಕೆ.ಜಿ), ಅಜಿತ್ ನಾರಾಯಣ (71 ಕೆ.ಜಿ), ಮಾಧವನ್ ತಿರುಮುರುಗನ್ (71 ಕೆ.ಜಿ), ವೇದವ್ರತ ಬರಾಲಿ (79 ಕೆ.ಜಿ), ಬಾಬು ವಲ್ಲೂರಿ ಅಜಯ (79 ಕೆ.ಜಿ), ಅಭಿಷೇಕ್ ಸುರೇಶನಿಪಾಣೆ (88 ಕೆ.ಜಿ), ಹರಚರಣ್ ಸಿಂಗ್ (110 ಕೆ.ಜಿ), ಪರ್ವ್ ಚೌಧರಿ (94 ಕೆ.ಜಿ), ಲವ್‌ಪ್ರೀತ್ ಸಿಂಗ್ (+110 ಕೆ.ಜಿ).